ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 17 ಶನಿವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 62 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4







ಮೈಸೂರಲ್ಲಿ ಇಂದು ಯೋಗ ದರ್ಶನ, ಯೋಗ ಥಾನ್

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಸರ್ಕಾರಿ ಯೋಗ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಸಾರ್ವಜನಿಕರಲ್ಲಿ ಜಾಗೃತಿ



ಮೈಸೂರು, ಜೂ.16(ಆರ್‌ಕೆ)–ಜೂನ್ 21ರಂದು ನಡೆಯಲಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ನಾಳೆ (ಜೂ.17) ಬೆಳಗ್ಗೆ ಮೈಸೂರಿನ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಯೋಗ ಮತ್ತು ಯೋಗ ಥಾನ್ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾ ವಿದ್ಯಾಲಯ ಹಾಗೂ ಆಸ್ಪತ್ರೆ ವತಿಯಿಂದ ಶನಿವಾರ ಬೆಳಗ್ಗೆ 6 ರಿಂದ 8 ಗಂಟೆವರೆಗೆ ನಡೆಯುವ ಕಾರ್ಯಕ್ರಮದಲ್ಲಿ ಸಂಸ್ಥೆಯ 300 ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಹಾಗೂ ಸಿಬ್ಬಂದಿಗಳು ಪಾಲ್ಗೊಂಡು ಪ್ರಾಣಾಯಾಮ, ಧ್ಯಾನ, ವಿವಿಧ ಯೋಗಾಸನಗಳ ಪ್ರದರ್ಶನದ ಮೂಲಕ ಯೋಗದ ಮಹತ್ವದ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವರು.

ಮೈಸೂರಿನ ಯೋಗ ತರಬೇತಿ ಸಂಸ್ಥೆಗಳು, ಕಾಲೇಜು ವಿದ್ಯಾರ್ಥಿಗಳು, ಯೋಗಾಸಕ್ತರಿಗೂ ಯೋಗ ದರ್ಶನಕ್ಕೆ ಆಹ್ವಾನ ನೀಡಲಾಗಿದ್ದು, ಜೂನ್ 21ರಂದು ನಡೆಯಲಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಸಾಮೂಹಿಕ ಯೋಗ ಪ್ರದರ್ಶನಕ್ಕೆ ಪೂರ್ವಾಭ್ಯಾಸಕ್ಕೂ ಸಿದ್ಧತೆ ಮಾಡಲಾಗಿದೆ ಎಂದು ಪ್ರಕೃತಿ ಚಿಕಿತ್ಸೆ, ಯೋಗ ಮತ್ತು ಆಯುರ್ವೇದ ಮಹಾ ವಿದ್ಯಾಲಯದ ಪ್ರಾಂಶುಪಾಲ ಡಾ. ಗಜಾನನ ಹೆಗಡೆ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರು ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯ್ತಿ, ಆಯುಷ್ ಇಲಾಖೆ, ವಿವಿಧ ಯೋಗ ಶಿಕ್ಷಣ ಸಂಸ್ಥೆಗಳು, ಸಂಘ–ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗವಹಿಸಿ ಸಾಮೂಹಿಕ ಯೋಗ ಪ್ರದರ್ಶನ ನಡೆಸುವರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಸಂಸದ ಪ್ರತಾಪ್ ಸಿಂಹ, ಮೇಯರ್ ಶಿವಕುಮಾರ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ತನ್ವೀರ್ ಸೇಠ್, ಜಿ.ಟಿ.ದೇವೇಗೌಡ ಸೇರಿದಂತೆ ಜನಪ್ರತಿನಿಧಿಗಳು, ಅಧಿಕಾರಿಗಳು ಯೋಗ ದರ್ಶನ ಮತ್ತು ಯೋಗ ಥಾನ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಶಕ್ತಿ ಯೋಜನೆಯಿಂದ ಬಸ್‌ಗಳು ರಷ್; ಫುಟ್‌ಬೋರ್ಡ್‌ನಲ್ಲೇ ನೇತಾಡುತ್ತಾ ಪ್ರಯಾಣಿಸುವ ವಿದ್ಯಾರ್ಥಿಗಳು



ಮೈಸೂರು, ಜೂನ್ 16(ಸಿಎನ್)–ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆಗೆ ಮಹಿಳೆಯರಿಂದ ಉತ್ತಮ ಸ್ಪಂದನೆ ಸಿಗುತ್ತಿದೆ. ಆದರೆ ಈಗ ಮತ್ತೊಂದು ಸಮಸ್ಯೆ ಎದುರಾಗುತ್ತಿದೆ.

ಒಂದು ಬಸ್‌ನಲ್ಲಿ ಗರಿಷ್ಠ 75 ಮಂದಿ ಪ್ರಯಾಣಿಸಬಹುದು. ಆದರೆ ಈಗ 100ಕ್ಕೂ ಹೆಚ್ಚು ಮಂದಿ, ವಿದ್ಯಾರ್ಥಿಗಳು ಅಪಾಯಕಾರಿಯಾಗಿ ನೇತಾಡುತ್ತಾ ಪ್ರಯಾಣಿಸಿದ ಘಟನೆ ಮೈಸೂರಿನ ವಿವಿಧೆಡೆ ಕಂಡು ಬಂದಿದೆ. ಮಹಾರಾಣಿ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜಿನ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ನರ್ಸಿಂಗ್, ಬಿಇ.ಡಿ ಕಾಲೇಜಿನ ವಿದ್ಯಾರ್ಥಿಗಳು ನಿತ್ಯ ಬೆಳಗ್ಗೆ 8 ರಿಂದ 9 ಗಂಟೆಯೊಳಗೆ ಕಾಲೇಜಿಗೆ ತೆರಳುವ ತರಾತುರಿಯಲ್ಲಿ ಇರುತ್ತಾರೆ. ಹೀಗಾಗಿ ಬಸ್‌ಗಳಲ್ಲಿ ನುಗ್ಗುತ್ತಿದ್ದಾರೆ. ಸಂಜೆ ಕಾಲೇಜು ಮುಗಿಸಿದ ಬಳಿಕವು ಯಥಾಸ್ಥಿತಿಯಲ್ಲಿ ಹೀಗೆ ಬಾಗಿಲಲ್ಲೇ ನೇತಾಡುತ್ತಾ ಸಾಗುವ ದೃಶ್ಯ ನೋಡುಗರನ್ನು ಭಯ ಬೀಳಿಸುತ್ತಿದೆ.

> “ಫ್ರೀ ಬಸ್ ಘೋಷಣೆ ಬಳಿಕ ಪ್ರತಿದಿನವೂ ಕೂಡ ಇದೇ ರೀತಿಯ ಸಮಸ್ಯೆಯಿದೆ. ನಮಗೆ ಹೆಚ್ಚುವರಿ ಬಸ್‌ಗಳ ಅಗತ್ಯವಿದೆ. ವಿದ್ಯಾರ್ಥಿಗಳು ಕಾಲೇಜುಗಳಿಗೆ ಸರಿಯಾದ ಸಮಯಕ್ಕೆ ಹಾಜರಾಗಲು ಹಾಗೂ ಮನೆಗಳಿಗೆ ಸೂಕ್ತ ಸಮಯಕ್ಕೆ ತೆರಳಲು ಆಗುತ್ತಿಲ್ಲ. ಹಾಗಾಗಿ ಹೆಚ್ಚುವರಿ ಬಸ್ ನಿಯೋಜನೆ ಅಥವಾ ಇರುವ ಬಸ್‌ಗಳನ್ನು ಕಾಲೇಜು ಭಾಗಗಳ ಕಡೆ ಹೆಚ್ಚು ಸಂಚರಿಸುವಂತೆ ಮಾಡಿದರೆ ಸಾಕು ಎಂದು 'ಮೈಸೂರು ಮಿತ್ರ'ನಲ್ಲಿ ವಿದ್ಯಾರ್ಥಿನಿಯೊಬ್ಬರು ದೂರಿದರು. ಬರುವ ಎಲ್ಲಾ ಬಸ್‌ಗಳು ಸಹ ಭರ್ತಿಯಾಗಿ ಬರುತ್ತವೆ. ತಡವಾಗುತ್ತೆ ಎಂಬ ಕಾರಣಕ್ಕೆ ಅಂತಹ ಬಸ್‌ಗಳಲ್ಲೇ ತೆರಳುವ ಅನಿವಾರ್ಯ ಎದುರಾಗಿದೆ. ಶೀಘ್ರವೇ ಮತ್ತಷ್ಟು ಬಸ್‌ಗಳನ್ನು ಬಿಟ್ಟರೆ ಇಂತಹ ಸಮಸ್ಯೆ ಇರುವುದಿಲ್ಲ. ಒಮ್ಮೊಮ್ಮೆ ಬೇಸತ್ತು ಕಿಲೋ ಮೀಟರ್‌ಗಟ್ಟಲೇ ನಡೆದುಕೊಂಡು ಹೋಗಿದ್ದು ಉಂಟು ಇದರಿಂದ ಮನೆಯಲ್ಲಿ ಬೈಸಿಕೊಂಡಿದ್ದೇನೆ.
>
> –ಕಾವ್ಯಾ ವಿದ್ಯಾರ್ಥಿನಿ

ವಿದ್ಯಾರ್ಥಿಗಳಿಗೆ ಸಣ್ಣಪುಟ್ಟ ಗಾಯ: ಕಾಲೇಜಿಗೆ ತೆರಳುವ ಗಡಿಬಿಡಿಯಲ್ಲಿ ವಿದ್ಯಾರ್ಥಿಗಳು ಕಿಕ್ಕಿರಿದು ಬಸ್‌ನಲ್ಲಿ ತೆರಳುತ್ತಿದ್ದಾರೆ. ಈ ಸಂದರ್ಭದಲ್ಲಿ ಒಂದಿಬ್ಬರು ಆಯತಪ್ಪಿ ಬಿದ್ದು ಗಾಯಗೊಂಡಿರುವುದು ಸಾಮಾನ್ಯವಾಗಿದೆ. ವ್ಯಾಸಂಗಕ್ಕೆಂದು ಗ್ರಾಮೀಣ ಭಾಗದಿಂದ ಬರುವ ವಿದ್ಯಾರ್ಥಿಗಳಿಗೆ, ಸಾರಿಗೆ ಬಸ್ ಜೀವಾಳವಾಗಿದ್ದು, ಜೊತೆಗೆ ಉಚಿತ ಸಾರಿಗೆ ವ್ಯವಸ್ಥೆಯಿಂದ ಸರ್ಕಾರಿ ಬಸ್‌ಗಳಲ್ಲೇ ಪ್ರಯಾಣ ಹೆಚ್ಚಿದೆ. ಹಾಗಾಗಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಾಲೇಜು ಭಾಗಗಳಲ್ಲಿ ಹೆಚ್ಚಿನ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸುವ ಅಗತ್ಯವಿದೆ.

ಟಿಸಿ ಸಭೆ ಕರೆದು ಕ್ರಮಕ್ಕೆ ಸೂಚಿಸುತ್ತೇನೆ: ವಿದ್ಯಾರ್ಥಿಗಳು ಭರ್ತಿಯಾದ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದಾರೆ, ಸ್ವಲ್ಪ ಕಾಯ್ದರೆ ಮತ್ತೊಂದು ಬಸ್ ಬರುತ್ತೆ ಅದರಲ್ಲಿ ತೆರಳಬಹುದು. ಆದರೆ ವಿದ್ಯಾರ್ಥಿಗಳು ಹಾಗೇ ಮಾಡಲ್ಲ. ಫುಟ್‌ಬೋರ್ಡ್ ಬಳಿ ಅಪಾಯಕಾರಿ ಪ್ರಯಾಣದ ಬಗ್ಗೆ ಸಾಕಷ್ಟು ದೂರು ಬಂದಿವೆ. ಟಿಸಿ ಸಭೆ ಕರೆದು ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸುತ್ತೇನೆ ಎಂದು ಪ್ರಭಾರ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಮರಿಗೌಡ ಮಾಹಿತಿ ನೀಡಿದರು.

ಕರ್ನಾಟಕವನ್ನು ಮಿನಿ ಪಾಕಿಸ್ತಾನ ಮಾಡಲು ಕಾಂಗ್ರೆಸ್ ಹೊರಟಂತಿದೆ

● ಮಾಜಿ ಸಚಿವ ಆರ್.ಅಶೋಕ್ ಗಂಭೀರ ಆರೋಪ ● ಒಂದು ಸಮುದಾಯ ಓಲೈಸಲು ಕಾಯ್ದೆಯಲ್ಲಿ ಬದಲಾವಣೆ



ಬೆಂಗಳೂರು, ಜೂ. 16(ಕೆಎಂಶಿ)–ಕಾಂಗ್ರೆಸ್ ಪಕ್ಷವು ಕರ್ನಾಟಕವನ್ನು ಮಿನಿ ಪಾಕಿಸ್ತಾನ ಮಾಡಲು ಹೊರಟಂತಿದೆ ಎಂದು ರಾಜ್ಯದ ಮಾಜಿ ಸಚಿವ ಆರ್. ಅಶೋಕ್ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಟಿಪ್ಪುವಿನ ಮತಾಂತರದ ಸಿದ್ಧಾಂತಕ್ಕೆ ಪೂರಕವಾಗಿ ಕಾಂಗ್ರೆಸ್ ಪಕ್ಷದ ರಾಜ್ಯ ಸರ್ಕಾರ ವರ್ತಿಸುತ್ತಿದೆ. ಕಾಂಗ್ರೆಸ್ ಪಕ್ಷವು ಪಿಎಫ್‌ಐ, ಕೆಎಫ್‌ಡಿ ಪರವಾಗಿದೆಯೇ ಎಂದು ಪ್ರಶ್ನಿಸಿದರು. ಈ ರೀತಿ ಜನಾದೇಶದ ದುರ್ಬಳಕೆಗೆ ಬಿಜೆಪಿ ಅವಕಾಶ ಕೊಡುವುದಿಲ್ಲ ಎಂದು ಎಚ್ಚರಿಸಿದರು. ರಾಜ್ಯದಲ್ಲಿ ನೀವು ಯಾರ ಪರ ಇದ್ದೀರಿ ಎಂದು ಪ್ರಶ್ನಿಸಿದ ಅವರು, 30ರಿಂದ 40 ಲಕ್ಷಕ್ಕೂ ಅಧಿಕ ಹಿಂದೂಗಳು ದುಡ್ಡಿನ ಆಮಿಷಕ್ಕೆ ಒಳಗಾಗಿ ಲವ್ ಜಿಹಾದ್, ಆಸ್ಪತ್ರೆಯಲ್ಲಿ ಬಿಲ್ ಕಟ್ಟಲು ಆಗದೆ ಮತಾಂತರ ಆದ ಮಾಹಿತಿ ಇದೆ ಎಂದು ವಿವರಿಸಿದರು. ಕಾಂಗ್ರೆಸ್ ಯಾರಿಗಾಗಿ ಈ ಕಾಯ್ದೆ ತರುತ್ತಿದೆ ಎಂದ ಅವರು, ಬಲವಂತದ ಮತಾಂತರ ಸಲ್ಲದು ಎಂಬ ಭಾವನೆ ಹಾಗೂ ನಿಲುವನ್ನು ಮಹಾತ್ಮ ಗಾಂಧೀಜಿ ಮತ್ತು ಡಾ. ಅಂಬೇಡ್ಕರ್ ಅವರು ಹೊಂದಿದ್ದರು. ಮತಾಂತರ ಆಗುವುದಾದರೆ ಕಾನೂನು ಪ್ರಕಾರ ಆಗಬೇಕೆಂಬ ನಮ್ಮ ಕಾಯ್ದೆಯಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು.

ಟಿಪ್ಪು ಕೊಡಗಿನಲ್ಲಿ 50ರಿಂದ 60 ಸಾವಿರ ಜನರನ್ನು ಮತಾಂತರ ಮಾಡಿದ್ದ. ಆತನನ್ನು ವೈಭವೀಕರಿಸಿ ಅವನ ಜಯಂತಿ ಮಾಡಿದರು. ಗಲಭೆಗೆ ಕಾರಣರಾದರು ಎಂದು ಟೀಕಿಸಿದರು. ಈ ಕಾಯ್ದೆ ವಾಪಸ್ ಪಡೆಯಬಾರದು ಎಂದು ಬಿಜೆಪಿ ಆಗ್ರಹಿಸುತ್ತದೆ. ಮತಬ್ಯಾಂಕಿಗಾಗಿ ಒಂದು ಸಮುದಾಯವನ್ನು ಓಲೈಸಲು ಈ ಕಾಯ್ದೆ ಹಿಂದಕ್ಕೆ ಪಡೆಯುತ್ತಿದ್ದಾರೆ. ಕಾಂಗ್ರೆಸ್ ವೋಟಿಗೋಸ್ಕರ ಯಾವ ಹಂತಕ್ಕಾದರೂ ಹೋಗುತ್ತದೆ ಎಂದು ವ್ಯಂಗ್ಯವಾಡಿದರು.

ಹಿಂದೆ ರೈತರು ಬೆಳೆದ ಉತ್ಪನ್ನಗಳನ್ನು ಮಾರಾಟ ಮಾಡಲು ಎಪಿಎಂಸಿ ಆರಂಭವಾಗಿತ್ತು. ಅದೊಂದು ರೀತಿಯ ಗುತ್ತಿಗೆ ಕೊಡುವ ಪ್ರಯತ್ನ. ದಲ್ಲಾಳಿಗಳು ಗೇಟಿನಲ್ಲೇ ನಿಂತು ಖರೀದಿಸಿ ಲಾಭ ಮಾಡಿಕೊಳ್ಳುವ ವ್ಯವಸ್ಥೆ ಅದು. ನಾವು ಮಾಡಿದ ತಿದ್ದುಪಡಿಯಡಿ ದೇಶದ ಎಲ್ಲಿ ಬೇಕಾದರೂ ಮಾರಾಟ ಮಾಡುವ ಅವಕಾಶ ಇದೆ. ರೈತರಿಗೆ ಸಾವಿರಾರು ಕೋಟಿ ಆದಾಯ ಸಿಗಬೇಕೇ ಅಥವಾ ಎಪಿಎಂಸಿಗೆ ಲಾಭ ಆಗಬೇಕೇ ದಲ್ಲಾಳಿಗಳ ಲಾಭ ಹೆಚ್ಚಬೇಕೇ ಎಂದು ಪ್ರಶ್ನಿಸಿದರು.

ದಲ್ಲಾಳಿಗಳಿಗೆ ಉಪಯೋಗ ಮಾಡುವ ಹುನ್ನಾರ ಇದರಡಿ ಇದೆ. ತೂಕದಲ್ಲೇ ವ್ಯತ್ಯಾಸ ಮಾಡುತ್ತಿದ್ದರು. ಆದರೆ, ನಾವು ತಕ್ಕಡಿಯನ್ನು ರೈತರ ಕೈಗೆ ಕೊಟ್ಟಿದ್ದೆವು. ಕಾಂಗ್ರೆಸ್, ದಲ್ಲಾಳಿಗಳ ರಾಜ್ಯ ಮಾಡಲು ಹೊರಟಿದೆ ಎಂದು ಆಕ್ಷೇಪಿಸಿದರು.

ಪಠ್ಯಪುಸ್ತಕ ಬದಲಾವಣೆ ಬಗ್ಗೆ ತರಾತುರಿ ಸಲ್ಲದು. ಏಕಾಏಕಿ ಮಕ್ಕಳಿಗೆ ತೊಂದರೆ ಕೊಡುವ ಉದ್ದೇಶ ಹೊಂದಿ ನಿಮ್ಮ ಸಿದ್ಧಾಂತ ಹೇರುವ ಪ್ರಯತ್ನ ಮಾಡಿದ್ದೀರಿ. ಈ ಮೂಲಕ ಸಂದೇಶ ಕೊಟ್ಟಿದ್ದೀರಿ ಎಂದು ತಿಳಿಸಿದರು.

ವಿದ್ಯುತ್ ದರ ಏರಿಕೆಯಿಂದ ಕೈಗಾರಿಕೆಗಳು ಬೇರೆ ರಾಜ್ಯಕ್ಕೆ ಹೋಗುವ ಮಾತು ಕೇಳಿಬರುತ್ತಿದೆ. 10 ರೂ. ಕೊಟ್ಟು 20 ರೂ. ಕಿತ್ತುಕೊಳ್ಳುವ ಗ್ಯಾರಂಟಿ ವ್ಯವಸ್ಥೆಯನ್ನು ಕಾಂಗ್ರೆಸ್ ಸರ್ಕಾರ ಜಾರಿ ಮಾಡುತ್ತಿದೆ ಎಂದ ಅವರು, “ಏಯ್ ಮಹದೇವಪ್ಪ ನಿನಗೂ ಫ್ರೀ, ನನಗೂ ಫ್ರೀ, ಕಾಕಾ ಪಾಟೀಲ್ ನಿನಗೂ ಫ್ರೀ” ಎಂದಿದ್ದರು. ಕಂಡಿಷನ್ ಅಪ್ಲೈ ಎಂದಿದ್ದೀರಾ? ಈಗ ಹೊಸ ಮನೆಗೆ ಒಂದು, ಸರಾಸರಿ ಎಂಬ ಕಂಡಿಷನ್ ಹಾಕುತ್ತೀರಿ. ಠೇವಣಿ ಶೇ 65ರಷ್ಟು ಹೆಚ್ಚಳ ಮಾಡಿದ್ದಾರೆ. ತಾತ್ಕಾಲಿಕ ಸಂಪರ್ಕಕ್ಕೆ ಶೇ70ರಷ್ಟು ಠೇವಣಿ ಸಂಗ್ರಹ ಮಾಡಲಾಗುತ್ತಿದೆ ಎಂದು ಟೀಕಿಸಿದರು.

ವಿದ್ಯುತ್ ದರ ಹೆಚ್ಚಳ ಒಂದು ಕಳ್ಳಾಟ. 70 ಪೈಸೆ ಹೆಚ್ಚಿಸಿದ್ದಾರೆ. ಬೇಕಾದುದೆಲ್ಲ ಕಾಂಗ್ರೆಸ್ ಪಕ್ಷದ್ದು. ಬೇಡದ್ದೆಲ್ಲವೂ ಬಿಜೆಪಿಯದು ಎಂದು ತಿಳಿಸಿದರು. ಕೇಂದ್ರವು ಅಕ್ಕಿ ವಿಚಾರದಲ್ಲಿ ಸಮಸ್ಯೆ ತಂದೊಡ್ಡಿದೆ ಎಂದರೆ, ಕೇಳಿದೊಡನೆ ಕೊಡಲು ಕೇಂದ್ರ ಎಂದರೆ ಅತ್ತೆ ಮನೆಯೇ ಘೋಷಿಸುವ ಮೊದಲೇ ನಿಮಗೆ ಜ್ಞಾನ, ಪ್ರಜ್ಞೆ ಇರಲಿಲ್ಲವೇ ನಾಳೆ ಕರ್ನಾಟಕವನ್ನು ಮಾರಾಟ ಮಾಡುತ್ತೇವೆ ಎಂದರೆ ಕೇಂದ್ರ 'ಎಸ್' ಎನ್ನಬೇಕೇ ಎಂದು ಪ್ರಶ್ನೆಗಳನ್ನು ಮುಂದಿಟ್ಟರು.

ಊಟಕ್ಕೆ ಕೂತರೆ ನಂದೂ ನಂದೇ; ನಿನ್ನದೂ ನಿಂದೇ ಎಂಬಂತಾಗಿದೆ. ಗ್ಯಾರಂಟಿಗಳ ಅನುಷ್ಠಾನಕ್ಕೆ 1 ಲಕ್ಷದ 10 ಸಾವಿರ ಕೋಟಿ ಹಣ ಬೇಕು. ರಾಜ್ಯ ಇನ್ನೊಂದು ವರ್ಷದಲ್ಲಿ ದಿವಾಳಿ ಆಗಲಿದೆ. ಕಾನೂನನ್ನು ಎಲ್ಲರೂ ಕೈಗೆ ತೆಗೆದುಕೊಳ್ಳುತ್ತಿದ್ದಾರೆ. ಅಂಗನವಾಡಿ, ಸಣ್ಣ ಕೈಗಾರಿಕೆ, ಸ್ತ್ರೀಶಕ್ತಿ ಸಂಘಗಳ ಗಲಾಟೆ ಮುಂದುವರೆಯುವಂತಾಗಿದೆ. ಇದು ಕಾಂಗ್ರೆಸ್ ಪಕ್ಷದ ಅರಾಜಕತೆಯ ಸೃಷ್ಟಿ ಎಂದು ಟೀಕಿಸಿದರು.



ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ ಮೈಸೂರು, ಕೊಡಗು, ಚಾಮರಾಜನಗರ, ಮಂಗಳೂರು, ಉಡುಪಿ ಜಿಲ್ಲೆಗಳಿಂದ ಕೊರಗ ಮತ್ತು ಜೇನುಕುರುಬರ 20 ಜನರ ತಂಡ ದೆಹಲಿ ದರ್ಶನ ವೇಳೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿತು. ಚಿತ್ರದಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಎಲ್. ಶ್ರೀನಿವಾಸ್, ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್, ಕಾರ್ಯದರ್ಶಿ ಶಿವಲಿಂಗಪ್ರಭುವಾಲಿ, ಸಹಾಯಕ ನಿರ್ದೇಶಕ ಎಚ್. ಶ್ರೀನಿವಾಸ್ ಅವರನ್ನು ಕಾಣಬಹುದು.

ಮೈಸೂರು ಜಿಲ್ಲೆ ಗ್ರಾಪಂಗಳಿಗೆ 2ನೇ ಅವಧಿಯ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ಪ್ರಕ್ರಿಯೆ ಆರಂಭ; ವೇಳಾಪಟ್ಟಿ ಪ್ರಕಟ

ಮೈಸೂರು, ಜೂ.16–ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ 2020ನೇ ಸಾಲಿನ ಗ್ರಾಮ ಪಂಚಾಯ್ತಿ ಸಾರ್ವತ್ರಿಕ ಚುನಾವಣೆಯ ನಂತರ ಎರಡನೇ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳಿಗೆ ತಾಲೂಕುವಾರು ವಿವಿಧ ವರ್ಗಗಳಿಗೆ ಮೀಸಲಾತಿ ನಿಗದಿಪಡಿಸಲು ವೇಳಾಪಟ್ಟಿ ಪ್ರಕಟಿಸಲಾಗಿದೆ.

ಮೀಸಲಾತಿ ನಿಗದಿಗೆ ತಾಲೂಕುವಾರು ವೇಳಾಪಟ್ಟಿ

ತಾಲೂಕು	ದಿನಾಂಕ	ಸಮಯ	ಸ್ಥಳ
ಕೆ.ಆರ್.ನಗರ	ಜೂ.17	ಮ.12	ಶ್ರೀ ವೆಂಕಟೇಶ್ವರ ಚಿತ್ರಮಂದಿರ
ಸಾಲಿಗ್ರಾಮ	ಜೂ.17	ಸಂ.4	ಶ್ರೀ ಪದ್ಮಾಂಭ ಚಿತ್ರಮಂದಿರ
ಹುಣಸೂರು	ಜೂ.19	ಬೆ.11.30	ಡಾ.ಬಿ.ಆರ್.ಅಂಬೇಡ್ಕರ್ ಭವನ
ಪಿರಿಯಾಪಟ್ಟಣ	ಜೂ19	ಮ.3.30	ಶಾರದಾ ಚಿತ್ರಮಂದಿರ
ಹೆಚ್.ಡಿ.ಕೋಟೆ	ಜೂ.20	ಬೆ.10	ಡಾ.ಬಿ.ಆರ್.ಅಂಬೇಡ್ಕರ್ ಭವನ
ಸರಗೂರು	ಜೂ.20	ಮ.3	ಡಾ.ಬಿ.ಆರ್.ಅಂಬೇಡ್ಕರ್ ಭವನ
ಮೈಸೂರು	ಜೂ.21	ಬೆ.10	ಕರ್ನಾಟಕ ಕಲಾಮಂದಿರ
ಟಿ.ನರಸೀಪುರ	ಜೂ.21	ಮ.3	ಶ್ರೀ ಶ್ರೀನಿವಾಸ ಕನ್‌ವೆನ್ಷನ್ ಹಾಲ್
ನಂಜನಗೂಡು	ಜೂ.22	ಬೆ.10	ಡಾ.ಬಿ.ಆರ್.ಅಂಬೇಡ್ಕರ್ ಭವನ

ಮೀಸಲಾತಿಯನ್ನು ನಿಗದಿಪಡಿಸುವಾಗ ಉಲ್ಲೇಖ(3)ರ ಪತ್ರದಲ್ಲಿ ರಾಜ್ಯ ಚುನಾವಣಾ ಆಯೋಗದ ಮಾರ್ಗಸೂಚಿಯಂತೆ NICರವರು ಅಭಿವೃದ್ಧಿಪಡಿಸಿರುವ GPPVP application ತಂತ್ರಾಂಶದ ಮೂಲಕ ಕಂಪ್ಯೂಟರ್‌ನಲ್ಲಿ ನಿಗದಿ ಕ್ರಮ ವಹಿಸಲಾಗುವುದು.

ಅವರೋಹಣ ಕ್ರಮದಲ್ಲಿ ಅತೀ ಹೆಚ್ಚು ಮೀಸಲಾತಿ ವರ್ಗದ ಸದಸ್ಯರನ್ನೊಳಗೊಂಡ ಗ್ರಾಮ ಪಂಚಾಯ್ತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳಿಗೆ ಮೀಸಲಾತಿ ನಿಗದಿಪಡಿಸಲಾಗುವುದು. ಈ ರೀತಿ ನಿಗದಿಪಡಿಸುವಾಗ 1993ರಿಂದ 2020ನೇ ಸಾಲಿನವರೆಗೆ ನಿಗದಿಪಡಿಸಿರುವ ಮೀಸಲಾತಿಯನ್ನು ಪರಿಗಣಿಸಿ ಸರದಿಯಂತೆ(ರೊಟೇಷನ್ ಸಿಸ್ಟಂ ಅನುಸರಿಸಿ) ನಿಗಧಿಪಡಿಸಲಾಗುವುದು. ಸಮ ಸಂಖ್ಯೆಯ ಸದಸ್ಯರ ಸ್ಥಾನಗಳು ಬರುವ ಗ್ರಾಮ ಪಂಚಾಯಿತಿಗಳಲ್ಲಿ ಲಾಟರಿ ಎತ್ತುವ ಮೂಲಕ ಮೀಸಲಾತಿಯನ್ನು ನಿಗದಿಪಡಿಸಲಾಗುವುದು. ತಾಲೂಕುವಾರು ಮೀಸಲಾತಿಯನ್ನು ನಿಗದಿಪಡಿಸುವಾಗ ಮೊದಲು ಅಧ್ಯಕ್ಷ ಹುದ್ದೆಗೆ ಮೀಸಲಾತಿಯನ್ನು ನಿಗದಿಪಡಿಸಲಾಗುವುದು. ಅದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ 'ಎ', ಮತ್ತು ವರ್ಗ 'ಬಿ' ಹಾಗೂ ಸಾಮಾನ್ಯ, ಈ ಕ್ರಮದಲ್ಲಿ ಮೀಸಲಾತಿಯನ್ನು ನಿಗದಿಪಡಿಸಲಾಗುವುದು. ನಂತರ ಉಪಾಧ್ಯಕ್ಷ ಹುದ್ದೆಗೆ ಮೀಸಲಾತಿ ನಿಗದಿಪಡಿಸಲಾಗುವುದು.

ಈ ಪ್ರಕ್ರಿಯೆಯಲ್ಲಿ ಚುನಾಯಿತ ಗ್ರಾಮ ಪಂಚಾಯ್ತಿ ಸದಸ್ಯರುಗಳಿಗೆ ಮಾತ್ರ ಪ್ರವೇಶವಿರುತ್ತದೆ. ಗ್ರಾಮ ಪಂಚಾಯಿತಿಯ ಸದಸ್ಯತ್ವ ಪಡೆದಿರುವ ಬಗ್ಗೆ ಚುನಾವಣಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ (ಪ್ರಪತ್ರ –37)ದೊಂದಿಗೆ ಹಾಜರಾಗಬೇಕು. ತಪ್ಪಿದ್ದಲ್ಲಿ ಸದಸ್ಯರ ಗೈರು ಹಾಜರಿಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳ ಮೀಸಲಾತಿಯನ್ನು ನಿಗದಿಪಡಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಲ್ಪಾವಧಿಯಲ್ಲೇ 'ಪರಿಶ್ರಮ' ದಾಖಲೆ



ಪ್ರದೀಪ್ ಈಶ್ವರ್

ಬೆಂಗಳೂರು: ಪ್ರಸಕ್ತ ಸಾಲಿನ ನೀಟ್ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿರುವ ಪರಿಶ್ರಮ ನೀಟ್ ಅಕಾಡೆಮಿಯ ವಿದ್ಯಾರ್ಥಿಗಳು ಉತ್ತಮ ರ‍್ಯಾಂಕ್ ಗಳಿಸುವ ಮೂಲಕ ಪ್ರತಿಷ್ಠಿತ ರಾಜ್ಯ ಹಾಗೂ ರಾಷ್ಟ್ರಮಟ್ಟದ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಲಿದ್ದಾರೆ. ವರ್ಷದಿಂದ ವರ್ಷಕ್ಕೆ ಹೆಚ್ಚು ರ‍್ಯಾಂಕ್‌ಗಳನ್ನು ಗಳಿಸುತ್ತಿದ್ದು, ಈ ವರ್ಷದ ಫಲಿತಾಂಶವೇ ಇದಕ್ಕೆ ಸಾಕ್ಷಿ ಎಂದು ಸಂಸ್ಥೆಯ ಸಂಸ್ಥಾಪಕ ನಿರ್ದೇಶಕರೂ ಆದ ಶಾಸಕ ಪ್ರದೀಪ್ ಈಶ್ವರ್ ತಿಳಿಸಿದ್ದಾರೆ. ವಿದ್ಯಾರ್ಥಿಗಳ ಛಲ, ಶ್ರಮ, ಬದ್ಧತೆ, ಬೋಧಕ ಸಿಬ್ಬಂದಿಗಳ ಸಹಕಾರದಿಂದ ಕೇವಲ 5 ವರ್ಷಗಳಲ್ಲಿ ಕರ್ನಾಟಕ ಅಷ್ಟೇ ಅಲ್ಲ, ದೇಶವ್ಯಾಪಿ ಬಾರಿ ಹೆಸರು ಗಳಿಸಿದೆ ಇದಕ್ಕೆಕಾರಣ ಇಲ್ಲಿನ ವಿದ್ಯಾರ್ಥಿಗಳು ಈಗಾಗಲೇ ದೇಶದ ವಿವಿಧೆಡೆ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾರೆ. ಪರಿಶ್ರಮ ನೀಟ್ ಅಕಾಡೆಮಿಯ ವಿದ್ಯಾರ್ಥಿಗಳಾದ ಸೃಜನ್ ಜೆ., ಶ್ರೇಯಾ ಜಿ.ಎಸ್., ವರ್ಷಾ ಎನ್.ಜಿ., ಸೌಜನ್ಯ ಜಿ.ಎಸ್, ಸಚಿನ್ ಬಿ.ಗಡ್ಡದವರ್ ಹಾಗೂ ರಾಹುಲ್ ಕೋಣಿ ಅವರು ಹೆಚ್ಚಿನ ಅಂಕ ಗಳಿಸುವ ಮೂಲಕ ಸಾಧನೆ ತೋರಿದ್ದಾರೆ ಎಂದು ಪ್ರದೀಪ್ ಈಶ್ವರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮಂಡ್ಯ ಡಿಸಿ ಡಾ.ಗೋಪಾಲಕೃಷ್ಣ ಸೇರಿ 10 ಮಂದಿ ಐಎಎಸ್ ಅಧಿಕಾರಿಗಳ ವರ್ಗಾವಣೆ

ಮೈಸೂರು, ಜೂ.16(ಬಿಎಲ್‌ಯು)–ಶಕ್ತಿ ಕೇಂದ್ರ ವಿಧಾನಸೌಧದ ಆಡಳಿತದಲ್ಲಿ ಮೇಜರ್ ಸರ್ಜರಿ ಮಾಡಿರುವ ನೂತನ ಕಾಂಗ್ರೆಸ್ ಸರ್ಕಾರ ಈಗ ಮಂಡ್ಯ ಜಿಲ್ಲಾಧಿಕಾರಿ ಸೇರಿದಂತೆ ಹತ್ತು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದೆ.

ಮಂಡ್ಯ ಜಿಲ್ಲಾಧಿಕಾರಿ ಡಾ.ಹೆಚ್.ಎನ್. ಗೋಪಾಲಕೃಷ್ಣ ಅವರನ್ನು ವರ್ಗಾವಣೆ ಮಾಡಿರುವ ರಾಜ್ಯ ಸರ್ಕಾರ ಅವರ ಸ್ಥಾನಕ್ಕೆ ಡಾ.ಕುಮಾರ್ ಅವರನ್ನು ನಿಯೋಜಿಸಿದೆ.

ಸಕಾಲ ಮಿಷನ್ ಹೆಚ್ಚುವರಿ ಯೋಜನಾ ನಿರ್ದೇಶಕಿಯಾಗಿ ಪಲ್ಲವಿ ಅಕುರಾತಿ, ಪಶು ಸಂಗೋಪನಾ ಇಲಾಖೆಯ ಆಯುಕ್ತರಾಗಿ ಡಾ.ಎಂ.ವಿ.ವೆಂಕಟೇಶ್, ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಯಾಗಿ ಪಿ.ಎನ್. ರವೀಂದ್ರ, ತುಮಕೂರು ಜಿಲ್ಲಾಧಿಕಾರಿಯಾಗಿ ಕೆ. ಶ್ರೀನಿವಾಸ್, ಬಾಗಲಕೋಟೆ ಜಿಲ್ಲಾಧಿಕಾರಿಯಾಗಿ ಕೆ.ಎಂ.ಜಾನಕಿ, ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯಾಗಿ ಮುಲ್ಲೈ ಮುಹಿಲನ್, ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರಾಗಿ ಎ.ಎಂ.ಯೋಗೇಶ್, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತರಾಗಿ ಜಿ.ಪ್ರಭು ಹಾಗೂ ವಸತಿ ಶಿಕ್ಷಣ ಸೊಸೈಟಿ ಇಡಿಯಾಗಿ ನವೀನ್ ಕುಮಾರ್ ರಾಜು ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ನಿಧನ



ಮೈಸೂರು, ಜೂ.16–ಮೈಸೂರಿನ ಅರವಿಂದ ನಗರದ ಬಸ್ ಡಿಪೋ ಹಿಂಭಾಗದ ನಿವಾಸಿ ಯಜಮಾನ್ ಚಪ್ಪಣ್ಣ ಅವರ ಪುತ್ರ ಎಂ.ಬಸವರಾಜು (69) ಅವರು ಇಂದು ನಿಧನರಾದರು. ಇವರು ಮೂಲತಃ ಕೆ.ಜಿ.ಕೊಪ್ಪಲಿನವರು. ಮೃತರು ಪತ್ನಿ ಶೋಭಾ, ಪುತ್ರ ಸಾಗರ್, ಪುತ್ರಿ ಮಹಾಲಕ್ಷ್ಮಿ ಸೇರಿದಂತೆ ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.6.2023 ಶನಿವಾರ, ಮಳೆ ನಕ್ಷತ್ರ: ಮೃಗಶಿರ, 08.06.2023 ರಿಂದ 21.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ರೋಹಿಣಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಚರ್ಮ ರೋಗಿಗಳಿಗೆ ಚಿಕಿತ್ಸಾ ಶಿಬಿರ, 'ಆಯುರ್ವೇದ ಪಂಚಕರ್ಮ', ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ, ಆಲನಹಳ್ಳಿ, ಬೆಳಗ್ಗೆಯಿಂದ.

■ **ದಿ ಆರ್ಟ್ ಆಫ್ ಲಿವಿಂಗ್ :** ಶ್ರೀ ಶ್ರೀ ಯೋಗ ಶಿಬಿರ, ಸ್ಥಳ: 2870, ವಜ್ರನಖ, 1ನೇ ಮೇನ್, 4ನೇ ಕ್ರಾಸ್, ಚಾಮುಂಡಿಪುರಂ; ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಜೆಎಸ್‌ಎಸ್ ಕಾಲೇಜು ಹತ್ತಿರ, ಬೆಳಗ್ಗೆ 6 ರಿಂದ 7

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಉನ್ನತ ಶಿಕ್ಷಣದಲ್ಲಿ ತಾಂತ್ರಿಕ ರೂಪಾಂತರ : ದೃಷ್ಟಿಕೋನಗಳು ಮತ್ತು ಸವಾಲುಗಳು ಕುರಿತು ರಾಷ್ಟ್ರಮಟ್ಟದ ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಪ್ರಾಸ್ತಾವಿಕ ನುಡಿ : ಬೆಂಗಳೂರು ಅಲೆಯನ್ಸ್ ವಿವಿಯ ಡಾ. ಸಾಜನ್ ಮ್ಯಾಥ್ಯೂ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ. ನಟರಾಜು, ಪ್ರಿನ್ಸಿಪಾಲ್ ಡಾ. ಎಸ್. ಮರೀಗೌಡ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಬಂಜೆತನ ನಿರ್ಮೂಲನಾ ಕೇಂದ್ರ ಗರ್ಭಗುಡಿ ಐವಿಎಫ್ ಸೆಂಟರ್, ಲಯನ್ಸ್ ಜೀವಧಾರ ರಕ್ತನಿಧಿ ಕೇಂದ್ರ :** ಉಚಿತ ಬಂಜೆತನ ತಪಾಸಣಾ ಶಿಬಿರ, ಸ್ಥಳ: ಲಯನ್ಸ್ ಜೀವಧಾರ ರಕ್ತನಿಧಿ ಕೇಂದ್ರ, ಸಂಯ್ಯಾಜಿರಾವ್ ರಸ್ತೆ, ಬೆಳಗ್ಗೆ 10 ರಿಂದ.

■ **ಮಹಾಜನ ವಿದ್ಯಾಸಂಸ್ಥೆ, ಮಹಾಜನ ಪ್ರಥಮ ದರ್ಜೆ ಕಾಲೇಜು :** ಪದವಿ ಪ್ರದಾನ ಸಮಾರಂಭ, ಪದವಿ ಪ್ರದಾನ ಭಾಷಣ : ನವದೆಹಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ನಿಕಟಪೂರ್ವ ಅಧ್ಯಕ್ಷ ಪ್ರೊ. ವೇದ್ ಪ್ರಕಾಶ್, ಮುಖ್ಯ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಉಪಸ್ಥಿತರು : ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಸ್ಥಳ: ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರ :** ವಿದುಷಿ ಡಾ. ಕೃಪಾ ಫಡ್ಕೆ ಅವರ ಶಿಷ್ಯೆ ಶ್ರೀಮತಿ ಎಂ.ಎಸ್. ಅನನ್ಯಾ ಅವರ ಭರತನಾಟ್ಯ ರಂಗ ಪ್ರವೇಶ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಉಪನಿರ್ದೇಶಕ ಮ.ಗು. ಸದಾನಂದಯ್ಯ, ಮುಖ್ಯ ಅತಿಥಿಗಳು : ನೂಪುರ ಕಲಾವಿದರು ನಿರ್ದೇಶಕ ಪ್ರೊ. ಕೆ. ರಾಮಮೂರ್ತಿ ರಾವ್, ಸಾಹಿತಿ ಡಾ. ದೀಪಾ ಫಡ್ಕೆ, ಉಪಸ್ಥಿತರು: ಕೇಂದ್ರದ ನಿರ್ದೇಶಕರಾದ ವಿದುಷಿ ಡಾ. ಕೃಪಾ ಫಡ್ಕೆ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5.30ಕ್ಕೆ

■ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ಪ್ರತಿಷ್ಠಾಪನಾ ವಾರ್ಷಿಕ ಮಹೋತ್ಸವ, ಬೆಳಗ್ಗೆ 5,30 ರಿಂದ ಗಣಪತಿ ಹೋಮ, ಚತುಶುದ್ಧಿ, ಶ್ರೀ ಗುರುವಾಯೂರಪ್ಪನಿಗೆ ಬಿಂಬ ಶುದ್ಧಿ, ಧಾರ, ಪಂಚಗವ್ಯಂ, ಪಂಚಗಂ, ಅಸ್ತ್ರ ಕಳಶಪೂಜಾ, ಕಳಶಾಭಿಷೇಕಂ, ಉಚ್ಚ ಪೂಜೆ, ಮಧ್ಯಾಹ್ನ 12ಕ್ಕೆ ಅನ್ನದಾನ, ಸಂಜೆ 5.30 ರಿಂದ ದೀಪಾರಾಧನೆ, ವಾದ್ಯಗಳೊಂದಿಗೆ ವಿಶೇಷ ಪೂಜೆ, ಅತ್ತಾಳ ಪೂಜಾ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟದ ಪಾದ, ಸಂಜೆ 5.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ –ಬಾನುಲಿ ಸರಣಿ, ಪ್ರಸ್ತುತಿ– ಡಾ. ಎ.ಎಸ್. ಚಂದ್ರಶೇಖರ್, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ–ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು–ಅರ್ಚನಾ ಉಡುಪ, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ, ಬಾನುಲಿ ಸರಣಿ – ಗಂಜೀಫಾ ರಘುಪತಿ ಭಟ್ ಅವರೊಡನೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ಜಿ.ಎನ್. ಬಾಲಸುಬ್ರಹ್ಮಣ್ಯಂ–ಹಾಡುಗಾರಿಕೆ, 11.00 “ಸ್ವರಾಜ್”– ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ತಾಥೆ

ಮಧ್ಯಾಹ್ನ: 12.30 ದೇವರನಾಮ– ಆರ್.ಕೆ. ರಮಪ್ರಭಾ, 12.45 ಜನಪದ ಸಂಗೀತ– ಸಂಸಾರ ನೌಕೆ ನಾಟಕದ ಹಾಡುಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಅಮೃತಾನಿತಿನ್ ಶಾಸ್ತ್ರಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ– ಪ್ರತಿಭಾ ಪಲ್ಲವ, ಹಾಡುವ, ನೃತ್ಯ ಮಾಡುವ ಬಾಲಪ್ರತಿಭೆ, ಮಾನ್ವಿ ಯು.ಎಸ್. ಆಚಾರ್ ಪರಿಚಯ, ಪ್ರಸ್ತುತಿ– ಎಂ.ಎಸ್. ಭಾರತಿ, 4.00 ನಾಟಕ, 4.30 ನೆನಪಿನಂಗಳ–ಸಾಹಿತಿ ಸಿದ್ಧಲಿಂಗಯ್ಯ ಅವರೊಂದಿಗೆ ಡಾ.ಮೈಸೂರು ಉಮೇಶ್ ಅವರು ನಡೆಸಿದ ಸಂವಾದ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, 8.00 ಯುವವಾಣಿ, 9.15 ಮೊಬೈಲ್ ಕಳೆದುಕೊಂಡರೆ ಹುಡುಕುವುದೆಲ್ಲಿ, ಮಾತನಾಡುತ್ತಾರೆ: ಡಾ. ಸುಧಾಕರ ಅರಬಗಟ್ಟೆ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಕಲ್ಯಾಣಿ ದೇಶ್‌ಮುಖ್ – ಗಾಯನ

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ಸುಚೇತನ್ ರಂಗಸ್ವಾಮಿ ಅವರಿಂದ ಗಾಯನ, ವಿದುಷಿ ದೀಪಾಕೃಷ್ಣಮೂರ್ತಿ–ಪಿಟೀಲು, ವಿದ್ವಾನ್ ಎ.ರಾಧೇಶ್–ಮೃದಂಗ, ವಿದ್ವಾನ್ ಎಸ್.ಮಂಜುನಾಥ್ –ಘಟ, ಸ್ಥಳ: ಗಾನಭಾರತೀ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ

■ **ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ :** 9ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗ ದರ್ಶನ ಮತ್ತು ಯೋಗಥಾನ್, ವಸುಧೈವ ಕುಟುಂಬಕಂ ಪ್ರತಿ ಮನೆ ಅಂಗಳದಲ್ಲಿ ಯೋಗ, ಸಭಾ ಕಾರ್ಯಕ್ರಮ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು: ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಸ್ಥಳ: ಮೈಸೂರಿನ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣ, ಬೆಳಗ್ಗೆ 6 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ:** ವಿದುಷಿ ಜಯಂತಿ ಶ್ರೀಧರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದುಷಿ ಸಿ.ವಿ. ಶೃತಿ–ಪಿಟೀಲು, ವಿದ್ವಾನ್ ಸಾಯಿ ಶಿವ ಲಕ್ಷ್ಮೀಕೇಶವ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ :** ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ ಮತ್ತು ವೃಂದದವರಿಂದ ವಿಶೇಷ ತಾಳವಾದ್ಯ, ಸಂಗೀತ ಲಹರಿ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.

■ **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ಕದಂಬ ರಂಗ ವೇದಿಕೆ ಸಂಭ್ರಮ, ಯಕ್ಷರಂಗ ಮೈಸೂರು ಕಲಾವಿದರಿಂದ ಕರಿರಾಯನ ಚರಿತೆ ನಾಟಕ ಪ್ರದರ್ಶನ, ನಿರ್ದೇಶನ : ಡಿ. ತಿಪ್ಪಣ್ಣ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 17 ಶನಿವಾರ 2023

ಸಂಪುಟ: 44 | ಸಂಚಿಕೆ: 62 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನಿಮ್ಮ ಪತ್ರಗಳು

ಮುಡಾ ಮತ್ತು ಎಂಸಿಸಿಯ ತ್ವರಿತ ಹಣ ಸಂಗ್ರಹಣೆ ದುರಾಸೆಗಾಗಿ
ಪಾರ್ಕಿಂಗ್ ಜಾಗದ ಸಮಸ್ಯೆ ಸೃಷ್ಟಿ



ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆಯು ಜಾರಿಗೆ ತರಲು ಉದ್ದೇಶಿಸಿರುವ 'ಪೇ ಅಂಡ್ ಪಾರ್ಕ್' ಬಗ್ಗೆ ನಡೆಯುತ್ತಿರುವ ಚರ್ಚೆಯ ಹಿನ್ನೆಲೆಯಲ್ಲಿ ಕೆಲವು ಅಂಶಗಳನ್ನು ಪ್ರಸ್ತಾಪಿಸಲೇಬೇಕಾಗಿ ಬಂದಿದೆ.

ಈ ಹಿಂದೆ ಮೈಸೂರು ವಿಶ್ವಸ್ಥ ಮಂಡಳಿಯ (ಸಿ.ಐ.ಟಿ.ಬಿ.) (ಅದೀಗ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಗಿದೆ) ಅಧ್ಯಕ್ಷರಾಗಿದ್ದ ಡಾ.ಎಸ್.ಸಿದ್ದರಾಜು ಅವರ ಅವಧಿಯಲ್ಲಿ ದೇವರಾಜ ಅರಸು ರಸ್ತೆಯ ನಾಲ್ಕು ಹಾಗೂ ಕೊನೆಯ ಹಂತದಲ್ಲಿ ಮುಂದಿನ ದಿನಗಳಲ್ಲಿ ಈ ಪ್ರಮುಖ ವಾಣಿಜ್ಯ ರಸ್ತೆಯಲ್ಲಿ ಉಂಟಾಗಬಹುದಾದ ವಾಹನಗಳ ಒತ್ತಡವನ್ನು ಗಮನದಲ್ಲಿಟ್ಟುಕೊಂಡು ಹಲವು ಹಂತಗಳ ವಾಹನ ನಿಲ್ದಾಣವನ್ನು ನಿರ್ಮಿಸಲು ಜಾಗವೊಂದನ್ನು ಮೀಸಲಿಡಲಾಗಿತ್ತು. **ಆದರೆ, ಈ ಜಾಗವೂ ಸೇರಿದಂತೆ ನಾಲ್ಕನೆಯ ಹಂತದ ವಾಣಿಜ್ಯ ನಿವೇಶನಗಳನ್ನು, ಅವುಗಳ ಹರಾಜಿನಿಂದ ಪ್ರಾಧಿಕಾರಕ್ಕೆ ಬರುವ ಆದಾಯವನ್ನು ಮನಸ್ಸಿನಲ್ಲಿಟ್ಟುಕೊಂಡು, ಹರಾಜು ಮಾಡಲಾಯಿತು.**

ನಂತರ ಮೈಸೂರು ನಗರ ಪಾಲಿಕೆ ಈ ವಾಣಿಜ್ಯ ರಸ್ತೆಯಲ್ಲಿ ಹೆಚ್ಚುತ್ತಿರುವ ವಾಹನ ನಿಲುಗಡೆಯ ಒತ್ತಡವನ್ನು ತಪ್ಪಿಸಲು ಬಿಡಾರಂ ಕೃಷ್ಣಪ್ಪ ರಸ್ತೆಯಲ್ಲಿ ನಾರಾಯಣಶಾಸ್ತ್ರಿ ರಸ್ತೆ ಸೇರುವ ಮೂಲೆಯ ನಿವೇಶನದಲ್ಲಿ ಕೆಲ ಹಂತಗಳ ವಾಹನ ನಿಲ್ದಾಣವನ್ನು ನಿರ್ಮಿಸುವುದಾಗಿ ಘೋಷಿಸಿತ್ತು. ಈ ಜಾಗದಲ್ಲಿ ಹಿಂದೆ ಎತ್ತಿನ ಗಾಡಿಗಳಲ್ಲಿ ಸೌದೆಯನ್ನು ತಂದು ಮಾರಲಾಗುತ್ತಿತ್ತು. ನಂತರದ ದಿನಗಳಲ್ಲಿ ಸೌದೆಗೆ ಬೇಡಿಕೆ ಕಡಿಮೆಯಾಗಿ ಈ ಜಾಗ ಖಾಲಿಯಾಗಿಯೇ ಉಳಿದಿತ್ತು. ಆದರೆ ವಾಹನಗಳ ನಿಲ್ದಾಣವನ್ನು ನಿರ್ಮಿಸುವ ಉದ್ದೇಶವನ್ನು ಕೈಬಿಟ್ಟು ಈ ಜಾಗವನ್ನು ಬಡ ವಿದ್ಯಾರ್ಥಿನಿಯರಿಗಾಗಿ ಶಾಲೆ ನಡೆಸುತ್ತಿದ್ದ ಖಾಸಗಿ ಮಹಿಳೆಯೊಬ್ಬರಿಗೆ ಕೊಡಲಾಯಿತು. ಈ ಶಾಲೆ ಈಗಲೂ ಅಲ್ಲಿ ಕಾರ್ಯ ನಿರ್ವಹಿಸುತ್ತಿದೆಯೇ ನನಗೆ ತಿಳಿದಿಲ್ಲ. ಹಾಗಿಲ್ಲದೆ ಅದು ಖಾಲಿ ಇದ್ದರೆ, ಅದು ದೇವರಾಜ ಅರಸು ರಸ್ತೆಯ ಹಿಂಭಾಗವೇ ಇದ್ದು ಅನುಕೂಲವೂ ಆಗುವುದರಿಂದ ಅಲ್ಲೊಂದು ವಾಹನ ನಿಲ್ದಾಣವನ್ನು ನಿರ್ಮಿಸುವುದಕ್ಕೆ ಈಗಲೂ ಪರಿಶೀಲಿಸಬಹುದು.

ಇದಾದ ನಂತರ ದಿವಾನ್ಸ್ ರಸ್ತೆಯ ಮೂಲೆಯ ಖಾಲಿ ಜಾಗದಲ್ಲಿ ಹಲವು ಅಂತಸ್ತುಗಳ ವಾಹನ ನಿಲ್ದಾಣವನ್ನು ರೂಪಿಸುವುದಾಗಿ ಘೋಷಿಸಲಾಯಿತು. ಆದರೆ ಈ ಜಾಗವನ್ನು ಡಾ.ಅಂಬೇಡ್ಕರ್ ಭವನ ನಿರ್ಮಿಸಲು ಬಳಸಿಕೊಳ್ಳಲಾಯಿತು.

ಇದರಿಂದಾಗಿ ಮೈಸೂರಿನ ಪ್ರತಿಷ್ಠಿತ ವಾಣಿಜ್ಯ ರಸ್ತೆಯಾದ ದೇವರಾಜ ಅರಸು ರಸ್ತೆಯ ಬಳಿಯೇ ವಾಹನಗಳ ಒತ್ತಡವನ್ನು ಕಡಿಮೆ ಮಾಡಲು ಅತ್ಯವಶ್ಯಕವಾಗಿ ಬೇಕಾಗುವ ವಾಹನಗಳ ನಿಲ್ದಾಣ ಯೋಜನೆಯನ್ನು ಯಾವುದೇ ಮುಂದಾಲೋಚನೆ ಇಲ್ಲದೆ ಕೈಬಿಡಲಾಯಿತು. ಅಲ್ಲಿಯ ಅಂಗಡಿಗಳ ಮಾಲೀಕರ, ಅಲ್ಲಿಗೆ ಬರುವ ಗ್ರಾಹಕರ ತಪ್ಪಿಲ್ಲದಿದ್ದರೂ ಅತ್ಯವಶ್ಯಕವಾದ ಒಂದು ಸಾರ್ವಜನಿಕ ಸೌಲಭ್ಯವನ್ನು ಕಡೆಗಣಿಸಲಾಯಿತು. ಅಲ್ಪಾವಧಿಯ ಲಾಭಕ್ಕಾಗಿ ಸದಾಕಾಲದ ಸೌಕರ್ಯವನ್ನು ನಿರ್ಲಕ್ಷಿಸಲಾಯಿತು.

ಮಹಾನಗರ ಪಾಲಿಕೆ ಅಥವಾ ಬೇರೆ ಯಾವುದೇ ಸಂಬಂಧಪಟ್ಟ ಇಲಾಖೆ ಶಾಲೆಯೊಂದನ್ನು ನಡೆಸಲು ಕೊಡಲಾದ ಜಾಗವೂ ಸೇರಿದಂತೆ ದೇವರಾಜ ಅರಸು ರಸ್ತೆಯ ಬಳಿಯ ಯಾವುದಾದರೂ ಬೇರೆ ಖಾಲಿ ನಿವೇಶನದಲ್ಲಿ ಸೂಕ್ತ ವಾಹನ ನಿಲ್ದಾಣ ಕೇಂದ್ರವನ್ನು ನಿರ್ಮಿಸುವತ್ತ ತೀವ್ರ ಗಮನ ಹರಿಸಬೇಕಾಗಿದೆ. ಈ ಕಾರ್ಯ ಈಡೇರುವವರೆಗೆ ಪುರಭವನದಲ್ಲಿ ಪೂರ್ಣಗೊಂಡಿರುವ ವಾಹನ ನಿಲ್ದಾಣ ಕೇಂದ್ರದಲ್ಲಿಯಾಗಲೀ ಅಥವಾ ಡಾ. ಅಂಬೇಡ್ಕರ್ ಭವನದ ತಳಭಾಗದಲ್ಲಿಯಾದರೂ ವಾಹನಗಳನ್ನು ನಿಲ್ಲಿಸಲು ತಾತ್ಕಾಲಿಕ ವ್ಯವಸ್ಥೆ ಮಾಡುವುದು ಅತ್ಯಗತ್ಯವಾಗಿದೆ.

ದೇವರಾಜ ಅರಸು ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಲು ಉದ್ದೇಶಿಸಿರುವ 'ಪೇ ಅಂಡ್ ಪಾರ್ಕ್' ಬೇರೆ ರೀತಿಯ ಸಮಸ್ಯೆಗಳನ್ನೇ ಹುಟ್ಟುಹಾಕುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಈ ರಸ್ತೆಯ ಸುತ್ತಮುತ್ತಲಿನ ರಸ್ತೆಗಳು ಮತ್ತು ಸಣ್ಣ ರಸ್ತೆಗಳು ವಾಹನಗಳ ನಿಲ್ದಾಣ ಜಾಗಗಳಾಗಿ, ಅಲ್ಲಿಯೂ ಒತ್ತಡ ಜಾಸ್ತಿಯಾಗಿ ಅಲ್ಲಿ ವಾಸಿಸುವ ಜನರು ವಾಹನಗಳನ್ನು ಹೊರತರಲಾಗದ ಪರಿಸ್ಥಿತಿ ಉಂಟಾಗುತ್ತದೆ. ಅಲ್ಲದೆ ಇದರಿಂದಾಗಿ ಜನರ ಓಡಾಟಕ್ಕೆ ತೊಂದರೆ, ಪಾದಚಾರಿಗಳಿಗೆ ಅಡ್ಡಿ–ಅಡಚಣೆಗಳು, ಪರಿಸರ ಮಾಲಿನ್ಯ ಇತ್ಯಾದಿ ಹೊಸ ಸಮಸ್ಯೆಗಳು ಹೆಚ್ಚುತ್ತವೆ. **ದೇವರಾಜ ಅರಸು ರಸ್ತೆಯ ಸಮಸ್ಯೆಯನ್ನು ಇದರ ಆಜುಬಾಜಿನ ಗಲ್ಲಿ ರಸ್ತೆಗಳಿಗೆ ವರ್ಗಾಯಿಸಿದಂತೆ ಆಗುವುದೇ ಹೊರತು ಸಮಸ್ಯೆ ಬಗೆಹರಿಯುವುದಿಲ್ಲ.** ಈಗಾಗಲೇ ಈ ಸಣ್ಣಪುಟ್ಟ ರಸ್ತೆಗಳಲ್ಲಿ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಲಾಗುತ್ತಿದೆ. ದಿವಾನ್ ರಸ್ತೆ, ಬಿಡಾರಂ ಕೃಷ್ಣಪ್ಪ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ಶಿವರಾಂಪೇಟೆ ಇತ್ಯಾದಿ ರಸ್ತೆಗಳಲ್ಲಿ ಈ ಸಮಸ್ಯೆ, ಅದರಲ್ಲಿಯೂ ಸಂಜೆಯ ವೇಳೆ ಹೆಚ್ಚುತ್ತಿರುವುದನ್ನು ಗಮನಿಸಬಹುದು.

ಸಾಮಾನ್ಯವಾಗಿ ದೇವರಾಜ ಅರಸು ರಸ್ತೆಯಲ್ಲಿ ವಾಹನ ನಿಲ್ದಾಣದ ಸಮಸ್ಯೆಗೆ ಅಲ್ಲಿನ ಅಂಗಡಿ ಮಾಲೀಕರನ್ನು ದೂಷಿಸಲಾಗುತ್ತಿದೆ. ಆದರೆ ನನಗೆ ತಿಳಿದಂತೆ ಪರಿಸ್ಥಿತಿಯೇ ಬೇರೆ ಇದೆ. **ನಾನು ದೇವರಾಜ ಅರಸು ರಸ್ತೆಯ ಅಂಗಡಿಗಳ ಮಾಲೀಕರ ಸಂಘದ ಅಧ್ಯಕ್ಷನಾಗಿದ್ದಾಗ ನಡೆಸಿದ್ದ ಪರಿಶೀಲನೆಯ ಪ್ರಕಾರ ಇಲ್ಲಿಯ ಅಂಗಡಿ ಮಾಲೀಕರು ಸಾಮಾನ್ಯವಾಗಿ ತಮ್ಮ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದರು. ನಾಲ್ಕು ಚಕ್ರದ ವಾಹನದಲ್ಲಿ ಬಂದರೂ ಅದನ್ನು ತಮ್ಮ ಅಂಗಡಿಯ ಮುಂದೆಯೇ ನಿಲ್ಲಿಸಿಕೊಂಡು ತಮ್ಮ ವ್ಯಾಪಾರಕ್ಕೇ ಅಡಚಣೆ ಮಾಡಿಕೊಳ್ಳುವ ಬದಲು ಅದನ್ನು ಹಿಂದಕ್ಕೆ ಕಳುಹಿಸುತ್ತಿದ್ದರು.** ನಿಜಾಂಶ ತಿಳಿದುಬಂದದ್ದೇನೆಂದರೆ ನಗರದ ದೂರ ದೂರದ ಸ್ಥಳಗಳಿಂದ ಬರುವ ವಾಹನ ಮಾಲೀಕರು ದೇವರಾಜ ಅರಸು ರಸ್ತೆಯಲ್ಲಿ ತಮ್ಮ ವಾಹನ ನಿಲ್ಲಿಸಿ ಶಿವರಾಂಪೇಟೆ, ದೇವರಾಜ ಮಾರುಕಟ್ಟೆ ಮತ್ತಿತರ ವಾಣಿಜ್ಯ ಜಾಗಗಳಿಗೆ ವಹಿವಾಟು ನಡೆಸಲು ಹೋಗುತ್ತಿದ್ದರು. ಈ ಮಾಹಿತಿಯನ್ನು ಅಂದಿನ ಕಮೀಷನರ್ ಅವರ ಗಮನಕ್ಕೆ ತಂದಾಗ ಅವರು 'ಪೇ ಅಂಡ್ ಪಾರ್ಕಿಂಗ್' ಯೋಚನೆಯನ್ನು ಕೈಬಿಟ್ಟಿದ್ದರು.

ಮೈಸೂರು **–ಗೌರಿ ಸತ್ಯ, ಹಿರಿಯ ಪತ್ರಕರ್ತರು**

ರಾಜಕಾರಣದಲ್ಲಿ ಶತ್ರುವಿನ ಶತ್ರು ಮಿತ್ರ!
'ಅನ್ನಭಾಗ್ಯ'ಕ್ಕೆ ಅಕ್ಕಿ ಒದಗಿಸಲು ತೆಲಂಗಾಣ ಒಪ್ಪಿಗೆ

● ಕೇಂದ್ರ ಆಹಾರ ನಿಗಮ ಖರೀದಿ ಮಾಡದೇ ಉಳಿದಿರುವ ಭಾರೀ ಪ್ರಮಾಣದ ಅಕ್ಕಿ ಕರ್ನಾಟಕಕ್ಕೆ ಕಲ್ಪಿಸಲು ನೆರೆ ರಾಜ್ಯ ನಿರ್ಧಾರ ● 34.60 ರೂ. ದರದಲ್ಲೇ ಪೂರೈಕೆ; ಉಭಯ ರಾಜ್ಯಕ್ಕೂ ವರದಾನ

ಬೆಂಗಳೂರು, ಜೂ.16(ಕೆಎಂಶಿ)–ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರ ಅಕ್ಕಿ ನೀಡಲು ನಿರಾಕರಿಸಿದ್ದರೂ ನೆರೆಯ ತೆಲಂಗಾಣವು ರಾಜ್ಯ ಸರ್ಕಾರದ ಕೈಹಿಡಿಯಲು ಮುಂದಾಗಿದೆ.

ಕೇಂದ್ರ ಆಹಾರ ನಿಗಮದ ದರದಲ್ಲೇ ಅಂದರೆ ಪ್ರತಿ ಕೆ.ಜಿ.ಗೆ 34.60 ರೂ.ದರದಲ್ಲೇ ಕರ್ನಾಟಕಕ್ಕೆ ಅಗತ್ಯವಾಗಿರುವ ಅಕ್ಕಿ ಪೂರೈಸಲು ತೆಲಂಗಾಣ ಸರ್ಕಾರ ತೀರ್ಮಾನ ಕೈಗೊಂಡಿದೆ. ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಸಚಿವರು, ಈ ಸಂಬಂಧ ಚರ್ಚೆ ನಡೆಸಿದ ನಂತರ ಅಕ್ಕಿ ಪೂರೈಕೆಗೆ ಒಪ್ಪಂದ ಮಾಡಿಕೊಳ್ಳಲು ತೆಲಂಗಾಣ ನಿರ್ಧರಿಸಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ತೆಲಂಗಾಣ ಹಾಗೂ ಕೇಂದ್ರ ಸರ್ಕಾರದ ನಡುವಿನ ಸಂಘರ್ಷದ ಹಿನ್ನೆಲೆಯಲ್ಲಿ ಅಲ್ಲಿ ಬೆಳೆದಿರುವ ಹೆಚ್ಚುವರಿ ಅಕ್ಕಿಯನ್ನು ಕೇಂದ್ರ ಆಹಾರ ನಿಗಮ ಪೂರ್ಣ ಪ್ರಮಾಣದಲ್ಲಿ ಖರೀದಿ ಮಾಡುತ್ತಿಲ್ಲ. ● 6ನೇ ಪುಟಕ್ಕೆ



ಅನ್ನಭಾಗ್ಯಕ್ಕೆ ಅಕ್ಕಿ ಕೊಡದ ಕೇಂದ್ರದ ವಿರುದ್ಧ ಜೂ.20ರಂದು ರಾಜ್ಯಾದ್ಯಂತ ಕಾಂಗ್ರೆಸ್ ಪ್ರತಿಭಟನೆ



ಬೆಂಗಳೂರು, ಜೂ. 16(ಕೆಎಂಶಿ)–ಬಡವರ ಯೋಜನೆ 'ಅನ್ನಭಾಗ್ಯ'ಕ್ಕೆ ಅಕ್ಕಿ ಕೊಡಲು ನಿರಾಕರಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಬೀದಿಗಿಳಿದು ಹೋರಾಟ ನಡೆಸಲು ತೀರ್ಮಾನಿಸಿದೆ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇದೇ 20ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ● 9ನೇ ಪುಟಕ್ಕೆ

ಪ್ರೀತ್ಸೆ... ಪ್ರೀತ್ಸೆ...!: ವಿದ್ಯಾರ್ಥಿನಿ ಆತ್ಮಹತ್ಯೆ

ನಂಜನಗೂಡು ಗ್ರಾಮಾಂತರ ಪೊಲೀಸರಿಂದ ಯುವಕನ ಬಂಧನ

ನಂಜನಗೂಡು, ಜೂ.16– ಶಾಲೆಗೆ ಹೋಗುವಾಗ, ಬರುವಾಗ ಯುವಕ ನೋರ್ವ ಪ್ರೀತ್ಸೆ.. ಪ್ರೀತ್ಸೆ.. ಎಂದು ಪೀಡಿಸುತ್ತಿದ್ದರಿಂದ ಮನನೊಂದ ಬಾಲಕಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಬಂಚಹಳ್ಳಿ ಹುಂಡಿ ಗ್ರಾಮದಲ್ಲಿ ಜರುಗಿದೆ.

ಗ್ರಾಮದ ರಮೇಶ್ ಎಂಬುವರ ಪುತ್ರಿ ಚಂದನ(15) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ. ಈಕೆ ತಾಂಡವಪುರ ಸರ್ಕಾರಿ ಪ್ರೌಢಶಾಲೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿದ್ದಳು. ಬಂಚಹಳ್ಳಿ ಹುಂಡಿ ಗ್ರಾಮದ ವೆಂಕಟೇಶ್‌ನ ಪುತ್ರ ಶರತ್, ವಿದ್ಯಾರ್ಥಿನಿ ಚಂದನಾಳನ್ನು ಶಾಲೆಗೆ ಹೋಗುವಾಗ, ಬರುವಾಗ ಹಿಂಬಾಲಿಸಿ ಚುಡಾಯಿಸುತ್ತಿದ್ದ ಎನ್ನಲಾಗಿದೆ. ಈ ಬಗ್ಗೆ ಚಂದನಾ ತನ್ನ ತಂದೆ ರಮೇಶ್‌ರಿಗೆ ವಿಷಯ ತಿಳಿಸಿದ್ದು, ರಮೇಶ್ ಆರೋಪಿ ಶರತ್‌ಗೆ ಬುದ್ಧಿವಾದ ಹೇಳಿದ್ದರು ಎನ್ನಲಾಗಿದೆ.

ಆ ನಂತರವೂ ವಿದ್ಯಾರ್ಥಿನಿಯನ್ನು ಚುಡಾಯಿಸುವುದನ್ನು ಮುಂದುವರೆಸಿದ್ದ ಕಾರಣ ರಮೇಶ್ ತನ್ನ ಮಗಳನ್ನು ಶಾಲೆಯಿಂದ ಬಿಡಿಸಿ ಮನೆಯಲ್ಲಿಯೇ ಉಳಿಸಿಕೊಂಡಿದ್ದರು. ಇದರಿಂದ ಮನನೊಂದ ವಿದ್ಯಾರ್ಥಿನಿ ಚಂದನಾ ಶುಕ್ರವಾರ ಬೆಳಿಗ್ಗೆ ಮನೆಯ ತೀರಿಗೆ ತನ್ನ ವೇಲ್‌ನಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಮೃತ ಚಂದನಾಳ ತಂದೆ ರಮೇಶ್ ನಂಜನಗೂಡು ● 6ನೇ ಪುಟಕ್ಕೆ

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಅಪಘಾತ
ಮೈಸೂರಿನ ಆರ್‌ಬಿಐ ನೌಕರ ಸಾವು

ಮೈಸೂರು, ಜೂ.16(ಬಿಎಲ್‌ಯು)–ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಪ್ರತಿ ದಿನವೂ ಒಂದಲ್ಲಾ ಒಂದು ಅಪಘಾತ ಸಂಭವಿಸುತ್ತಿದ್ದು, ಸಾವು–ನೋವುಗಳಾಗುತ್ತಿವೆ. ಶುಕ್ರವಾರ ಅಪಘಾತದ ಸರಣಿ ಮುಂದುವರೆದಿದ್ದು, ಕಾರು ಎಕ್ಸ್‌ಪ್ರೆಸ್ ವೇ ಬದಿಯ ಕಬ್ಬಿಣದ ರೇಲಿಂಗ್‌ಗೆ ಡಿಕ್ಕಿ ಹೊಡೆದು ಸರ್ವೀಸ್ ರಸ್ತೆಗೆ ಉರುಳಿ ಬಿದ್ದ ಪರಿಣಾಮ ಮೈಸೂರಿನ ಆರ್‌ಬಿಐ ನೌಕರ ಜಗದೀಶ್(42) ಮೃತಪಟ್ಟಿದ್ದಾರೆ.

ಇಂದು ಅವರು ಕ್ರೆಟಾ ಕಾರಿನಲ್ಲಿ ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ ಬೆಂಗಳೂರಿನಿಂದ ಮೈಸೂರಿಗೆ ಬರುತ್ತಿದ್ದು, ರಾಮನಗರದ ಜೈಪುರ ಗೇಟ್ ಬಳಿ ನಿಯಂತ್ರಣ ತಪ್ಪಿದ ಕಾರು ರಸ್ತೆ ಬದಿಯ ರೇಲಿಂಗ್‌ಗೆ ಡಿಕ್ಕಿ ಹೊಡೆದು ಸರ್ವೀಸ್ ರಸ್ತೆಗೆ ಉರುಳಿ ಬಿದ್ದಿದೆ. ತೀವ್ರವಾಗಿ ಗಾಯಗೊಂಡ ಜಗದೀಶ್, ಅವರ ಪತ್ನಿ ಮತ್ತು ಇಬ್ಬರು ಮಕ್ಕಳನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲೇ ಜಗದೀಶ್ ಮೃತಪಟ್ಟಿದ್ದಾರೆ. ಈ ಸಂಬಂಧ ರಾಮನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಸ್ತಿ ಖರೀದಿಸಿ ಹಣ ನೀಡುವಾಗ ನೋಟಿನ ಮಧ್ಯೆ ಖಾಲಿ ಬಿಳಿ ಹಾಳೆ ಸೇರಿಸಿದ; ಧರ್ಮದೇಟು ತಿಂದ

— ಮಂಡ್ಯದಲ್ಲೊಂದು ವಿಲಕ್ಷಣ ವಂಚನೆ ಪ್ರಯತ್ನ ಬಯಲು —

ಮಂಡ್ಯ, ಜೂ.16– ಆಸ್ತಿ ಖರೀದಿಸಿ ಹಣ ನೀಡುವಾಗ ನೋಟುಗಳ ಮಧ್ಯೆ ಬಿಳಿ ಖಾಲಿ ಹಾಳೆಗಳನ್ನಿಟ್ಟು ವಂಚಿಸಲೆತ್ನಿಸಿದ ಆಸಾಮಿ ಸಿಕ್ಕಿ ಹಾಕಿಕೊಂಡಿರುವ ಘಟನೆ ಮಂಡ್ಯದ ಉಪನೋಂದಣಾಧಿಕಾರಿ ಕಚೇರಿ ಬಳಿ ಶುಕ್ರವಾರ ನಡೆದಿದೆ.

ಅಸಲಿ ನೋಟುಗಳ ಮಧ್ಯೆ ಬಿಳಿ ಖಾಲಿ ಹಾಳೆಗಳನ್ನಿಟ್ಟು ಜಮೀನು ಮಾಲೀಕನಿಗೆ ನೀಡಿ ವಂಚಿಸಲೆತ್ನಿಸಿದ ಸೈಯದ್ ಅಮೀನ್ ಎಂಬಾತನಿಗೆ ಧರ್ಮದೇಟು ನೀಡಿ, ಪೊಲೀಸರ ವಶಕ್ಕೊಪ್ಪಿಸಲಾಗಿದೆ.

ನಡೆದಿದ್ದೇನು?: ಮಂಡ್ಯ ತಾಲೂಕು ಕಾಳೇನಹಳ್ಳಿ ಗ್ರಾಮದ ಉಮೇಶ್, ತಮ್ಮ 3 ಗುಂಟೆ ಜಮೀನನ್ನು ಮಂಡ್ಯ ನಗರದ ಗುತ್ತಲಿನ ಸರ್ಗಿಯಾಬಾದ್ ನಿವಾಸಿ ಸೈಯದ್ ಅಮಿನ್‌ಗೆ ಮಾರಾಟ ಮಾಡಿ, 12 ಲಕ್ಷ ಮುಂಗಡ ಹಣ ಪಡೆದಿದ್ದರು. ಉಳಿದ 30 ಲಕ್ಷ ಹಣವನ್ನು ಆಸ್ತಿ ನೋಂದಣಿ ನಂತರ ನೀಡುವುದಾಗಿ ಒಪ್ಪಂದ ಮಾಡಿಕೊಂಡಿದ್ದರು. ಮಾತುಕತೆಯಂತೆ ಆಸ್ತಿ ನೋಂದಣಿ ಮಾಡಿಸಲೆಂದು ಉಮೇಶ್ ಹಾಗೂ ಸೈಯದ್ ಕಡೆಯವರು ಮಂಡ್ಯ ಉಪನೋಂದಣಾಧಿಕಾರಿ ಕಚೇರಿಗೆ ಬಂದಿದ್ದರು. ನೋಂದಣಿ ಪ್ರಕ್ರಿಯೆ ಮುಗಿಸಿ ಕಚೇರಿಯಿಂದ ಹೊರಬಂದಾಗ ಉಮೇಶ್ ಅವರಿಗೆ ಸೈಯದ್ ಬಾಕಿ ಹಣ ನೀಡಿದರು. ನೋಟಿನ ಕಂತೆಗಳನ್ನು ಪಡೆದ ಉಮೇಶ್, ಉಪನೋಂದಣಾಧಿಕಾರಿ ಕಚೇರಿ ಬಳಿಯೇ ಎಣಿಸಲು ಶುರು ಮಾಡಿದರು. ಆದರೆ ಮೊದಲ ಕಟ್ಟು ಎಣಿಸುವಾಗಲೇ ಉಮೇಶ್‌ಗೆ ಶಾಕ್ ಕಾದಿತ್ತು. ಅಸಲಿ ನೋಟುಗಳ ನಡುವೆ ನೋಟಿನ ಅಳತೆಯಲ್ಲೇ ಇರುವ ಬಿಳಿ ಖಾಲಿ ಹಾಳೆಗಳನ್ನು ಕಂಡು ಹೌಹಾರಿದರು. ಈ ರೀತಿ ವಂಚಿಸಲೆತ್ನಿಸಿದ ಸೈಯದ್‌ನನ್ನು ಪ್ರಶ್ನಿಸಿದರಾದರೂ ಸಮರ್ಪಕ ● 6ನೇ ಪುಟಕ್ಕೆ

ಬೈಕ್‌ಗೆ ಬೊಲೆರೋ ಡಿಕ್ಕಿ: ದಂಪತಿ ಸಾವು

ಬೆಟ್ಟದಪುರ, ಜೂ.16– ಬೈಕ್‌ಗೆ ಬೊಲೆರೋ ಡಿಕ್ಕಿ ಹೊಡೆದ ಪರಿಣಾಮ ದಂಪತಿ ಸಾವನ್ನಪ್ಪಿರುವ ದುರಂತ ಬೆಟ್ಟದಪುರ–ಕೆ.ಆರ್.ನಗರ ಮುಖ್ಯ ರಸ್ತೆಯಲ್ಲಿ ಸಂಭವಿಸಿದೆ. ಕೊಡಗು ಜಿಲ್ಲೆ ಕುಶಾಲನಗರ ತೊರೆನೂರು ಗ್ರಾಮದ ಮಂಜುನಾಥ್(47), ಇವರ ಪತ್ನಿ ಸುನೀತಾ(40) ದುರ್ಮರಣಕ್ಕೀಡಾದವರು. ಇವರು ಬೆಟ್ಟದಪುರ ಸಮೀಪದ ಕೊತ್ತುವಳ್ಳಿ ಗ್ರಾಮದಲ್ಲಿ ನಡೆದ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಇಂದು ಬೆಳಿಗ್ಗೆ ಬೈಕ್‌ನಲ್ಲಿ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಕೋಳಿ ತುಂಬಿದ್ದ ಬೊಲೆರೋ ವಾಹನ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಮಂಜುನಾಥ್ ಸ್ಥಳದಲ್ಲೇ ಸಾವನ್ನಪ್ಪಿದರೆ, ಪತ್ನಿ ಸುನೀತಾ ಅವರನ್ನು ಮೈಸೂರಿಗೆ ಸಾಗಿಸುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ಮೃತರಿಗೆ ಓರ್ವ ಪುತ್ರ, ಪುತ್ರಿ ಇದ್ದು, ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೆಟ್ಟದಪುರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.



ಮಂಜುನಾಥ್ ಸುನೀತಾ

ಮಹಾರಾಜರ ಬಿಟ್ಟರೆ, ಪ್ರಧಾನಿ ನರೇಂದ್ರ ಮೋದಿಯಿಂದಲೇ ಮೈಸೂರು ಅಭಿವೃದ್ಧಿ

ಜೂನ್ 22ರಿಂದ ಮೋದಿ ಸರ್ಕಾರದ ಸಾಧನೆ ಬಗ್ಗೆ ಜಾಗೃತಿ ಅಭಿಯಾನ

ಮೈಸೂರು. ಜೂ.16.(ಬಿಎಲ್‌ಯು)– ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಅಭಿವೃದ್ಧಿ ಕಾರ್ಯ, ಕಾಯ್ದೆಗಳು ಹಾಗೂ ಸಾಧನೆ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಜೂನ್. 22 ರಿಂದ ಜಾಗೃತಿ ಅಭಿಯಾನ ಆರಂಭಿಸಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ. ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ ನಡೆಯುವ ಅಂದಿನ ಕಾರ್ಯಕ್ರಮದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮ್ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು. ಬಿಜೆಪಿ ಕಾರ್ಯಕರ್ತರ ಆರು ಟೀಮ್ ಮಾಡಲಾಗುವುದು. ಆ ತಂಡಗಳ ಮೂಲಕ ನರೇಂದ್ರ ಮೋದಿ ● 9ನೇ ಪುಟಕ್ಕೆ



ಸರಣಿ ಕೌಂಟರ್ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಂಸದ ಪ್ರತಾಪ್‌ಸಿಂಹ ಟಾಂಗ್

ನಿಮ್ಮಂತೆ ಸ್ವಾರ್ಥ ಸಾಧನೆಯ ರಾಜಕೀಯ ತಂತ್ರಗಾರಿಕೆ ಪ್ರಬುದ್ಧತೆ ನನಗೆ ಬೇಕಿಲ್ಲ

ಮೈಸೂರು, ಜೂ. 16 (ಬಿಎಲ್‌ಯು)–ಎಳಸು, ಚೈಲ್ಡ್, ಪ್ರಬುದ್ಧತೆ ಇಲ್ಲದವ ಎಂದು ತನ್ನನ್ನು ಜರಿದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಂಸದ ಪ್ರತಾಪ್‌ಸಿಂಹ ವಾಗ್ದಾಳಿ ನಡೆಸಿ, ಅವರ ಒಂದೊಂದು ಮಾತಿಗೂ ಕೌಂಟರ್ ಕೊಟ್ಟಿದ್ದಾರೆ. ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ರಾಜಕೀಯ ಆರಂಭದಿಂದ ಇಲ್ಲಿ ತನಕ ಇತಿಹಾಸವನ್ನು ಜಾಲಾಡಿದ ಪ್ರತಾಪ್ ಸಿಂಹ, ಕೃತಜ್ಞತೆ ಇಲ್ಲದ ಮನುಷ್ಯ ಎಂದು ಟೀಕಿಸಿದ್ದಾರೆ.

ಸಿದ್ದರಾಮಯ್ಯ ಅವರಂತೆ ಅಡ್ಜೆಸ್ಟ್‌ಮೆಂಟ್ ಪಾಲಿಟಿಕ್ಸ್ ಮಾಡುವ ಪ್ರಬುದ್ಧತೆ ನನಗೆ ಬೇಕಿಲ್ಲ. ಚುನಾವಣೆ ವೇಳೆ ನಮ್ಮ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರಕ್ಕೆ ಚಿತ್ರನಟ ಸುದೀಪ್ ಬಾರದಂತೆ ತಡೆಯುವ, ಹಳೇ ಮೈಸೂರು ಭಾಗದಲ್ಲಿ ಶ್ರೀರಾಮುಲು ಕಾರ್ಯಕ್ರಮವನ್ನು ಕಡೇ ಘಳಿಗೆಯಲ್ಲಿ ರದ್ದು ಮಾಡಿಸುವ, ತಮ್ಮ ವಿರುದ್ಧ ಯಾರೂ ತೀಕ್ಷ್ಣ ಪ್ರತಿಕ್ರಿಯೆ ನೀಡದಂತೆ ತಡೆಯುವ ● 9ನೇ ಪುಟಕ್ಕೆ

ಡಿಕೆಶಿಗೆ ಬಹುಪರಾಕ್ ಹಾಕಿದ ಪ್ರತಾಪ್ ಸಿಂಹ

ಮೈಸೂರು. ಜೂ.16.(ಬಿಎಲ್‌ಯು)– ಸಂಸದ ಪ್ರತಾಪ್ ಸಿಂಹ ಸಾಮಾನ್ಯವಾಗಿ ಕಾಂಗ್ರೆಸ್ ನಾಯಕರ ವಿರುದ್ಧ ಬೆಂಕಿ ಕಾರುತ್ತೇ ಇರುತ್ತಾರೆ ಆದರೆ ಇಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಗುಣಗಾನ ಮಾಡಿ, ಮಾಧ್ಯಮದವರಲ್ಲಿ ಅಚ್ಚರಿ ಮೂಡಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿ, ಡಿ.ಕೆ.ಶಿವಕುಮಾರ್‌ಗೆ ಬಹುಪರಾಕ್ ಹಾಕಿದರು. ರಾಜಕೀಯವಾಗಿ ನನ್ನ ಹಾಗೂ ಡಿ.ಕೆ.ಶಿವಕುಮಾರ್ ನಡುವೆ ಸೈದ್ಧಾಂತಿಕ ವ್ಯತ್ಯಾಸಗಳಿರಬಹುದು. ಆದರೆ ಅವರು ಒಬ್ಬ ಒಳ್ಳೆಯ ಹೋರಾಟಗಾರ. ಆದರೆ ಸಿದ್ದರಾಮಯ್ಯ ಕುತಂತ್ರ, ರಾಜಕಾರಣದ ಮೂಲಕ ಡಿ.ಕೆ. ಶಿವಕುಮಾರ್ ಅವರನ್ನು ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ಡಿಕೆಶಿ ಪರ ಪ್ರತಾಪ್ ಸಿಂಹ ಬ್ಯಾಟಿಂಗ್ ಮಾಡಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಡಿ.ಕೆ.ಶಿವಕುಮಾರ್ ಮೂಲ ಕಾರಣಕರ್ತರು. ಡಿಸೈನ್ ಬಾಕ್ಸ್ ಮೂಲಕ ಗ್ಯಾರಂಟಿ ಸ್ಕೀಮ್ ಮಾಡಿ ● 9ನೇ ಪುಟಕ್ಕೆ

ಬಿಎಸ್‌ವೈ ನಂತರ ಬಂದವರು ಸಮರ್ಥ
ಆಡಳಿತ ನೀಡಿದ್ದರೆ ಬಿಜೆಪಿಗೆ ಈ ಸ್ಥಿತಿ ಬರುತ್ತಿರಲ್ಲ

ಮೈಸೂರು, ಜೂ.16–ಬಿಜೆಪಿ ವರಿಷ್ಠ ನಾಯಕ ಯಡಿಯೂರಪ್ಪ ಅವರ ನಂತರ ಬಂದವರು ಸಮರ್ಥವಾಗಿ ಅಧಿಕಾರ ನಡೆಸಿದ್ದರೆ, ಬಿಜೆಪಿಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರನ್ನು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಪರೋಕ್ಷವಾಗಿ ಟೀಕಿಸಿದ್ದಾರೆ.

2018ರ ಚುನಾವಣೆಯಲ್ಲಿ ಬಿಜೆಪಿಗೆ ಸ್ವಲ್ಪದರಲ್ಲಿ ಬಹುಮತ ತಪ್ಪಿತು. ಕಾರ್ಯಕರ್ತರು ಬೇಸರಗೊಂಡಿದ್ದರು. ಆ ನಂತರ ಬಿ.ಎಸ್.ಯಡಿಯೂರಪ್ಪ ಅವರು 2019ರಲ್ಲಿ ತುಂಬಾ ಪ್ರಯತ್ನ ಮಾಡಿ ಬಿಜೆಪಿ ಸರಕಾರವನ್ನು ಅಧಿಕಾರಕ್ಕೆ ತಂದರು. ಈ ವೇಳೆ ರಾಜ್ಯದಲ್ಲಿ ಪ್ರವಾಹ ಪರಿಸ್ಥಿತಿ ಇತ್ತು. ಬಿಎಸ್‌ವೈ ಒಬ್ಬರೇ ಪರಿಸ್ಥಿತಿ ನಿಭಾಯಿಸಿದ್ದರು. ನಂತರ ಕೋವಿಡ್ ಅಪ್ಪಳಿಸಿತು. ಆಗ ಜನರ ಪ್ರಾಣ ಉಳಿಸಲು ಪಣ ತೊಟ್ಟರು. ಯಡಿಯೂರಪ್ಪ ಅವರಿಂದ ಅಧಿಕಾರ ಪಡೆದ ಅತಿರಥ ಮಹಾರಥರು ಮಾಡಿದ್ದೇನು? ಎಂದು ಬಸವರಾಜ ಬೊಮ್ಮಾಯಿ ಅವರಿಗೆ ಪರೋಕ್ಷವಾಗಿ ತಿವಿದರು. ಪ್ರವೀಣ್ ನೆಟ್ಟಾರು, ಹರ್ಷ ಕೊಲೆಯಾದಾಗ ಸೂಕ್ತ ಕ್ರಮ ಕೈಗೊಳ್ಳಲಿಲ್ಲ. ಮತ್ತೆ ಅಧಿಕಾರಕ್ಕೆ ತರಬೇಕೆಂಬ ● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಆಶಾವಾದಿ ಪ್ರಯಾಣಿಕ : (ಹಡಗು ಮುಳುಗುವುದರಲ್ಲಿದ್ದಾಗ) ಇಲ್ಲಿಂದ ಭೂಮಿಗೆ ಎಷ್ಟು ದೂರವಿದೆ?
ಕ್ಯಾಪ್ಟನ್ : (ಕೂಗಾಡುತ್ತಿದ್ದ ಪ್ರಾಣಭಯದಲ್ಲಿದ್ದ ಪ್ರಯಾಣಿಕರನ್ನು ಸಂತೈಸಿ) ಎರಡು ಮೈಲು
ಆಶಾವಾದಿ : ಯಾವ ಕಡೆಗೆ?
ಕ್ಯಾಪ್ಟನ್ : ಕೆಳಗಡೆಗೆ!

ಮೈಸೂರು ಮಿತ್ರ
ಶನಿವಾರ, 17 ಜೂನ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಒಳ್ಳೆಯ ಕೆಲಸವನ್ನು ಮಾಡುವವನು ಯಾವತ್ತೂ ದುರ್ಗತಿಯನ್ನು ಹೊಂದುವುದಿಲ್ಲ – ಭಗವದ್ಗೀತೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕರೆದು ಹೋಳಿಗೆ ಕೊಟ್ಟರೆ ಬೆಲ್ಲ ಸಾಲದು ಎಂದನಂತೆ

ನಿಮ್ಮ ಪತ್ರಗಳು

ಸೇತುವೆ ಅಗಲೀಕರಣ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ



ಮಾನ್ಯರೆ,

ಮೈಸೂರಿನ ಜೆ.ಪಿ.ನಗರದ ಮೂಲಕ ಶ್ರೀನಗರ ತಲುಪುವ ರಿಂಗ್ ರಸ್ತೆಯ ಸೇತುವೆಯ ಅಗಲೀಕರಣದ ಕೆಲಸವು ಕಳೆದ ಕೆಲ ತಿಂಗಳಿಂದ ಕುಂಟುತ್ತಾ ಸಾಗಿದೆ. ಇದರಿಂದಾಗಿ ಜನರಿಗೆ ತುಂಬಾ ತೊಂದರೆಯಾಗುತ್ತಿದೆ. ಪರ್ಯಾಯವಾಗಿ ವ್ಯವಸ್ಥೆ ಮಾಡಿರುವ ಎಡಭಾಗಕ್ಕೆ ತಿರುಗಿ ಪುನಃ ಶ್ರೀನಗರ ತಲುಪುವ ರಸ್ತೆಯೂ ಕಿರಿದಾಗಿದೆ. ಇಲ್ಲಿ ಮೋರಿಯು ನೆಲ ಮಟ್ಟದಲ್ಲಿ ಇದ್ದು, ರಾತ್ರಿಯ ಸಮಯದಲ್ಲಿ ವಿದ್ಯುತ್ ಇಲ್ಲದೆ ಇಲ್ಲಿ ವಾಹನ ದಟ್ಟಣೆಯಾಗಿ ತೀವ್ರ ತೊಂದರೆಯಾಗಿದೆ. ಸಂಬಂಧಪಟ್ಟವರು ಶೀಘ್ರ ಸೇತುವೆ ಅಗಲೀಕರಣ ಕಾಮಗಾರಿ ಪೂರ್ಣಗೊಳಿಸುವ ಮೂಲಕ ಕಿರಿಕಿರಿಯನ್ನು ತಪ್ಪಿಸಲಿ.

–ಪಡುವಾರಹಳ್ಳಿ ಎಂ. ರಾಮಕೃಷ್ಣ, ವಕೀಲರು

ರಕ್ಷಣೆಯ ನೆಪದಲಿ ಕ್ರೌರ್ಯವೇಕೆ?

ಮಾನ್ಯರೆ,

ಗೋ ಸಂರಕ್ಷಕರಿಂದ ಯುವಕನ ಹತ್ಯೆ. ಈ ತರಹದ ಕ್ರೌರ್ಯ ಮೆರೆಯುವುದಾದರೂ ಏಕೆ? ನೆರೆಯ ರಾಜ್ಯ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿ ನಡೆದ ಘಟನೆ ಭಾರತದ ಸಂವಿಧಾನದ ಆಶಯವನ್ನೇ ಪ್ರಶ್ನೆ ಮಾಡುವಂತಿದೆ ಹಾಗೂ ಮಾಡುತ್ತಲೂ ಇವೆ. ಇದು ಕೇವಲ ಒಂದು ರಾಜ್ಯಕ್ಕೆ ಸೀಮಿತವಾಗಿಲ್ಲ. ಹಲವು ನಿದರ್ಶನಗಳು ಕರ್ನಾಟಕದಲ್ಲಿಯೂ ಜರುಗಿರುವುದು ದುರ್ದೈವದ ಸಂಗತಿ.

ಆದರೆ ಇಲ್ಲಿ ಎಷ್ಟರ ಮಟ್ಟಿಗೆ ಗೋ ರಕ್ಷಣೆಯು ದೇಶದ ಕಾನೂನು ವ್ಯಾಪ್ತಿಗೆ ಒಳಪಟ್ಟು ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿದೆ ಎಂಬುದು ಬಹುಮುಖ್ಯವಾದ ಆಯಾಮವಾಗಿದೆ.

ಕಳೆದ ಅವಧಿಯಲ್ಲಿ ಇದ್ದಂತಹ ಸರ್ಕಾರವು ಜಾರಿಗೆ ತಂದಂತಹ ಗೋ ಹತ್ಯೆ ನಿಷೇಧ ಕಾಯ್ದೆಯಲ್ಲಿಯೂ ಸ್ಪಷ್ಟವಾಗಿ ಉಲ್ಲೇಖವಾಗಿರುವಂತೆ ಸಕ್ಷಮ ಪ್ರಾಧಿಕಾರಿಗಳು ಕಾನೂನು ಉಲ್ಲಂಘನೆಯಾಗುವುದು ಕಂಡುಬಂದಲ್ಲಿ ಸಂಬಂಧಿಸಿದ ವ್ಯಕ್ತಿ, ವಾಹನವನ್ನಷ್ಟೇ ಜಪ್ತಿ ಮಾಡುವಂತೆ ಅವಕಾಶ ನೀಡಿದ್ದು ಮುಂದುವರಿದು ಉಪ ದಂಡಾಧಿಕಾರಿಗಳು ಮತ್ತು ವಿಶೇಷ ನ್ಯಾಯಾಲಯದ ಹೆಗಲಿಗೆ ಇವುಗಳ ವಿಚಾರಣೆಯ ಜವಾಬ್ದಾರಿಯನ್ನು ವಹಿಸಿದೆ.

ಆದರೆ ಇಷ್ಟೆಲ್ಲಾ ಕಾನೂನಾತ್ಮಕ ಚೌಕಟ್ಟನ್ನು ಒಳಗೊಂಡಂತೆ ಗೋ ಸಂರಕ್ಷಣೆ ಮಾಡುವುದು ದೇಶದ ಕಾನೂನು ಕಾಯ್ದೆಗಳನ್ನು ಪಾಲಿಸುವುದು ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯವೂ ಹೌದು. ಆದರೆ ಅದರ ಹೆಸರಿನಲ್ಲಿ ಕೆಲವು ವಿಕೃತ ಮನಸ್ಥಿತಿಯವರು ಸಮಾಜದ ಸ್ವಾಸ್ಥ್ಯ ಹಾಳು ಮಾಡುವುದರ ಸಲುವಾಗಿಯೇ ಹತ್ಯೆ ಮಾಡುವುದು, ಅವರ ಕಟುಮನಸ್ಸಿನ ಕ್ರೌರ್ಯದ ಪ್ರತಿರೂಪವಾಗಿದೆ. ಪ್ರತಿಯೊಂದು ಜೀವವು ಕೂಡ ಅತ್ಯಮೂಲ್ಯವಾದವುಗಳಲ್ಲವೇ? ಅದು ಪ್ರಾಣಿಯಾದರೂ ಸರಿ ಮನುಷ್ಯನಾದರು ಸರಿ.

ಇನ್ನಾದರೂ ಉನ್ನತ ಅಧಿಕಾರಿಗಳು ಇಂತಹ ದುರ್ಘಟನೆಗಳು ಮರುಕಳಿಸದಂತೆ ಎಚ್ಚೆತ್ತು ಕಾನೂನಿಗೆ ಪ್ರತಿಯೊಬ್ಬ ಪ್ರಜೆಯು ಗೌರವ ಕೊಡುವ ಹಾಗೆ ಪರಿಸ್ಥಿತಿ ನಿರ್ಮಾಣ ಮಾಡಿ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲಿ.

–ರವಿಕುಮಾರ್ ಎಸ್.ಮುಡಿಗುಂಡ, ಕೊಳ್ಳೇಗಾಲ


ಯೋಗ ಮಾಡಿ ದೈಹಿಕವಾಗಿ ಸದೃಢವಾಗಿರಿ

ಮಾನ್ಯರೆ,

ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಆರೋಗ್ಯ ಅತೀ ಅಮೂಲ್ಯವಾದದು, ಇದನ್ನು ಕಾಪಾಡಿಕೊಳ್ಳುವುದರ ಜೊತೆಗೆ ದೈಹಿಕವಾಗಿ ಸದೃಢವಾಗಬೇಕಾದರೆ ಯೋಗ ಅವಶ್ಯಕ. ಹಲವಾರು ರೋಗ ರುಜಿನಗಳು ನಮ್ಮ ದೇಹವನ್ನು ನುಸುಳದಂತೆ ತಡೆಯಲು ಪ್ರತಿನಿತ್ಯ ಯೋಗ ಮಾಡುವುದು ಒಳ್ಳೆಯದು. ಪ್ರಾರಂಭದಿಂದಲೇ ಯೋಗವನ್ನು ದಿನನಿತ್ಯದ ಚಟುವಟಿಕೆಯನ್ನಾಗಿ ಅಭ್ಯಾಸ ಮಾಡುವುದರಿಂದ ದೈಹಿಕ ಮತ್ತು ಮಾನಸಿಕವಾಗಿ ಅರೋಗ್ಯವಂತನನ್ನಾಗಿಸುತ್ತದೆ. ಪ್ರತಿವರ್ಷ ಜೂನ್ 21 ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಎಲ್ಲೆಡೆ ಆಚರಿಸಲಾಗುತ್ತದೆ. ಕೇವಲ ಆಚರಣೆಗೆ ಮಾತ್ರ ಯೋಗವನ್ನು ಮಾಡದೆ ದಿನನಿತ್ಯ ಅದನ್ನು ನಮ್ಮ ಅಭ್ಯಾಸವನ್ನಾಗಿ ಮಾಡಿಕೊಳ್ಳುವುದರ ಜೊತೆಗೆ ನಮ್ಮ ಆರೋಗ್ಯವನ್ನು ನಾವು ಕಾಪಾಡಿಕೊಳ್ಳುವಲ್ಲಿ ಮುಂದಾಗಬೇಕು, ಮುಂದಿನ ಪೀಳಿಗೆಗೆ ಯೋಗದ ಮಹತ್ವವನ್ನು ತಿಳಿಸುವಷ್ಟು ನಾವು ಬಲಿಷ್ಠರಾಗಬೇಕು.

–ಕೆ.ಎನ್.ಅನುಶ್ರೀ, ಪತ್ರಿಕೋದ್ಯಮ ವಿಭಾಗ, ಮೈಸೂರು


ಒಣಗಿದ ಮರ ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ ವಿಜಯನಗರ 3ನೇ ಹಂತದ ಜೋಡಿ ಬೇವಿನ ಮರ ಇರುವ ರಸ್ತೆಯಲ್ಲಿ ಬೃಹತ್ ಮರ ಒಣಗಿ ನಿಂತಿದ್ದು, ಈ ಮರ ಮಳೆ–ಗಾಳಿಗೆ ಯಾವಾಗ ಬೇಕಾದರೂ ಮುರಿದು ಬೀಳುವ ಹಂತದಲ್ಲಿದೆ. ಒಂದು ಕೊಂಬೆ ಬಿದ್ದರೂ ಪ್ರಾಣಾಪಾಯ ತಪ್ಪಿದ್ದಲ್ಲ. ಇದು ಪಾಲಿಕೆ ಸದಸ್ಯರಿಗಾಗಲೀ, ಪಾಲಿಕೆ ಅಧಿಕಾರಿಗಳಿಗಾಗಲೀ ಕಾಣುತ್ತಿಲ್ಲ. ಈ ರಸ್ತೆಯಲ್ಲಿ ಬೆಳಗ್ಗೆ ವಾಯು ವಿಹಾರಿಗಳು, ವಾಹನ ಸಂಚಾರ ಇದ್ದೇ ಇರುತ್ತದೆ. ಏನಾದರೂ ಅನಾಹುತ ಆಗುವ ಮುಂಚೆ ಎಚ್ಚೆತ್ತುಕೊಳ್ಳಲಿ.

–ವಿ. ಕೇಶವಮೂರ್ತಿ,
ಜ್ಯೋತಿಷ ವಿದ್ವಾಂಸ.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ನಮ್ಮ ದೃಷ್ಟಿಕೋನಗಳು ಬದಲಾಗಬೇಕು...!!!

> “ನಮ್ಮಲ್ಲಿ ಕೆಲವರು ಯಾವ ಕೆಲಸವನ್ನು ತಾವು ಮಾಡಲಾಗುವುದಿಲ್ಲವೋ ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಾರೆ. ಅವರು ನಮ್ಮ ದೇಶದ ನಾಯಕರು ಹೀಗೆ ಮಾಡಬೇಕಾಗಿತ್ತು, ಹಾಗೆ ಮಾಡಬೇಕಾಗಿತ್ತು. ಅವರು ಹಾಗೆ ಮಾಡದಿರುವುದರಿಂದ ದೇಶಕ್ಕೆ ಹೇಗೆಲ್ಲಾ ನಷ್ಟವಾಗುತ್ತದೆ ಎಂದು ಹಲಬುತ್ತಾರೆ. ಕ್ರಿಕೆಟ್ ಇಷ್ಟಪಡುವವರು ನಮ್ಮ ದೇಶದ ತಂಡ ಸೋತಾಗ ಖಿನ್ನರಾಗುತ್ತಾರೆ. ಅವರು ಯಾವ ಬ್ಯಾಟ್ಸ್‌ಮನ್, ಯಾವ ಬೌಲರ್ ಹೇಗೆ ತಪ್ಪುಮಾಡಿದರು ಎಂದು ಗುನುಗುತ್ತಾ ದುಃಖಿಸುತ್ತಾರೆ. ಅಮೇರಿಕಾದ ಅಧ್ಯಕ್ಷನ ಹೇಳಿಕೆ ಸರಿಯಲ್ಲ ಎಂದು ಹೇಳುತ್ತಾರೆ. ಹೀಗೆ ಅವರು ತಾವು ಆ ಬಗ್ಗೆ ಏನು ಮಾಡಲಾಗದಿದ್ದರೂ ಚಿಂತಿಸುತ್ತಾರೆ.

ನಮಗೆ ನಮ್ಮದೇ ಆದ ಸ್ವಭಾವ ಹಾಗೂ ದೃಷ್ಟಿಕೋನಗಳು ಇರುತ್ತವೆ. ಹಾಗಾಗಿ ಎಲ್ಲ ವಸ್ತು–ವಿಷಯಗಳನ್ನು ಅದೇ ದೃಷ್ಟಿಕೋನದಿಂದ ನೋಡುತ್ತೇವೆ. ಇದು ಕೆಲವು ಸಲ ಸರಿ ಎನಿಸಿದರೂ ಯಾವಾಗಲೂ ಸರಿ ಎನಿಸದಿರಬಹುದು. ಆದರೂ ನಮಗೆ ನಮ್ಮದೇ ಆದ ದೃಷ್ಟಿಕೋನ ಇರಬೇಕು ಎಂಬುದು ನಿಜ. ಹಾಗಾದಾಗ ನಾವು ಮೋಸ ಹೋಗುವುದು ಕಡಿಮೆ. ನಾವು ನಮ್ಮದೇ ಆದ ದೃಷ್ಟಿಕೋನ ಬೆಳೆಸಿಕೊಳ್ಳದೇ ಇದ್ದಾಗ ಯಾರು ಹೇಳಿದರೂ ಅದು ಸರಿಯೇನೋ ಎನ್ನಿಸಿಬಿಡುತ್ತದೆ. ಈ ದೃಷ್ಟಿಕೋನ ನಮ್ಮ ಜೀವನದ ಅನುಭವದ ಆಧಾರದ ಮೇಲೆ ಬರುತ್ತದೆ. ನಾವು ಹೆಚ್ಚು ಶ್ರಮಪಟ್ಟು ಸಂಪಾದನೆ ಮಾಡುತ್ತಿದ್ದರೆ, ಹಣವನ್ನು ನೋಡುವ ದೃಷ್ಟಿಕೋನ ಬೇರೆಯಾಗಿರುತ್ತದೆ. ನಾವು ನಮ್ಮ ಪರಂಪರಾಗತವಾಗಿ ಬಂದ ಹಣದ ಒಡೆಯರಾದರೆ ನಮಗೆ ದುಡ್ಡಿನ ಬೆಲೆ ಅಷ್ಟಾಗಿ ಗೊತ್ತಾಗುವುದಿಲ್ಲ. ಮೂಟೆ ಹೊರುವವನಿಗೆ ಮೂಟೆಯ ತೂಕ ಎಷ್ಟು ಎಂಬುದು ಗೊತ್ತಾಗುತ್ತದೆ. ಹೊರಗಿನವರಿಗೆ ಅದನ್ನು ತೂಕ ಮಾಡಿಯೇ ತಿಳಿದುಕೊಳ್ಳಬೇಕಾಗುತ್ತದೆ. ಇದು ಅನುಭವ. ನಾವು ಮಾರುಕಟ್ಟೆಗೆ ಹೋದಾಗ ತರಕಾರಿ, ಈರುಳ್ಳಿ, ಆಲೂಗಡ್ಡೆ ಇತ್ಯಾದಿ ಖರೀದಿಸುವಾಗ ಅದನ್ನು ಮಾರುವವರು ತಕ್ಕಡಿಗೆ ಹಾಕುವ ಪ್ರಮಾಣ ಗಮನಿಸಬೇಕು. ಅವರು ಹೆಚ್ಚೂ ಕಡಿಮೆ ಸರಿಯಾಗಿ ಅಷ್ಟೇ ವಸ್ತುಗಳನ್ನು ತಕ್ಕಡಿಗೆ ಹಾಕುತ್ತಾರೆ. ನಮಗೆ ಅನುಮಾನ ಬರಬಾರದೆಂದು ಅದನ್ನು ತೂಕಕ್ಕೆ ಹಾಕಿ ನಮ್ಮನ್ನು ಸಮಾಧಾನಪಡಿಸುತ್ತಾರೆ. ಆದರೆ ಅವರಿಗೆ ಒಂದು ಕೆ.ಜಿ ಎಂದರೆ ಎಷ್ಟು ಪ್ರಮಾಣ ಎಂದು ಗೊತ್ತಿರುತ್ತದೆ.

ಹಿಂದೆ ಓದಿದ ಒಂದು ಕಥೆ ನೆನಪಾಗುತ್ತದೆ. ಒಬ್ಬ ಹಸುವಿನ ತುಪ್ಪ ಮಾರುವವನ ಬಳಿ ಒಬ್ಬ ವ್ಯಾಪಾರಿ ನಿಯಮಿತವಾಗಿ ತುಪ್ಪ ಖರೀದಿಸುತ್ತಿರುತ್ತಾನೆ. ಇಬ್ಬರಿಗೂ ಪರಸ್ಪರ ನಂಬಿಕೆ. ಆದರೆ ಒಮ್ಮೆ ವ್ಯಾಪಾರಿ ಸ್ವಲ್ಪ ಅನುಮಾನಗೊಂಡು ತಾನು ಕೊಂಡ ತುಪ್ಪವನ್ನು ತೂಕಕ್ಕೆ ಹಾಕುತ್ತಾನೆ. ಅದರಲ್ಲಿ 50 ಗ್ರಾಮಿನಷ್ಟು ತುಪ್ಪ ಕಡಿಮೆ ಇರುತ್ತದೆ. ಆಗ ಅವನಿಗೆ ತಾನು ಈವರೆವಿಗೆ ಮೋಸ ಹೋದೆ ಎನ್ನಿಸುತ್ತದೆ ಹಾಗೂ ತುಪ್ಪ ಕೊಡುತ್ತಿದ್ದ ರೈತನ ಮೇಲೆ ಕೋಪ ಬರುತ್ತದೆ. ಅವನು ನ್ಯಾಯಾಲಯದಲ್ಲಿ ತುಪ್ಪ ಮಾರುವವನ ವಿರುದ್ಧ ದಾವೆ ಹೂಡುತ್ತಾನೆ. ನ್ಯಾಯಾಧೀಶರಿಗೆ ವಿಚಾರಣೆ ಸಮಯದಲ್ಲಿ ರೈತ ಅಮಾಯಕ ಎನ್ನಿಸುತ್ತದೆ. ಅವರು ರೈತನಿಗೆ ನೀನು ಅಳತೆ ಹೇಗೆ ಮಾಡುತ್ತೀಯಾ? ಎಂದು ಕೇಳುತ್ತಾರೆ. ಆಗ ರೈತ ನಾನು ಈ ವ್ಯಾಪಾರಿ ಅಂಗಡಿಯಿಂದ ಆಗಾಗ್ಗೆ ಕೆಲವು ವಸ್ತುಗಳನ್ನು ಕೊಳ್ಳುತ್ತೇನೆ. ನನ್ನ ಬಳಿ ತೂಕ ಮಾಡುವ ಬಟ್ಟುಗಳು ಇಲ್ಲ. ಹಾಗಾಗಿ ಈ ವ್ಯಾಪಾರಿ ಕೊಟ್ಟ ಒಂದು ಕೆಜಿ ವಸ್ತುವನ್ನು ಒಂದು ಬದಿಗೆ ಇರಿಸಿ, ಮತ್ತೊಂದು ಬದಿಯಲ್ಲಿ ತುಪ್ಪ ಇಟ್ಟು ತೂಗಿ ಅದನ್ನೇ ಮಾನದಂಡವಾಗಿ ಮಾಡಿಕೊಂಡು ಮಾರುತ್ತಿದ್ದೇನೆ ಎನ್ನುತ್ತಾನೆ. ಪರಿಶೀಲಿಸಿದಾಗ ವ್ಯಾಪಾರಿ ಕಡಿಮೆ ಪ್ರಮಾಣದ ಪದಾರ್ಥ ನೀಡುತ್ತಿದ್ದುದು ಬೆಳಕಿಗೆ ಬಂದು ನ್ಯಾಯಾಲಯ ಅವನಿಗೆ ಛೀಮಾರಿ ಹಾಕುತ್ತದೆ. ನನ್ನ ಬಳಿಯೇ ತಪ್ಪು ಇಟ್ಟುಕೊಂಡು ಇನ್ನೊಬ್ಬರನ್ನು ದೂಷಿಸುವುದು ಸರಿಯಾದ ಕ್ರಮವಾಗುವುದಿಲ್ಲ. ನಾನು ಸರಿಯಾದರೆ ಇತರರೂ ಸರಿಯಾಗುತ್ತಾರೆ ಎಂಬ ಮನೋಭಾವ ಬೆಳೆಯುತ್ತದೆ ಎಂಬುದಕ್ಕೆ ಈ ಕಥೆಯನ್ನು ಹೇಳಲಾಗುತ್ತದೆ. ಆದ್ದರಿಂದ ದೂರುವ ಮೊದಲು ನಾವು ಸರಿಯಾಗಿರಬೇಕು. ಇಲ್ಲದಿದ್ದರೆ ಅಪಹಾಸ್ಯಕ್ಕೆ ತುತ್ತಾಗುತ್ತೇವೆ.

ಇದು ಒಂದು ಭಾಗವಾದರೆ ಮತ್ತೊಂದು ನಾವು ನೋಡುವ ದೃಷ್ಟಿಕೋನ ಹೇಗಿರಬೇಕು ಎಂಬುದಕ್ಕೆ ಮತ್ತೊಂದು ನಿದರ್ಶನ; ಒಂದು ರಸ್ತೆಯಲ್ಲಿ ಒಂದು ದೊಡ್ಡದೆನ್ನಬಹುದಾದ ಕಲ್ಲು ಇದ್ದರೆ, ಅದನ್ನು ಎಡವಿಕೊಂಡು ಹೋಗುವವರೇ ಜಾಸ್ತಿ. ಅವರೆಲ್ಲರೂ ಆ ಕಲ್ಲಿಗೆ ಶಾಪ ಹಾಕುತ್ತಿರುತ್ತಾರೆ. ಆದರೆ ಒಬ್ಬ ವಿಶಾಲ ದೃಷ್ಟಿಕೋನದ ಮನುಷ್ಯ ಆ ಕಲ್ಲನ್ನು ಬುಡಸಮೇತ ಕಿತ್ತು ಪಕ್ಕಕ್ಕೆ ಹಾಕುತ್ತಾನೆ. ಆಗ ಎಲ್ಲರಿಗೂ ರಸ್ತೆ ಸಲೀಸಾಗುತ್ತದೆ. ಇಲ್ಲೂ ದೃಷ್ಟಿಕೋನದ ವ್ಯತ್ಯಾಸ. ಕಲ್ಲು ಎಡವಿಕೊಂಡು ಹೋಗುತ್ತಿದ್ದವರಿಗೆ ಆ ಕಲ್ಲನ್ನು ಅಲ್ಲಿಂದ ತೆರವು ಮಾಡಬೇಕು ಎಂಬ ದೃಷ್ಟಿಕೋನ ಇರಲಿಲ್ಲವಾದ್ದರಿಂದ ಕಲ್ಲನ್ನು ಎಡವಿಕೊಂಡೇ ಹೋಗುತ್ತಿದ್ದರು. ಆ ಕಲ್ಲನ್ನು ಕಿತ್ತು ದೂರ ಹಾಕಬೇಕು ಎಂದು ಹೊಳೆದದ್ದೆ ವಿವೇಚನೆಯ ವಿಚಾರ.

ಇದು ಕೇವಲ ಕಲ್ಲು ಎಂಬುದಕ್ಕೆ ಸಂಬಂಧಿಸಿದ್ದಲ್ಲ. ನಾವು ಸಮಾಜದಲ್ಲಿ ನೋಡುವ ಕೆಲವರು ಯಾವಾಗಲೂ ಚಿಂತಾಕ್ರಾಂತರಾಗಿರುವುದು ಕಂಡುಬರುತ್ತದೆ. ಅವರು ಎಲ್ಲದರಲ್ಲೂ ತಪ್ಪು ಹುಡುಕುತ್ತಾ ಹೋಗುತ್ತಾರೆ. ಹಾಗಾಗಿ ಅವರಿಗೆ ಕೇವಲ ತಪ್ಪುಗಳು ಮಾತ್ರವೇ ಗೋಚರವಾಗುತ್ತವೆ. ಅದೇ ಕೆಲವರು ಎಂತಹುದೇ ಸನ್ನಿವೇಶ ಬಂದಾಗಲೂ ಸಮಾಧಾನದಿಂದ ಇರುತ್ತಾರೆ. ಅವರ ದೃಷ್ಟಿಕೋನ ತಪ್ಪು ಹುಡುಕುವ ಬದಲು: ತಪ್ಪಾಗುತ್ತದೆ, ಅದು ಸಹಜ, ಅದನ್ನೇಕೆ ದೊಡ್ಡದು ಮಾಡಬೇಕು? ಎಂಬ ಮನೋಭಾವ ಅವರಲ್ಲಿರುತ್ತದೆ. ಹಾಗಾಗಿ ಅವರು ನೆಮ್ಮದಿಯ ಜೀವನ ಸಾಗಿಸುತ್ತಾರೆ. ಮನೆಯಲ್ಲಿ ಮನೆಯ ಒಬ್ಬರು ಒಂದು ಗಾಜಿನ ಪಾತ್ರೆ ಅಥವಾ ಲೋಟವನ್ನು ಬೀಳಿಸಿದರು ಎಂದಾದಾಗ ಅದು ಒಡೆದುಹೋಗುವುದು ಸಹಜ. ಅದಕ್ಕೆ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ? ಗಾಜಿನ ಪದಾರ್ಥ ಒಡೆದವರನ್ನು ಹೊಡೆಯುವುದು, ನಿಂದಿಸುವುದು ಮಾಡಿದಾಗ ಒಡೆದವರಿಗೆ ಹೆದರಿಕೆಯಾಗಿ ಅವರಿಂದ ಮತ್ತಷ್ಟು ತಪ್ಪುಗಳಾಗುತ್ತವೆ. ಅದು ಬಿಟ್ಟು ಒಡೆಯಿತಾ? ಗಾಜಿನ ಪಾತ್ರೆಯ ಬಗ್ಗೆ ಹೆಚ್ಚಿನ ಗಮನವಿರಬೇಕು. ಈಗ ಒಡೆದಿದ್ದಾಗಿದೆ, ಅದನ್ನು ಮತ್ತೆ ಸರಿಮಾಡಲಾಗುವುದಿಲ್ಲ. ಮುಂದೆ ಹೀಗಾಗದಂತೆ ಎಚ್ಚರವಹಿಸು ಎಂದು ಹೇಳಿದರೆ, ಆ ರೀತಿ ಒಡೆದುಹಾಕಿದವರು ಎಚ್ಚರಗೊಳ್ಳುತ್ತಾರೆ ಹಾಗೂ ಮುಂದೆ ಗಾಜಿನ ಪಾತ್ರೆ ಹಿಡಿದಾಗ ಎಚ್ಚರಿಕೆ ವಹಿಸುತ್ತಾರೆ. ಇದು ನಮ್ಮ ದೃಷ್ಟಿಕೋನ ಹೇಗಿರಬೇಕು ಎಂಬುದಕ್ಕೆ ಉದಾಹರಣೆಯಾಗುತ್ತದೆ.

ಈ ಹಿಂದೆ ಓದಿದ ಮತ್ತೊಂದು ಕಥೆ ನೆನಪಾಗುತ್ತದೆ. ಅದು ಒಬ್ಬ ಪ್ರಖ್ಯಾತ ಲೇಖಕನ ಕಥೆ. ತಾನು ಮಾಮೂಲಿಯಂತೆ ಬರೆಯಲು ಪ್ರಾರಂಭಿಸುತ್ತಾನೆ. ಕಳೆದ ವರ್ಷ ತನ್ನ ಜೀವನದಲ್ಲಾದ ಘಟನೆಗಳ ಕುರಿತು ಬೇಸರದಿಂದ ಬರೆಯುತ್ತಾನೆ. ಆಗ ನನಗೆ ಗಾಲ್‌ಬ್ಲಾಡರ್‌ನಲ್ಲಿ ಕಲ್ಲು ಶೇಖರಣೆಯಾದ ಕಾರಣ ಬಹಳ ದಿನಗಳು ನೋವು ಅನುಭವಿಸಿದೆ. ಕೊನೆಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕಾಯಿತು. ಅದೇ ವರ್ಷ ನನಗೆ 60 ವರ್ಷ ವಯಸ್ಸಾದ ಕಾರಣ ನಾನು ನಿವೃತ್ತಿ ಹೊಂದಬೇಕಾಯಿತು. ನಾನು ಕೆಲಸ ಮಾಡುತ್ತಿದ್ದ ಸಂಸ್ಥೆಯಲ್ಲಿ 35 ವರ್ಷಗಳ ಸೇವೆ ಸಲ್ಲಿಸಿದ್ದೆ. ನನ್ನ ಕೆಲಸವನ್ನು ನಾನು ಬಹಳವಾಗಿ ಇಷ್ಟಪಟ್ಟು ಮಾಡುತ್ತಿದ್ದೆ. ಆದರೆ ವಯಸ್ಸಾದ ಕಾರಣ ನಿವೃತ್ತಿ ಹೊಂದಬೇಕಾಯಿತು. ಅದೇ ವರ್ಷ ನಾನು ಹೆಚ್ಚಾಗಿ ಪ್ರೀತಿಸುತ್ತಿದ್ದ ನನ್ನ ತಾಯಿ ಮರಣ ಹೊಂದಿದಳು. ಅದೇ ವರ್ಷ ನನ್ನ ಮಗ ಅಂತಿಮ ವರ್ಷದ ವೈದ್ಯಕೀಯ ಪರೀಕ್ಷೆಯಲ್ಲಿ ನಪಾಸಾದ. ಅದಕ್ಕೆ ಕಾರಣ ಅವನಿಗೆ ಆದ ಕಾರಿನ ಅಪಘಾತ. ಆ ಕಾರಿನ ರಿಪೇರಿಗೆ ಹೆಚ್ಚು ಹಣ ಖರ್ಚು ಮಾಡಬೇಕಾಯಿತು. ಹೀಗೆ ಕಳೆದ ವರ್ಷ ನನಗೆ ಕೆಟ್ಟದ್ದೇ ಆಗಿತ್ತು ಎಂದು ನೆನೆದು ನೆನೆದು ಕೊನೆಗೆ 'ಕಳೆದ ವರ್ಷ ಅತ್ಯಂತ ಕೆಟ್ಟ ವರ್ಷವಾಗಿತ್ತು' ಎಂದು ದುಃಖದಿಂದ ಬರೆಯುತ್ತಾನೆ.

ಕೆಲ ಸಮಯದ ನಂತರ ಅವನ ಕೊಠಡಿಗೆ ಅವನ ಮಡದಿ ಬರುತ್ತಾಳೆ. ತನ್ನ ಪತಿ ಖಿನ್ನ ಮನಸ್ಕನಾಗಿ ಕುಳಿತಿದ್ದನ್ನು ಗಮನಿಸುತ್ತಾಳೆ. ಅವಳು ತನ್ನ ಪತಿ ಏನು ಬರೆದಿದ್ದಾನೆ ಎಂಬುದನ್ನು ಗಮನಿಸುತ್ತಾಳೆ. ಹಾಗೂ ಸಪ್ಪಳ ಮಾಡದೆ ಹಾಗೆ ಹೊರ ಹೋಗುತ್ತಾಳೆ. ಕೆಲ ಸಮಯದ ನಂತರ ಆಕೆ ವಾಪಸ್ಸು ಬಂದು ಒಂದು ಪೇಪರ್ ಮೇಲೆ ತಾನು ಬರೆದಿದ್ದನ್ನು ಆ ಜಾಗದಲ್ಲಿ ಇಡುತ್ತಾಳೆ. ಅದರಲ್ಲಿ ಅವಳು ಹೀಗೆ ಬರೆದಿರುತ್ತಾಳೆ: 'ಕಳೆದ ವರ್ಷ ನನ್ನ ಗಂಡನಿಗೆ ಗಾಲ್‌ಬ್ಲಾಡರ್ ಕಲ್ಲಿನಿಂದ ವಿಮುಕ್ತಿ ಸಿಕ್ಕಿತು. ಅವರು ಬಹಳ ದಿನ ಈ ಕಾರಣದಿಂದ ನೋವಿನಿಂದ ನರಳುತ್ತಿದ್ದರು. ಇದರಿಂದ ಅವರಿಗೆ ಬಿಡುಗಡೆ ದೊರಕಿತು. ಕಳೆದ ವರ್ಷ ನನ್ನ ಪತಿ ತಮ್ಮ ಕೆಲಸದಿಂದ ಆರೋಗ್ಯಪೂರ್ಣವಾಗಿ ಹಾಗೂ ನೆಮ್ಮದಿಯಿಂದ ನಿವೃತ್ತಿ ಹೊಂದಿದರು. ಇದಕ್ಕಾಗಿ ನಾನು ದೇವರಿಗೆ ವಂದನೆ ಸಲ್ಲಿಸುತ್ತೇನೆ. ಅವರು 35 ವರ್ಷ ದುಡಿದು ನಮ್ಮ ಕುಟುಂಬವನ್ನು ಸಲಹಿದ್ದಾರೆ. ಈಗ ಅವರು ನಿವೃತ್ತಿ ಹೊಂದಿರುವುದರಿಂದ, ಈಗ ಅವರು ಇನ್ನೂ ಹೆಚ್ಚು ಬರೆಯಲು ತೊಡಗಬಹುದು. ಬರವಣಿಗೆ ಅವರಿಗೆ ಇಷ್ಟವಾದ ವಿಷಯ. ಕಳೆದ ವರ್ಷ ನನ್ನ 95 ವರ್ಷದ ಅತ್ತೆ ನಿಧನರಾದರು. ಆದರೆ ಅವರು ಸ್ವಲ್ಪವೂ ನರಳದೇ ದೇವರಪಾದ ಸೇರಿದರು. ಅವರದ್ದು ಸಂತೃಪ್ತ ಜೀವನವಾಗಿತ್ತು. ಕಳೆದ ವರ್ಷವೇ ನನ್ನ ಮಗ ಒಂದು ದೊಡ್ಡ ಕಾರು ಆಕ್ಸಿಡೆಂಟ್‌ಗೆ ಒಳಗಾದ. ದೇವರ ದಯೆ ನಮ್ಮ ಮೇಲೆ ಇದ್ದುದರಿಂದ ನನ್ನ ಮಗ ಅಪಾಯದಿಂದ ಪಾರಾದ, ಕಾರಿಗೆ ಹೆಚ್ಚು ಖರ್ಚು ಮಾಡಿ ರಿಪೇರಿ ಮಾಡಿಸಿದೆವಾದರೂ, ಮಗ ಬದುಕಿದ್ದು ನಮ್ಮ ಅದೃಷ್ಟ, ಆಕೆ ಕೊನೆಯಲ್ಲಿ ಬರೆಯುತ್ತಾಳೆ: 'ಕಳೆದ ವರ್ಷ ನಮ್ಮ ಮೇಲೆ ದೇವರದಯೆ ಹೆಚ್ಚಾಗಿದ್ದು ಕಂಡುಬರುತ್ತದೆ. ಆ ದೇವರಿಗೆ ಇದಕ್ಕಾಗಿ ನಾನು ಕೃತಜ್ಞತೆ ಸಲ್ಲಿಸುತ್ತೇನೆ' ಎಂದು ಬರೆದಿದ್ದಳು.

ಇದನ್ನು ಓದಿದ ಲೇಖಕ ನಸುನಕ್ಕ, ಅವನ ಕೆನ್ನೆಯ ಮೇಲೆ ಕಣ್ಣೀರಧಾರೆ. ಅವನು ಮಡದಿಯ ಬರಹವನ್ನು ಮನಸಾರೆ ಮೆಚ್ಚಿದ. ಕಳೆದ ವರ್ಷ ನಡೆದ ಎಲ್ಲ ಘಟನೆಗಳಲ್ಲೂ ತಮಗೆ ಒಳ್ಳೆಯದೇ ಆಗಿದ್ದನ್ನು ಅವನು ಗುರುತಿಸಿದ. ನಡೆದಿದ್ದು ಸರಣಿಯ ಘಟನೆಗಳು. ಆದರೆ ಅದನ್ನು ನೋಡುವ ದೃಷ್ಟಿಕೋನಗಳು ಮಾತ್ರ ಬೇರೆ. ನಾವು ಜೀವನವನ್ನು ಎಷ್ಟು ಧನಾತ್ಮಕವಾಗಿ ತೆಗೆದುಕೊಳ್ಳುತ್ತೇವೆಯೋ ಅಷ್ಟು ಜೀವನ ಸಂತಸಭರಿತವಾಗುತ್ತದೆ. ಜೀವನವನ್ನು ಎಷ್ಟು ಋಣಾತ್ಮಕವಾಗಿ ನೋಡುತ್ತೇವೆಯೋ, ಅಷ್ಟು ವ್ಯಸನಗಳು ಕಂಡುಬರುತ್ತವೆ. ಗುಲಾಬಿ ಗಿಡದಲ್ಲಿ ನಾವು ಹೂವು ನೋಡಬೇಕೇ ವಿನಃ, ಮುಳ್ಳುಗಳನ್ನಲ್ಲ. ಮುಳ್ಳು ಇರುವುದು ಆ ಗಿಡದ ಸಹಜ ಸ್ವಭಾವ. ಆದರೆ ಹೂವು ನಮಗೆ ಅತ್ಯಂತ ಖುಷಿ ನೀಡುತ್ತದೆ. ಹೂವು ಬೇಕೆಂದಾಗ ಮುಳ್ಳಿನ ಬಗ್ಗೆಯೂ ಎಚ್ಚರವಿರಬೇಕು. ಹೂವು ಕೊಯ್ಯುವಾಗ ಮುಳ್ಳು ಚುಚ್ಚಿಕೊಳ್ಳದಂತೆ ಎಚ್ಚರ ವಹಿಸಿದರೆ ಹೂವನ್ನು ಆಸ್ವಾದಿಸಬಹುದು. ಇದು ಧನಾತ್ಮಕ ಸ್ವಭಾವ.

ನಮ್ಮಲ್ಲಿ ಕೆಲವರು ಯಾವ ಕೆಲಸವನ್ನು ತಾವು ಮಾಡಲಾಗುವುದಿಲ್ಲವೋ ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಾರೆ. ಅವರು ನಮ್ಮ ದೇಶದ ನಾಯಕರು ಹೀಗೆ ಮಾಡಬೇಕಾಗಿತ್ತು, ಹಾಗೆ ಮಾಡಬೇಕಾಗಿತ್ತು. ಅವರು ಹಾಗೆ ಮಾಡದಿರುವುದರಿಂದ ದೇಶಕ್ಕೆ ಹೇಗೆಲ್ಲಾ ನಷ್ಟವಾಗುತ್ತದೆ ಎಂದು ಹಲಬುತ್ತಾರೆ. ಕ್ರಿಕೆಟ್ ಇಷ್ಟಪಡುವವರು ನಮ್ಮ ದೇಶದ ತಂಡ ಸೋತಾಗ ಖಿನ್ನರಾಗುತ್ತಾರೆ. ಅವರು ಯಾವ ಬ್ಯಾಟ್ಸ್‌ಮನ್, ಯಾವ ಬೌಲರ್ ಹೇಗೆ ತಪ್ಪುಮಾಡಿದರು ಎಂದು ಗುನುಗುತ್ತಾ ದುಃಖಿಸುತ್ತಾರೆ. ಅಮೇರಿಕಾದ ಅಧ್ಯಕ್ಷನ ಹೇಳಿಕೆ ಸರಿಯಲ್ಲ ಎಂದು ಹೇಳುತ್ತಾರೆ. ಹೀಗೆ ಅವರು ತಾವು ಆ ಬಗ್ಗೆ ಏನು ಮಾಡಲಾಗದಿದ್ದರೂ ಚಿಂತಿಸುತ್ತಾರೆ.

ಇದರ ಬದಲು ಆದ ಘಟನೆಗೆ ನಾವು ಕಾರಣರಲ್ಲ ಎಂದಾದಾಗ ದುಃಖಿಸುವುದರ ಬದಲು ಅದರಿಂದ ಏನು ಪಾಠ ಕಲಿಯಬಹುದು? ಎಂಬ ಬಗ್ಗೆ ಚಿಂತಿಸಬೇಕು. ನಮ್ಮ ಜೀವನ ಸುಲಲಿತವಾಗುವಂತೆ ಆಲೋಚನೆಗಳನ್ನು ಬೆಳೆಸಿಕೊಳ್ಳಬೇಕು. ಅದು ಸುಖೀ ಜೀವನದ ಸೂತ್ರವಾಗುತ್ತದೆ.

ವೃತ್ತಿಪರ ಕೋರ್ಸ್‌ಗಳ ಶುಲ್ಕದಲ್ಲಿ ಯಾವುದೇ ಬದಲಾವಣೆಗಳಿಲ್ಲ

ಸಚಿವ ಡಾ. ಎಂ.ಸಿ. ಸುಧಾಕರ್ ಸ್ಪಷ್ಟನೆ



ಬೆಂಗಳೂರು, ಜೂ.16– ಇಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಶಿಕ್ಷಣ ಶುಲ್ಕವನ್ನು ಹಿಂದಿನ ಸರಕಾರವೇ ಶೇ.10ರಷ್ಟು ಹೆಚ್ಚಿಸಿ ಪರಿಷ್ಕರಣೆ ಮಾಡಿದ್ದು, ಈಗ ಯಾವುದೇ ಬದಲಾವಣೆಗೆ ಮುಂದಾಗಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು ಸ್ಪಷ್ಟಪಡಿಸಿದ್ದಾರೆ.

ನಗರದ ಮಲ್ಲೇಶ್ವರಂನಲ್ಲಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 'ಹಿಂದಿನ ವರ್ಷಗಳಲ್ಲಿ ಇಂಜಿನಿಯರಿಂಗ್ ಕೋರ್ಸ್‌ಗೆ ಸರಕಾರಿ ಕಾಲೇಜುಗಳಲ್ಲಿ 38,200 ರೂ, ಅನುದಾನ ರಹಿತ ಕಾಲೇಜು, ಖಾಸಗಿ ಹಾಗೂ ಸ್ವಾಯತ್ತ ಕಾಲೇಜುಗಳಲ್ಲಿ 91,796 ರೂ, ಎರಡನೇ ಶ್ರೇಣಿಯ ಅನುದಾನ ರಹಿತ ಕಾಲೇಜುಗಳಲ್ಲಿ 98,984 ರೂ. ಶುಲ್ಕವಿತ್ತು. ಈ ವರ್ಷ ಅದರ ಜತೆಗೆ ಶೇ.10 ರಷ್ಟು ಹೆಚ್ಚುವರಿಯಾಗಲಿದೆ ಎಂದರು.

'ಬಿ' ಫಾರ್ಮಾ ಕೋರ್ಸ್‌ಗೆ ಸರಕಾರಿ ಕಾಲೇಜುಗಳಲ್ಲಿ 14,530 ರೂ., ಅನುದಾನ ರಹಿತ ಕಾಲೇಜುಗಳಲ್ಲಿ 26,500 ರೂ., 'ಡಿ' ಫಾರ್ಮಾ ಕೋರ್ಸ್‌ಗೆ ಅನುದಾನ ರಹಿತ ಕಾಲೇಜುಗಳಲ್ಲಿ 67,500 ರೂ., ಪಶು ವೈದ್ಯಕೀಯ ಕೋರ್ಸ್‌ಗೆ ಸರಕಾರಿ ಕಾಲೇಜಿನಲ್ಲಿ 53,170 ರೂ., ಮೀನುಗಾರಿಕೆಗೆ ಮತ್ತು ಪಶುಸಂಗೋಪನೆ, ಬಿಎಫ್ ಕೋರ್ಸ್‌ಗೆ 29,170 ರೂ. ಶುಲ್ಕವನ್ನು ಹಿಂದಿನ ವರ್ಷ ನಿಗದಿ ಮಾಡಲಾಗಿತ್ತು.

ಇನ್ನೂ, ಶುಲ್ಕ ಪರಿಷ್ಕರಣೆಗಾಗಿ ಹಿಂದಿನ ಸರಕಾರ ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಕಾಲೇಜು ಆಡಳಿತ ಮಂಡಳಿಗಳ ಜತೆ ಸುದೀರ್ಘ ಸಮಾಲೋಚನೆ ನಡೆಸಿ ನಿರ್ಧಾರ ತೆಗೆದುಕೊಂಡಿದೆ. ಬಳಿಕ ಶುಲ್ಕ ಹೆಚ್ಚಳಕ್ಕೆ ಈಗಾಗಲೇ ಆದೇಶವೂ ಜಾರಿಯಾಗಿದೆ. ಅದನ್ನು ಬದಲಾವಣೆ ಮಾಡುವುದಿಲ್ಲ.

ಮಾತುಕತೆ ಹಾಗೂ ಸಂಧಾನ ಪ್ರಕ್ರಿಯೆಗಳ ಮೂಲಕವೇ ಶುಲ್ಕ ನಿಗದಿಯಾಗಿರುವುದರಿಂದ ಮತ್ತೊಮ್ಮೆ ಶುಲ್ಕವನ್ನು ಹೆಚ್ಚಿಸುವುದಾಗಲಿ ಅಥವಾ ಕಡಿಮೆ ಮಾಡುವ ಅಗತ್ಯ ಇಲ್ಲ ಎಂದು ಖಚಿತಪಡಿಸಿದರು.

ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಉನ್ನತಾಧಿಕಾರಿಗಳ ಫೋನ್ ನಂಬರ್‌ವುಳ್ಳ ಬೋರ್ಡ್

ಡಿಜಿಪಿ ಆದೇಶ

ಬೆಂಗಳೂರು, ಜೂ.16– ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳು ಉನ್ನತ ಪೊಲೀಸ್ ಅಧಿಕಾರಿಗಳ ಫೋನ್ ನಂಬರ್ ಇರುವ ನಾಮಫಲಕ ಹಾಕಬೇಕು ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಅವರು ಸುತ್ತೋಲೆ ಹೊರಡಿಸಿದ್ದಾರೆ.

ಇದರಿಂದ ದೂರುಗಳನ್ನು ಪೊಲೀಸರು ಗಮನಿಸದಿದ್ದರೆ ಸಾರ್ವಜನಿಕರು ಉನ್ನತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಡಿಜಿಪಿ ಆದೇಶದಲ್ಲಿ ತಿಳಿಸಿದ್ದಾರೆ.

ಕಮೀಷನರೇಟ್ ವ್ಯಾಪ್ತಿಯಲ್ಲಿ ಸಿಒಪಿ, ಡಿಸಿಪಿ ಮತ್ತು ಎಸಿಪಿ ಮತ್ತು ಜಿಲ್ಲಾ ಮಟ್ಟದಲ್ಲಿ ಎಸ್‌ಪಿ, ಹೆಚ್ಚುವರಿ ಎಸ್ಪಿ ಮತ್ತು ಡಿವೈಸ್ಪಿ ಸಂಪರ್ಕಿಸಲು ಅನುಕೂಲವಾಗುವಂತೆ ಅವರ ಮೊಬೈಲ್ ನಂಬರ್‌ವುಳ್ಳ ನಾಮಫಲಕವನ್ನು ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಹಾಕುವಂತೆ ಅವರು ಆದೇಶ ಹೊರಡಿಸಿದ್ದಾರೆ.

ಅಕ್ರಮ ಮರಳು ಸಾಗಣೆ ತಡೆಯಲು ಬಂದ ಪೇದೆ ಮೇಲೆ ಟ್ರ್ಯಾಕ್ಟರ್ ಹರಿಸಿ ಹತ್ಯೆ; ಚಾಲಕನ ಬಂಧನ



ಕಲಬುರಗಿ, ಜೂ.16– ಕಲಬುರಗಿ ಜಿಲ್ಲೆಯಲ್ಲಿ ಅಕ್ರಮ ಮರಳು ಸಾಗಣೆ ತಡೆಯಲು ಬಂದ ಹೆಡ್ ಕಾನ್‌ಸ್ಟೆಬಲ್ ಮೇಲೆ ಟ್ರ್ಯಾಕ್ಟರ್ ಹರಿಸಿ ಹತ್ಯೆ ಮಾಡಿದ ಚಾಲಕನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಜೇವರ್ಗಿ ತಾಲೂಕಿನಲ್ಲಿ ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಟ್ರ್ಯಾಕ್ಟರ್ ಅನ್ನು ತಡೆಯಲು ಬಂದ ಕಾನ್‌ಸ್ಟೆಬಲ್ ಮೇಲೆ ಟ್ರ್ಯಾಕ್ಟರ್ ಹತ್ತಿಸಿ ಹತ್ಯೆ ಮಾಡಿರುವ ಘಟನೆ ನಿನ್ನೆ ರಾತ್ರಿ ನಡೆದಿದೆ.

ಪ್ರಮುಖ ಆರೋಪಿ ಟ್ರ್ಯಾಕ್ಟರ್ ಚಾಲಕನನ್ನು ಬಂಧಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಕಲಬುರಗಿ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್ ತಿಳಿಸಿದ್ದಾರೆ. ಜೂ.15 ರಂದು ಕಲಬುರಗಿಯ ಜೇವರ್ಗಿ ತಾಲೂಕಿನಲ್ಲಿ ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಟ್ರಾಕ್ಟರ್ ಅನ್ನು ಹೆಡ್ ಕಾನ್‌ಸ್ಟೆಬಲ್ ಮಯೂರ ಚೌಹಾಣ್(51) ಅವರು ತಡೆಯಲು ಪ್ರಯತ್ನಿಸುತ್ತಿದ್ದಾಗ ಘಟನೆ ನಡೆದಿದೆ ಎಂದು ಎಸ್‌ಪಿ ತಿಳಿಸಿದ್ದಾರೆ.

ಮೃತ ಪೇದೆಯನ್ನು ನೆಲೋಗಿ ಪೊಲೀಸ್ ಠಾಣೆಯಲ್ಲಿ ನಿಯೋಜಿಸಲಾಗಿದ್ದು, ಘಟನೆಯ ಸಮಯದಲ್ಲಿ ಅವರು ಕರ್ತವ್ಯದಲ್ಲಿದ್ದರು.

ಹೆಡ್ ಕಾನ್‌ಸ್ಟೆಬಲ್ ಸಾವಿಗೆ ಕಾರಣರಾದವರ ವಿರುದ್ಧ ಐಪಿಸಿ ಸೆಕ್ಷನ್ 302, 333, 307, 379, 504 ಮತ್ತು 506 ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಇದೇ ವೇಳೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹಾಗೂ ಕಲಬುರ್ಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು, ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಮತ್ತು ಮೃತ ಪೊಲೀಸ್ ಪೇದೆಯ ಕುಟುಂಬಕ್ಕೆ ರಾಜ್ಯ ಸರ್ಕಾರದಿಂದ ಸಾಧ್ಯವಿರುವ ಎಲ್ಲ ನೆರವು ನೀಡಲಿದೆ ಎಂದು ಭರವಸೆ ನೀಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅದ್ವಿತೀಯ ಸಾಧನೆ ತೋರಿಸಿದ ಗಾಲ್ಫ್ ಆಟಗಾರ್ತಿ ವಿಧಾತ್ರಿಗೆ ಸನ್ಮಾನ



ಮೈಸೂರು,ಜೂ. 16(ಸಿಎನ್)–2023ರ ಅಂತಾರಾಷ್ಟ್ರೀಯ ಮಟ್ಟದ 43ನೇ 'ಕ್ವೀನ್ ಸಿರಿಕಿಟ್ ಒಲಂಪಿಕ್ಸ್'ನಲ್ಲಿ ಭಾರತವನ್ನು ಪ್ರತಿನಿಧಿಸಿದ ಮೈಸೂರಿನ ಗಾಲ್ಫ್ ಆಟಗಾರ್ತಿ ಕು.ವಿಧಾತ್ರಿ ಕೆ.ಎಂ.ಅರಸ್ ಅವರನ್ನು ರೋಟರಿ ಮೈಸೂರು ಮಿಡ್‌ಟೌನ್ ಸಂಸ್ಥೆಯಿಂದ ಸನ್ಮಾನಿಸಲಾಯಿತು.

ತಂಡ ವಿಭಾಗದಲ್ಲಿ ಎರಡನೇ ಪ್ರಶಸ್ತಿ ಪಡೆದಿರುವ ವಿಧಾತ್ರಿ ವೈಯಕ್ತಿಕವಾಗಿ 19ನೇ ಸ್ಥಾನ ಪಡೆದ್ದಾರೆ. ನಗರದ ಜೆಎಲ್‌ಬಿ ರಸ್ತೆಯ ರೋಟರಿ ಕೇಂದ್ರದಲ್ಲಿ ಆಯೋಜಿಸಿದ್ದ 2022–23 ನೇ ಸಾಲಿನ ವಿಕ್ರಿಯೇಟ್ ಕ್ರೀಡಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸನ್ಮಾನ ಮಾಡಲಾಯಿತು. ಬಳಿಕ ಮಾತನಾಡಿ, ನನ್ನ 7ನೇ ವಯಸ್ಸಿನಲ್ಲಿ ಗಾಲ್ಫ್ ಆಡಲು ಆರಂಭಿಸಿದೆ. ಕ್ರಮೇಣ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ, ಇದೀಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶವನ್ನು ಪ್ರತಿನಿಧಿಸಿದ್ದಕ್ಕೆ ಹೆಮ್ಮೆ ಇದೆ ಎಂದರು.

ಸಾಧನೆ ಮಾಡಲು ವಯಸ್ಸಿನ ಅಂತರವಿಲ್ಲ, ನಾವು ತೆಗೆದುಕೊಳ್ಳುವ ನಿರ್ಣಯ ಉತ್ತಮ ವಾಗಿರಬೇಕು. ನನ್ನ ಗುರುಗಳ ಮಾರ್ಗದರ್ಶನದಿಂದ ನಾನು ಸಾಧಿಸಲು ಸಾಧ್ಯವಾಯಿತು. ನಮ್ಮ ದೇಶಕ್ಕೆ ಮತ್ತಷ್ಟು ಪ್ರಶಸ್ತಿ ತರುವ ಧ್ಯೇಯವಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಾಸ್ತಾವಿಕವಾಗಿ ರೋಟರಿ ಸಂಸ್ಥೆ ಉಪಾಧ್ಯಕ್ಷ ರಾಕೇಶ್ ಮಾತನಾಡಿ, ರೋಟರಿ ಮಿಡ್ ಟೌನ್ ಮೈಸೂರು ಸಂಸ್ಥೆ ಸಾಧಕರನ್ನು ಗುರುತಿಸಿ ಸನ್ಮಾನಿಸುವಲ್ಲಿ ಮುಂಚೂಣಿಯಲ್ಲಿದ್ದೇವೆ. ನಮ್ಮಲ್ಲಿ ಸನ್ಮಾನಿಸಲ್ಪಟ್ಟ ಸಾಧಕರು ಭವಿಷ್ಯದಲ್ಲಿ ಉನ್ನತ ಸ್ಥಾನಗಳಿಗೂ ಹೋಗಿದ್ದಾರೆ ಎಂದು ತಿಳಿಸಿದರು.

ನಂತರ ಉಕ್ಕಿನ ಮನುಷ್ಯ ಸಾಧಕ ಪ್ರಶಸ್ತಿ ವಿಜೇತೆ ಡಾ.ಉಷಾ ಹೆಗ್ಡೆ ಮಾತನಾಡಿ, ವಿಧಾತ್ರಿ ಈ ವಯಸ್ಸಿನಲ್ಲೇ ಇಂತಹ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿ, ಮುಂದಿನ ದಿನಗಳಲ್ಲಿ ದೇಶದ ಪರ ಪ್ರತಿನಿಧಿಸಿ ಮತ್ತಷ್ಟು ಪ್ರಶಸ್ತಿಗಳನ್ನು ತರಲಿ ಎಂದು ಆಶಿಸಿದರು.

ಸಮಾರಂಭದಲ್ಲಿ ರೋಟರಿ ಮೈಸೂರು ಮಿಡ್ಟೌನ್ ಅಧ್ಯಕ್ಷ ನವೀನ್ ಚಂದ್ರ.ಎಂ.ಎಸ್, ಗೌರವ ಕಾರ್ಯದರ್ಶಿ ಕುಮಾರಸ್ವಾಮಿ, ಉಪಾಧ್ಯಕ್ಷ ರಾಕೇಶ್, ರೋಟರಿ ಸಂಸ್ಥೆ ಮಾಜಿ ಅಧ್ಯಕ್ಷ ಅಯ್ಯಣ್ಣ, ಅರಸು ಗ್ರೂಪ್ಸ್ ಆಫ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಕಾಂತರಾಜೇ ಅರಸ್, ರೋಟರಿ ಸದಸ್ಯರಾದ ಪ್ರೇಮ್‌ಸಾಗರ್, ರಮ್ಯಾ ಅರಸ್ ಮತ್ತಿತರರಿದ್ದರು.

ಪೇ ಅಂಡ್ ಪಾರ್ಕ್: ಆಕ್ಷೇಪಣೆ ಸಲ್ಲಿಸಿದವರೊಂದಿಗೆ ಸೋಮವಾರ ಸಭೆ

ಮೈಸೂರು, ಜೂ.16(ಆರ್‌ಕೆ)–ಮೈಸೂರು ಮಹಾನಗರ ಪಾಲಿಕೆಯು ಜಾರಿಗೆ ತರಲು ಮುಂದಾಗಿರುವ ಪೇ ಅಂಡ್ ಪಾರ್ಕ್ ವ್ಯವಸ್ಥೆಗೆ ವಿರೋಧ ವ್ಯಕ್ತಪಡಿಸಿ ಆಕ್ಷೇಪಣೆ ಸಲ್ಲಿಸಿರುವವರೊಂದಿಗೆ ಸೋಮವಾರ (ಜೂ.19) ಸಭೆ ನಡೆಸುವುದಾಗಿ ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರು ರಕ್ಷಣಾ ವೇದಿಕೆ ಸೇರಿದಂತೆ ಹಲವು ಸಂಘ–ಸಂಸ್ಥೆಗಳು ಹಾಗೂ ವ್ಯಕ್ತಿಗಳು ಮೈಸೂರಿನ ಡಿ.ದೇವರಾಜ ಅರಸು ರಸ್ತೆ ಸಯ್ಯಾಜಿರಾವ್ ರಸ್ತೆ ಧನ್ವಂತರಿ ರಸ್ತೆ ಅಶೋಕ ರಸ್ತೆ ಹಾಗೂ ಪುರಭವನದ ಆವರಣದಲ್ಲಿ ವಾಹನ ನಿಲುಗಡೆ ಮಾಡಲು ಶುಲ್ಕ ವಿಧಿಸುವ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸಿರುವುದಲ್ಲದೆ, ಲಿಖಿತ ರೂಪದಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ ಎಂದು ಅವರು ತಿಳಿಸಿದರು. ಕೆಲವು ರಸ್ತೆಗಳಲ್ಲಿ ಕಾರು ಮತ್ತು ದ್ವಿಚಕ್ರ ವಾಹನಗಳನ್ನು ಬೆಳಿಗ್ಗೆ ನಿಲ್ಲಿಸಿ ಹೊರಗಿನ ಊರುಗಳಿಗೆ ಹೋಗಿ ರಾತ್ರಿ ಬಂದು ತೆಗೆಯುತ್ತಿದ್ದಾರೆ. ಅದರಿಂದ ಸಾರ್ವಜನಿಕರು, ಗ್ರಾಹಕರಿಗೆ ವಾಹನ ಪಾರ್ಕ್ ಮಾಡಲು ಜಾಗ ಸಿಗುತ್ತಿಲ್ಲ. ಪರಿಣಾಮ ತಮ್ಮ ವ್ಯಾಪಾರ–ವಹಿವಾಟಿಗೂ ತೊಂದರೆಯಾಗುತ್ತಿದೆ ಎಂದು ವರ್ತಕರು ಪ್ರತಿಪಾದಿಸಿ, ಪೇ ಅಂಡ್ ಪಾರ್ಕ್ ವ್ಯವಸ್ಥೆ ಜಾರಿಗೆ ತರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಈ ಅಂಶಗಳನ್ನೆಲ್ಲಾ ವಿರೋಧಿಸುವವರಿಗೆ ತಿಳಿ ಹೇಳಿ ಮನವರಿಕೆ ಮಾಡಿಸಿ ಸಾರ್ವಜನಿಕರ ಹಿತ ದೃಷ್ಟಿಯಿಂದ ವಸ್ತು ಸ್ಥಿತಿಯನುಸಾರ ಅರಸು ರಸ್ತೆ ಸಯ್ಯಾಜಿ ರಾವ್ ರಸ್ತೆ ಧನ್ವಂತರಿ ರಸ್ತೆ ಅಶೋಕ ರಸ್ತೆಗಳಲ್ಲಿ ಪೇ ಅಂಡ್ ಪಾರ್ಕ್ ವ್ಯವಸ್ಥೆ ಜಾರಿಗೊಳಿಸುವ ಸಂಬಂಧ ಚರ್ಚಿಸಿ ಸಲಹೆ ಪಡೆದು ಬದಲಾವಣೆಗಳೇನಾದರೂ ಮಾಡಬೇಕಾದರೆ ಪರಿಗಣಿಸಲಾಗುವುದು ಎಂದ ಅವರು, ಒಟ್ಟಾರೆ ಸಾರ್ವಜನಿಕರು ಮತ್ತು ವರ್ತಕರಿಗೆ ಅನುಕೂಲವಾಗುವಂತೆ ಕ್ರಮ ವಹಿಸಲಾಗುವುದು ಎಂದರು.

ವಿದ್ಯುತ್ ದರ ಏಕಾಏಕಿ ಏರಿಕೆ ವಿರುದ್ಧ ಪ್ರತಿಭಟನೆ

ಮೈಸೂರು, ಜೂ.16(ಎಸ್‌ಪಿಎನ್)–ವಿದ್ಯುತ್ ದರ ಬಿಲ್ ಏಕಾಏಕಿ ಏರಿಕೆ ಮಾಡಿರುವ ಸೆಸ್ಕ್ ವಿರುದ್ಧ ವಿನೂತನ ರೀತಿಯಲ್ಲಿ ಪ್ರತಿಭಟನಾ ಅಭಿಯಾನ ಆರಂಭಿಸಲಾಗಿದೆ.

ವಿವಿಧ ಘೋಷಣೆಗಳಿದ್ದ ಫಲಕಗಳನ್ನು ಮನೆಯ ಮುಂದೆ ಪ್ರದರ್ಶಿಸಿ, ಸೆಸ್ಕ್ ವಿರುದ್ಧ ಶುಕ್ರವಾರ ಈ ಅಭಿಯಾನ ಆರಂಭಿಸಿದ್ದಾರೆ.

ಟಿ.ಕೆ.ಬಡಾವಣೆಯ ನಿವಾಸಿಗಳಾದ ಭಾಗ್ಯಶ್ರೀ ಭಟ್, ಎಂ.ಎಸ್.ಸತ್ಯಾನಂದ ವಿಟ್ಟು ಅಭಿಯಾನದ ನೇತೃತ್ವ ವಹಿಸಿದ್ದು, ಜನತಾ ನಗರ, ಬೋಗಾದಿ 2ನೇ ಹಂತ ಸೇರಿದಂತೆ ಇತರೆ ಬಡಾವಣೆಗಳಲ್ಲಿ ಸೆಸ್ಕ್ ಸರ್ವಾಧಿಕಾರಿ ಧೋರಣೆ ವಿರೋಧಿಸಿ, ವಿದ್ಯುತ್ ಬಿಲ್ ಏರಿಕೆಯನ್ನು ಕೈ ಬಿಡುವಂತೆ ಆಗ್ರಹಿಸಿ, ಅಭಿಯಾನ ಮುಂದುವರೆಸಲಾಗುವುದು ಎಂದು ಭಾಗ್ಯಶ್ರೀ ಭಟ್, ಎಂ.ಎಸ್.ಸತ್ಯಾನಂದ ವಿಟ್ಟು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಈ ಹಿಂದೆ ಸೆಸ್ಕ್‌ನಿಂದ ನಾಲ್ಕು ಸ್ಲ್ಯಾಬ್‌ಗಳಲ್ಲಿ ಗ್ರಾಹಕರಿಗೆ ವಿದ್ಯುತ್ ಬಿಲ್ ನೀಡಲಾಗುತ್ತಿತ್ತು. ಉದಾಹರಣೆಗೆ ಈ ಹಿಂದೆ 1–49 ಯೂನಿಟ್‌ಗೆ 4.10 ರೂ., 50–99 ಯೂನಿಟ್‌ಗೆ 5.60 ರೂ., 100–199 ಯೂನಿಟ್‌ಗೆ 7.15ರೂ. 200 ಯೂನಿಟ್ ಮೇಲ್ಪಟ್ಟು 8.15 ರೂ.ರಂತೆ 4 ಸ್ಲ್ಯಾಬ್‌ಗಳಲ್ಲಿ ಪಾವತಿ ಮಾಡಲಾಗುತ್ತಿತ್ತು. ಇದೀಗ ಹೊಸ ಬಿಲ್‌ನಲ್ಲಿ 2 ಸ್ಲ್ಯಾಬ್‌ಗಳನ್ನು ವಿಂಗಡಿಸಿ, 1–99 ಯೂನಿಟ್‌ವರೆಗೆ 4.75 ರೂ, 100 ಯೂನಿಟ್ ಮೇಲ್ಪಟ್ಟು 7 ರೂ.ಗಳನ್ನು ನಿಗದಿ ಮಾಡಲಾಗಿದೆ.

ಇಂಧನ ಹೊಂದಾಣಿಕೆ ಶುಲ್ಕವನ್ನು 2023ರ ಜನವರಿಯಿಂದ ಮಾರ್ಚ್‌ವರೆಗೆ ಹಂತಹಂತವಾಗಿ 2.42 ರೂ.ನಂತೆ ಪ್ರತಿ ಯೂನಿಟ್‌ಗೆ ಲೆಕ್ಕ ಹಾಕಲಾಗುತ್ತಿದೆ. ಈ ನಿರ್ಧಾರ ಏ.1ರಿಂದಲೇ ಪೂರ್ವಾನ್ವಯವಾಗುವಂತೆ ಜಾರಿಗೆ ವಿದ್ಯುತ್ ನಿಯಂತ್ರಣ ಆಯೋಗ ಮೇ 12 ರಂದು ಆದೇಶ ಕೊಟ್ಟ ಹಿನ್ನೆಲೆಯಲ್ಲಿ ಗ್ರಾಹಕರಿಗೆ ಮೇ ತಿಂಗಳ ಬಿಲ್‌ನಲ್ಲಿ ಭಾರಿ ಏರಿಕೆಯಾಗಿದೆ. ಈ ನಿರ್ಧಾರವನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ, ತಮ್ಮ ತಮ್ಮ ಮನೆಗಳಿಂದಲೇ ಸೆಸ್ಕ್ ವಿರುದ್ಧ ಫಲಕಗಳನ್ನು ಪ್ರದರ್ಶಿಸಲಾಗುತ್ತಿದೆ ಎಂದು ತಿಳಿಸಿದರು.

ಸೆಸ್ಕ್‌ನಿಂದ ವಿದ್ಯುತ್ ಬಿಲ್ ಏಕಾಏಕಿ ಏರಿಕೆಯಿಂದ ಗ್ರಾಹಕರಿಗೆ ಆಘಾತವಾಗಿದ್ದು, 1,200 ರೂ ಬರುತ್ತಿದ್ದ ವಿದ್ಯುತ್ ಬಿಲ್, ಮೇ ತಿಂಗಳಲ್ಲಿ 3 ಸಾವಿರ ರೂ. ಬಿಲ್ ಬಂದಿದೆ. ರಾಜ್ಯದಲ್ಲಿ ಹೊಸ ಸರ್ಕಾರ ಕಾರ್ಯಾರಂಭಕ್ಕೂ ಮೊದಲೇ ವಿದ್ಯುತ್ ಕಂಪನಿಗಳಿಂದ ವಿದ್ಯುತ್ ಏರಿಕೆ ಮಾಡಿರುವುದು ಬೇಸರ ಸಂಗತಿ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಒಂದು ಕಡೆ 200 ಯೂನಿಟ್ ವಿದ್ಯುತ್ ರಾಜ್ಯದ ಪ್ರತಿ ಮನೆಗೂ ಉಚಿತ ಎಂದು ಘೋಷಿಸಿದೆ. ಆದರೆ, ಈಗ ಏಕಾಏಕಿ 7 ರೂ.ವರೆಗೆ ಯೂನಿಟ್ ಹೆಚ್ಚಿಸಿ, ಗ್ರಾಹಕರಲ್ಲಿ ಗೊಂದಲ ಮೂಡಿಸಿದೆ. ಹಾಗಾಗಿ ಬಾರಿ ಪ್ರಮಾಣ ವಿದ್ಯುತ್ ಬಿಲ್ ಏರಿಕೆಯಿಂದ ಮಧ್ಯಮ ವರ್ಗದ ಕುಟುಂಬಕ್ಕೆ ಸರ್ಕಾರ ಈ ನಿರ್ಧಾರ ಸಾಕಷ್ಟು ಹೊರೆಯಾಗಲಿದೆ ಎಂದು ಗ್ರಾಹಕ ಎಂ.ಎಸ್. ಸತ್ಯಾನಂದ ವಿಟ್ಟು ಪತ್ರಿಕೆಗೆ ತಿಳಿಸಿದರು.



CAUTION PUBLIC NOTICE

The General Public is hereby notify that, Our client Mr. N.ABHISHEK, S/o Late V.Nagaraju, R/at #765, 4th Main Road, 25th Cross Road, Vidyaranyapuram, Mysuru-570 008, has instituted a suit against R.Kiran Kumar S/o J.Rajanna, #207/1, 3rd Cross, Vijayanagar 4th Stage, Mysuru 570 017, for the relief of Specific Performance of Contract with respect to the Schedule 'A' and 'B' properties, in O.S.No.794/2023 before the Hon'ble III Addl. Senior Civil Judge and C.J.M at Mysuru, wherein the Hon'ble III Addl.Senior Civil Judge and C.J.M at Mysuru, has granted Ad-interim Temporary injunction as against the said R.Kiran Kumar S/o J.Rajanna on 16/06/2023.

The Public in General is hereby cautioned not to deal with R.Kiran Kumar S/o J.Rajanna, #207/1, 3rd Cross, Vijayanagar 4th Stage, Mysuru 570 017 with respect to the Schedule 'A' and 'B' Properties mentioned herein in any manner whatsoever, in-spite of it, if any person/s enter into agreement /deeds or deal with him pertaining to schedule 'A' and 'B' Properties herein, he/they will doing so entirely at his/their own cost and risks and the same party will be held liable for further course of action as per law and will be made necessary party and the said transaction will be void under law.

SCHEDULE 'A' PROPERTY: All that part and parcel of Residential Sites carved out of the converted lands in Sy. No. 141/1, measuring 20 guntas, Sy. No. 141/3, measuring 21 guntas, Sy. No. 141/4, measuring 20 guntas, Sy. No. 142/1, measuring 22.50 guntas, Sy. No. 142/3, measuring 22 guntas and Sy. No. 142/4, measuring 22.50 guntas in total measuring 3 acres 08 guntas, at Maratikyathanahalli Village, Jayapura Hobli, Mysuru Taluk, having MUDA residential approved plan bearing No. 46/2022-23 dated 09-12-2022, bounded on;

Item No.	Site No.	East to West (in meters)	North to South (in meters)	Total Area (in square meters)	East	West	North	South
1	1	(8.97+9.05)/2	(6.10+5.97)/2	54.34	9 Mts Road	Sy. No. 144	9 Mts Road	Site No. 2
2	2	(9.05+9.13)/2	6	54.51	9 Mts Road	Sy. No. 144 & 145	Site No. 1	Site No. 3
3	3	(9.13+9.21)/2	6	54.99	9 Mts Road	Sy. No. 145	Site No. 2	Site No. 4
4	4	(9.21+9.29)/2	6	55.47	9 Mts Road	Sy. No. 145	Site No. 3	Site No. 5
5	5	(9.29+9.38)/2	6	55.98	9 Mts Road	Sy. No. 145	Site No. 4	Site No. 6
6	6	(9.38+9.46)/2	6	56.49	9 Mts Road	Sy. No. 145	Site No. 5	Site No. 7
7	7	(9.46+9.54)/2	6	56.97	9 Mts Road	Sy. No. 145	Site No. 6	Site No. 8
8	8	(9.54+9.62)/2	6	57.45	9 Mts Road	Sy. No. 145	Site No. 7	Site No. 9
9	9	(9.62+9.70)/2	6	57.93	9 Mts Road	Sy. No. 145	Site No. 8	Site No. 10
10	10	(9.70+9.69)/2	6	58.17	9 Mts Road	Sy. No. 145	Site No. 9	Site No. 11
11	11	(9.69+9.63)/2	6	57.93	9 Mts Road	Sy. No. 145	Site No. 10	Site No. 12

In total measuring 620.23 square meters/6676.77 square feets.

SCHEDULE 'B' PROPERTY: All that part and parcel of Residential Sites carved out of the converted lands in Sy. No. 141/1, measuring 20 guntas, Sy. No. 141/3, measuring 21 guntas, Sy. No. 141/4, measuring 20 guntas, Sy. No. 142/1, measuring 22.50 guntas, Sy. No. 142/3, measuring 22 guntas and Sy. No. 142/4, measuring 22.50 guntas in total measuring 3 acres 08 guntas, at Maratikyathanahalli Village, Jayapura Hobli, Mysuru Taluk, having MUDA residential approved plan bearing No. 46/2022-23 dated 09-12-2022, bounded on;

Item No.	Site No.	East to West (in meters)	North to South (in meters)	Total Area (in square meters)	East	West	North	South
12	12	(9.63+9.57)/2	6	57.57	9 Mts Road	Sy. No. 145	Site No. 11	Site No. 13
13	13	(9.57+9.51)/2	6	57.21	9 Mts Road	Sy. No. 145	Site No. 12	Site No. 14
14	14	(9.51+9.44)/2	6	56.82	9 Mts Road	Sy. No. 145	Site No. 13	Site No. 15
15	15	(9.44+9.38)/2	6	56.43	9 Mts Road	Sy. No. 145	Site No. 14	Site No. 16
16	16	(9.38+9.32)/2	6	56.07	9 Mts Road	Sy. No. 145	Site No. 15	Site No. 17
17	17	(9.32+9.26)/2	6	55.71	9 Mts Road	Sy. No. 145	Site No. 16	Site No. 18
18	18	(9.26+9.20)/2	6	55.35	9 Mts Road	Sy. No. 145	Site No. 17	Site No. 19
19	19	(9.20+9.13)/2	6	54.96	9 Mts Road	Sy. No. 145	Site No. 18	Site No. 20
20	20	(9.13+9.07)/2	6	54.57	9 Mts Road	Sy. No. 145	Site No. 19	Site No. 21

In total measuring 504 square meters / 5432 square feets

Date:17/06/2023
Place: Mysuru.

Sd/- PRABHU ASSOCIATES H.P.DARSHAN SHETTY, H.P.GAGAN SHETTY K.R. Mohalla, Agrahara, No. 1533, N.T. Street, Mysuru - 570 024 Mobile No. 9590807007.

ಪುರಸಭಾ ಕಾರ್ಯಾಲಯ, ಶ್ರೀರಂಗಪಟ್ಟಣ
ಮಂಡ್ಯ ಜಿಲ್ಲೆ–571438 ದೂರವಾಣಿ: 08236-252229
itstaff ulb srirangapatana@yahoo.co.in

ಸಂ.ಪುಕಾಶ್ರೀ/ಕೆ.ಟಿ.ಆರ್(2)/ಸಿ.ಆರ್/ 03/2022–23
ದಿನಾಂಕ:16.06.2023

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಶ್ರೀರಂಗಪಟ್ಟಣ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಶ್ರೀರಂಗಪಟ್ಟಣ ರಂಗನಾಥನಗರದಲ್ಲಿರುವ ಖಾತ ಸಂಖ್ಯೆ: ಎಸ್– 3185/5184 ರ ಸ್ವತ್ತು ದಿನಾಂಕ:01.05.1992 ರ ಹಕ್ಕು ಪತ್ರದಂತೆ ಜಯಮ್ಮನವರ ಹೆಸರಿನಲ್ಲಿ ಖಾತೆ ದಾಖಲಾಗಿರುವುದು ಸರಿಯಷ್ಟೆ ನಂತರದ ದಿನಗಳಲ್ಲಿ ಯಾವುದೇ ಅಧಿಕೃತ ದಾಖಲೆಗಳನ್ನು ಪಡೆಯದೆ ನಿಂಗಣ್ಣನಾಯಕ ಎಂಬುವವರಿಗೆ ಅನಧಿಕೃತವಾಗಿ ನನ್ನ ಹೆಸರನ್ನು ರೌಂಡಫ್ ಮಾಡಿ ವರ್ಗಾಯಿಸಿರುವುದು ತಿಳಿದು ಬಂದಿರುತ್ತದೆ. ಆದ್ದರಿಂದ ಅನಧಿಕೃತವಾಗಿ ದಾಖಲಿಸಿರುವ ನಿಂಗಣ್ಣನಾಯಕರವರ ಹೆಸರನ್ನು ತೆರವು ಮಾಡಿ ನನ್ನ ಹೆಸರಿಗೆ ಖಾತೆಯನ್ನು ದಾಖಲಿಸಿ, ಇ ನಮೂನೆ–3ನ್ನು ಕೊಡುವಂತೆ ಕೋರಿರುತ್ತಾರೆ. ಆದ್ದರಿಂದ ಸದರಿ ವಿಚಾರದಲ್ಲಿ ಸಾರ್ವಜನಿಕರುಗಳಿಂದ ಯಾವುದೇ ರೀತಿಯ ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ ಮೂವತ್ತು (30 ದಿನಗಳು) ದಿನಗಳ ಒಳಗಾಗಿ ಲಿಖಿತವಾಗಿ ದಾಖಲೆ ಸಹಿತ ಸಲ್ಲಿಸತಕ್ಕದ್ದು. ತದನಂತರ ಬರುವ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ತಿಳಿಸಲಾಗಿದೆ.

ಕ್ರ.ಸಂ. 1, ವಾರ್ಡ್ ನಂ.01, ಆಸ್ತಿ ಇರುವ ಪ್ರದೇಶ : ರಂಗನಾಥನಗರ ಶ್ರೀರಂಗಪಟ್ಟಣ, ಆಸ್ತಿ ಸಂಖ್ಯೆ: ಎಸ್.3185/5184, ಅಳತೆ : 20X25 , ಚೆಕ್ಕುಬಂದಿ ವಿವರ: ಪೂ– ಬಾಲುರವರ ಮನೆ, ಪ– ನಿಂಗಮ್ಮರವರ ಮನೆ , ಉ– ಈರಣ್ಣ ರವರ ಮನೆ, ದ– ರಸ್ತೆ.

ಸಹಿ/–ಮುಖ್ಯಾಧಿಕಾರಿ, ಪುರಸಭೆ ಶ್ರೀರಂಗಪಟ್ಟಣ

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು. ಜಯಪುರ ಹೋಬಳಿ, ತಳೂರು ಅಂಚೆ, ದೊಡ್ಡ ಕಾಟೂರು ಗ್ರಾಮ, ಮನೆ ನಂ.30 ರಲ್ಲಿ ವಾಸವಾಗಿರುವ ಲೇಟ್.ಡಿ.ಅಂಕಪ್ಪ ರವರ ಮಗನಾದ ಶ್ರೀ.ಡಿ.ಎ.ವಿಜಯ ಶಂಕರ್, ಇವರ ಧರ್ಮಪತ್ನಿ ಶ್ರೀಮತಿ ಮಂಜುಳ ಎಂ. ಮತ್ತು ಇವರ ಮೈನರ್ ಮಕ್ಕಳುಗಳಾದ ಪ್ರೇಮ್ ಡಿ.ವಿ. ಮತ್ತು ನಿಸರ್ಗ ಡಿ.ವಿ. ರವರುಗಳಿಂದ ಮೈಸೂರು– 570008, ವಿದ್ಯಾರಣ್ಯಪುರಂ, 2ನೇ ಮೇನ್ ರವರುಗಳಿಂದ 10ನೇ ಕ್ರಾಸ್, ಮನೆ ನಂ.125 ರಲ್ಲಿ ವಾಸವಾಗಿರುವ ಲೇಟ್.ಕೃಷ್ಣಮೂರ್ತಿ ಸಿ.ಎಲ್. ರವರ ಮಕ್ಕಳು ಗಳಾದ ಶ್ರೀ.ವೆಂಕಟೇಶ್ ಸಿ.ಕೆ. ಮತ್ತು ಶ್ರೀ.ಸುದೀಂದ್ರ ಸಿ.ಕೆ. ಆದ ನನ್ನ ಕಕ್ಷಿಗಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿ ಸಿದ್ದು, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ, ಯಾವುದೇ ವಿಧವಾದ ಹಕ್ಕುಬಾಧ್ಯತೆ ಇದ್ದಲ್ಲಿ ಈ ದಿನದಿಂದ 7 (ಏಳು) ದಿನದೊಳಗೆ ತಮ್ಮ ಲಿಖಿತ ತಕರಾರುಗಳನ್ನು ದಾಖಲೆ ಸಮೇತ ಈ ಕೆಳಕಂಡ ನನಗೆ ಸಲ್ಲಿಸಬೇಕಾಗಿ ಪ್ರಕಟಿಸಲಾಗಿದೆ. ಒಂದು ವೇಳೆ 7 (ಏಳು) ದಿನಗಳ ಒಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಮುಂದಿನ ಪ್ರಕ್ರಿಯೆಗಳನ್ನು ಮೇಲೆ ತಿಳಿಸಿದ ವ್ಯಕ್ತಿಗಳೊಡನೆ ನಡೆಸುತ್ತಾರೆ ಎಂದು ತಿಳಿಯುವುದು. 7 (ಏಳು) ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಚಿಕ್ಕಕಾಟೂರು ಗ್ರಾಮದ ಸರ್ವೆ ನಂ.51/1 ರ ವಿಸ್ತೀರ್ಣ 2 (ಎರಡು) ಎಕರೆ 03 (ಮೂರು) ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ.49/1ಎ ರ ಜಮೀನು, ಪಶ್ಚಿಮಕ್ಕೆ: ಶ್ರೀ.ಬಸವಲಿಂಗಪ್ಪ ರವರ ಜಮೀನು, ಉತ್ತರಕ್ಕೆ: ಶ್ರೀ.ಡಿ.ಎ.ಶಿವಕುಮಾರ್ ರವರ ಜಮೀನು, ದಕ್ಷಿಣಕ್ಕೆ: ಶ್ರೀ.ಡಿ.ವಿ.ವಿಜಯಶಂಕರ್ ಸೇರಿದ ಸರ್ವೆ ನಂ.51/2 ರಲ್ಲಿನ ಜಮೀನು.

Sd/- S.Pradeepkumar MBA, LLB
Advocate,Roll No: Kar/1332/2012
2917/A 1st Floor, Opp, TTL College, Kanthraja urs Road, Saraswathipuram, Mysuru-570009, Mob: 9740315184

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,
ಮೈಸೂರು ಅರಮನೆ ಮಂಡಳಿ, ಮೈಸೂರು
Phone: 0821-2421051 Fax: 2434425
e-mail : ddmysorepalace@gmail.com,
ಟೆ.ಸಂ.: ಕಾನಿಅ/ಮೈಅಮಂ/ಉನಿ/ಸಿವಿಲ್/ಟೆಂಡರ್–03/2023–24
ದಿನಾಂಕ: 14.06.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ 9ನೇ ಅಂತರಾಷ್ಟೀಯ ಯೋಗ ದಿನಾಚರಣೆಯ ಪ್ರಯುಕ್ತ ನಡೆಯುವ ಕಾರ್ಯಕ್ರಮಗಳಿಗೆ ಸಿವಿಲ್ ವಿಭಾಗದಿಂದ 01 ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಒಟ್ಟು ರೂ.4.00 ಲಕ್ಷಗಳ ಕೆಲಸಕ್ಕೆ ಸದರಿ ಕೆಲಸದಲ್ಲಿ ಅನುಭವವಿರುವ ಅರ್ಹ ಗುತ್ತಿಗೆದಾರರು/ ಏಜೆನ್ಸಿ/ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಜಿದಾರರು 1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ ದಿ: 17.06.2023 ಸಂಜೆ 4.00 ಗಂಟೆಯವರೆಗೆ. 2) ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ ದಿ: 17.06.2023 ಸಂಜೆ: 5.00 ಗಂಟೆವರೆಗೆ. 3) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿ: 18.06.2023 ಸಂಜೆ: 4.00 ಗಂಟೆವರೆಗೆ 4) ಭರ್ತಿ ಮಾಡಿದ ಟೆಂಡರನ್ನು ತೆರೆಯುವ ದಿ: 18.06.2023 ಸಂಜೆ : 5.00 ಗಂಟೆಗೆ. ಸದರಿ ಕೆಲಸದಲ್ಲಿ ಅನುಭವವಿರುವ ಗುತ್ತಿಗೆದಾರರಿಗೆ ಮಾತ್ರ ಸಂಬಂಧಿಸಿದ ಕಾಮಗಾರಿಯ ಟೆಂಡರ್ ಫಾರಂ ನೀಡಲಾಗುವುದು. ಹೆಚ್ಚಿನ ವಿವರಗಳಿಗೆ ಉಪ ನಿರ್ದೇಶಕರ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರು ರಲ್ಲಿ ಕಛೇರಿಯ ಸಮಯದಲ್ಲಿ ಮಾಹಿತಿ ಪಡೆಯಬಹುದು.

ಸಹಿ/– ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು
DIPR/DDMYS/KSMCA/56/2023-24

ಅಭಿಷೇಕ್–ಅವಿವಾ ವಿವಾಹದ ಅದ್ಧೂರಿ ಬೀಗರ ಔತಣ

● ಸಾಂಗವಾಗಿ ನಡೆಯುತ್ತಿದ್ದ ಔತಣಕೂಟದಲ್ಲಿ ಇದ್ದಕ್ಕಿದ್ದಂತೆ ನುಗ್ಗಿದ ಜನರ ಗುಂಪು; ಬಿರಿಯಾನಿ, ಕಬಾಬ್ ಇನ್ನಿತರೆ ಖಾದ್ಯಗಳು ಚೆಲ್ಲಾಪಿಲ್ಲಿ ● ಹಲವರು ಊಟವಿಲ್ಲದೇ ಹಸಿವಿನಿಂದಲೇ ವಾಪಸ್



ಮಂಡ್ಯ, ಜೂ. 16– ರೆಬಲ್ ಸ್ಟಾರ್ ಅಂಬರೀಷ್, ಸಂಸದೆ ಸುಮಲತಾ ದಂಪತಿ ಪುತ್ರ ಅಭಿಷೇಕ್ ಮತ್ತು ಅವಿವಾ ಬಿದ್ದಪ್ಪ ಬೀಗರ ಊಟ ಮದ್ದೂರು ತಾಲೂಕು ಗೆಜ್ಜಲಗೆರೆಯಲ್ಲಿ ಶುಕ್ರವಾರ ಅದ್ಧೂರಿಯಾಗಿ ನಡೆಯಿತು.

ಅಭಿಷೇಕ್ ಮತ್ತು ಅವಿವಾ ಬಿದ್ದಪ್ಪ ವಿವಾಹ ಬೆಂಗಳೂರಿನ ಅರಮನೆ ಮೈದಾನದಲ್ಲಿ ಅದ್ಧೂರಿಯಾಗಿ ನಡೆದಿದ್ದು, ಇಂದು ಗೆಜ್ಜಲಗೆರೆಯಲ್ಲಿ 15 ಎಕರೆ ಪ್ರದೇಶದಲ್ಲಿ ಬೀಗರ ಊಟವನ್ನು ಅದ್ಧೂರಿಯಾಗಿ ಏರ್ಪಡಿಸಲಾಗಿತ್ತು. 15 ಎಕರೆ ಪೈಕಿ 4 ಎಕರೆ ಪ್ರದೇಶದಲ್ಲಿ ಊಟಕ್ಕಾಗಿ ಟೇಬಲ್‌ಗಳನ್ನು ವ್ಯವಸ್ಥಿತವಾಗಿ ಹಾಕಲಾಗಿತ್ತು. ಮಾಂಸಹಾರ ಮತ್ತು ಸಸ್ಯಾಹಾರಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. ಮಾಂಸಹಾರಕ್ಕಾಗಿ 4,800 ಆಸನಗಳನ್ನು ಹಾಗೂ ಸಸ್ಯಾಹಾರಕ್ಕಾಗಿ 1,200 ಸೇರಿದಂತೆ ಒಂದು ಪಂಕ್ತಿಗೆ 6 ಸಾವಿರ ಮಂದಿ ಊಟ ಮಾಡಲು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿತ್ತು.

ಮಂಡ್ಯದ ಗಾಂಧಿನಗರದ ಖ್ಯಾತ ಅಡುಗೆಯವರಾದ ಪ್ರಕಾಶ್ ನೇತೃತ್ವದಲ್ಲಿ ಸುಮಾರು 30 ಸಾವಿರ ಮಂದಿಗೆ ಊಟ ಸಿದ್ಧಪಡಿಸಲಾಗಿತ್ತು. ಮುದ್ದೆ, ಮಟನ್ ಬಿರಿಯಾನಿ, ಬೋಟಿ ಗೊಜ್ಜು, ಮಟನ್ ಚಾಪ್ಸ್, ಚಿಕ್ಕನ್ ಚಾಪ್ಸ್, ಫಿಶ್, ನಾಟಿ ಕೋಳಿ, ಚಿಕ್ಕನ್ ಕಬಾಬ್ ಜೊತೆಗೆ ಬಾದೂಷಾ ಬಡಿಸಲಾಯಿತು. ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ ಮಾತ್ರವಲ್ಲದೇ ಮಂಡ್ಯ ಜಿಲ್ಲೆಯ ವಿವಿಧೆಡೆಯಿಂದ ಹಾಗೂ ರಾಮನಗರ, ಬೆಂಗಳೂರು, ತುಮಕೂರು, ಚಾಮರಾಜನಗರ, ಮೈಸೂರು ಸೇರಿದಂತೆ ಹಲವು ಭಾಗಗಳಿಂದ ಸಾವಿರಾರು ಮಂದಿ ಅಂಬರೀಷ್ ಅಭಿಮಾನಿಗಳು ಬೀಗರ ಊಟಕ್ಕೆ ಅಭಿಮಾನದಿಂದ ಆಗಮಿಸಿದ್ದರು. ಹಲವರು ಗೆಜ್ಜಲಗೆರೆ ಸಮೀಪದ ಹನಕೆರೆ ರೈಲು ನಿಲ್ದಾಣದಲ್ಲಿ ಇಳಿದು ನಡೆದುಕೊಂಡೇ ಬೀಗರ ಊಟದ ಜಾಗಕ್ಕೆ ತೆರಳುತ್ತಿದ್ದ ದೃಶ್ಯ ಕಂಡುಬಂದಿತು. ಅಲ್ಲದೇ, ಬೆಂಗಳೂರು–ಮೈಸೂರು ಹೆದ್ದಾರಿಯ ಸರ್ವೀಸ್ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆಗಿದ್ದ ಹಿನ್ನೆಲೆಯಲ್ಲಿ ಸುಮಾರು 2 ಕಿಲೋ ಮೀಟರ್ ಹಿಂದೆಯೇ ವಾಹನ ಗಳನ್ನು ನಿಲ್ಲಿಸಿ ಬೀಗರ ಊಟದ ಸ್ಥಳಕ್ಕೆ ಸಾವಿರಾರು ಮಂದಿ ನಡೆದುಕೊಂಡು ಬರುತ್ತಿದ್ದರು.

ಬೀಗರ ಊಟದ ಬೃಹತ್ ಪೆಂಡಾಲ್‌ನ ಮುಂಭಾಗ ನೂತನ ದಂಪತಿ ಅಭಿಷೇಕ್ ಮತ್ತು ಅವಿವಾ ಬಿದ್ದಪ್ಪ ಅವರನ್ನು ಆಶೀರ್ವದಿಸಲು ಸ್ಟೇಜ್‌ವೊಂದನ್ನು ಸಿದ್ಧಪಡಿಸಲಾಗಿತ್ತು. ಈ ವೇಳೆ ಅಭಿಮಾನಿಯೊಬ್ಬರು ಎತ್ತಿನ ಮೇಲೆ ಅಭಿಷೇಕ್ ಮತ್ತು ಅವಿವಾ ದಂಪತಿ ಚಿತ್ರ ಬಿಡಿಸಿ ಅದನ್ನು ನೂತನ ದಂಪತಿಗೆ ಉಡುಗೊರೆ ನೀಡಿದ್ದು ವಿಶೇಷವಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಗಣಿಗ ರವಿಕುಮಾರ್, ಪಿ.ಎಂ. ನರೇಂದ್ರಸ್ವಾಮಿ, ರಮೇಶ್ ಬಾಬು ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಗೋಪಾಲಕೃಷ್ಣ, ಜಿಲ್ಲಾ ಎಸ್ಪಿ ಯತೀಶ್ ಸೇರಿದಂತೆ ನೂರಾರು ಗಣ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ನೂತನ ದಂಪತಿಗೆ ಶುಭ ಹಾರೈಸಿದರು. ಸಂಸದೆ ಸುಮಲತಾ ಅಂಬರೀಷ್ ಕುಟುಂಬಸ್ಥರು, ಅಂಬರೀಷ್ ಕುಟುಂಬದ ಆಪ್ತ, ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಮುಂತಾದವರು ಅತಿಥಿಗಳನ್ನು ಸತ್ಕರಿಸಿದರು.

ಅವ್ಯವಸ್ಥೆ: ಬೀಗರ ಊಟ ಕಾರ್ಯಕ್ರಮ ಆರಂಭದಲ್ಲಿ ವ್ಯವಸ್ಥಿತವಾಗಿಯೇ ನಡೆಯುತ್ತಿತ್ತು. ಬೆಳಗ್ಗೆ 10 ಗಂಟೆಯಿಂದಲೇ ಗೆಜ್ಜಲಗೆರೆಯತ್ತ ಅಂಬರೀಷ್ ಅಭಿಮಾನಿಗಳು ಸಾಗರೋಪಾದಿಯಲ್ಲಿ ಬರಲಾಂಭಿಸಿದರು. 11.30ಕ್ಕೆ ಮೊದಲ ಪಂಕ್ತಿಯ ಊಟ ಆರಂಭವಾಯಿತು. ಮುಂಜಾಗ್ರತಾ ಕ್ರಮ ಕೈಗೊಂಡಿದ್ದ ಪೊಲೀಸರು ಬ್ಯಾರಿಕೇಡ್ ಹಾಕಿ, ಒಮ್ಮೆ ಪಂಕ್ತಿ ತುಂಬಿದ ಬಳಿಕ ಅವರು ಊಟ ಮಾಡಿ, ಕೈ ತೊಳೆಯಲು ಎದ್ದುಹೋದ ನಂತರ ಇತರರನ್ನು ಊಟಕ್ಕೆ ಕಳುಹಿಸುತ್ತಿದ್ದರು. 3 ಪಂಕ್ತಿಗಳು ಬಹಳ ಅಚ್ಚುಕಟ್ಟಾಗಿಯೇ ನಡೆಯಿತು. ಆದರೆ, 4ನೇ ಪಂಕ್ತಿ ಆರಂಭಕ್ಕೂ ಮುನ್ನ ಜನಜಂಗುಳಿ ಹೆಚ್ಚಾಗಿ, ಸರತಿ ಸಾಲಿನಲ್ಲಿ ನಿಂತಿದ್ದ ಜನರು ಬ್ಯಾರಿಕೇಡ್ ಮುರಿದು, ಪೆಂಡಾಲ್ ಹರಿದು ಊಟದ ಹಾಲ್‌ಗೆ ನುಗ್ಗಲಾರಂಭಿಸಿದರು. ಕಡಿಮೆ ಸಂಖ್ಯೆಯಲ್ಲಿದ್ದ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರೂ ಜನರನ್ನು ನಿಯಂತ್ರಿಸಲಾಗಲಿಲ್ಲ. ಪುರುಷರು, ಮಹಿಳೆಯರು ಮತ್ತು ಮಕ್ಕಳೆನ್ನದೆ ಅಡುಗೆ ಮನೆಗೆ ನುಗ್ಗಿ ತಮಗೆ ಬೇಕಾದ ಖಾದ್ಯಗಳನ್ನು ತಾವೇ ಎತ್ತಿಕೊಂಡು ತಿನ್ನಲಾರಂಭಿಸಿದರು. ಕೆಲವರಂತೂ ಕುಕ್ಕೆಯಲ್ಲಿ ಕಬಾಬ್ ತುಂಬಿ ಕೊಂಡು ಊಟದ ಪೆಂಡಾಲ್‌ನಿಂದ ಹೊರಗೆ ಬಂದು ಹಂಚಲಾರಂಭಿಸಿದರು. ಕೆಲವರು ಕೈಗೆ ಸಿಕ್ಕಷ್ಟು ಕಬಾಬ್ ಅನ್ನು ಪಂಚೆಯಲ್ಲಿ ಕಟ್ಟಿಕೊಂಡು ಹೋಗುತ್ತಿದ್ದುದು ಕಂಡು ಬಂತು. ಒಟ್ಟಾರೆ ಅಡುಗೆ ಮನೆಯಲ್ಲಿ ಪರಿಸ್ಥಿತಿ ಕೈಮೀರಿತ್ತು. ಸಂಸದೆ ಸುಮಲತಾ, ಅಭಿಷೇಕ್, ರಾಕ್‌ಲೈನ್ ವೆಂಕಟೇಶ್ ಮುಂತಾದವರು ಎಲ್ಲರನ್ನೂ ಛೇರ್‌ಗಳಲ್ಲಿ ಕುಳಿತುಕೊಳ್ಳಿ ಊಟ ಬರುತ್ತದೆ ಎಂದು ಪರಿಪರಿಯಾಗಿ ಮನವಿ ಮಾಡಿದರೂ ಯಾರೂ ಕೇಳುವ ಸ್ಥಿತಿಯಲ್ಲಿರಲಿಲ್ಲ. ಈ ಅವ್ಯವಸ್ಥೆ ಅಪಾರ ಪ್ರಮಾಣದ ಊಟೋಪಚಾರ ಚೆಲ್ಲಾಡಿತ್ತು. ಹಲವಾರು ಮಂದಿ ಊಟ ಸಿಗದೇ ವಾಪಸ್ಸಾಗುವಂತಾಯಿತು.



ಯಾರೋ ಮಾಡಿದ ಪ್ರವೋಕ್‌ನಿಂದಾಗಿ ಇಷ್ಟೆಲ್ಲಾ ರಾದ್ಧಾಂತವಾಯ್ತು...



ಮಂಡ್ಯ, ಜೂ. 16– ಜನರು ನಮಗೆ ಹೆಚ್ಚು ಪ್ರೀತಿ ತೋರಿಸಿದ್ದಾರೆ. ಸಾವಿರಾರು ಮಂದಿ ಬಂದು ಮನಸಾರೆ ಹರಸಿದ್ದಾರೆ. ಬೀಗರ ಊಟದಲ್ಲಿ ಊಟ ಶಾರ್ಟೇಜ್ ಆಗಿಲ್ಲ, ಪ್ರವೋಕ್‌ನಿಂದಾಗಿ ಅಡುಗೆ ಮನೆಗೆ ಜನರು ನುಗ್ಗಿದ್ದರಿಂದ ಊಟ ವ್ಯರ್ಥವಾಯಿತು ಎಂದು ಹೇಳಿರುವ ಅಂಬರೀಷ್ ಪುತ್ರ ಅಭಿಷೇಕ್, ಊಟ ವ್ಯರ್ಥವಾಗಿದ್ದಕ್ಕೆ ಕ್ಷಮೆ ಕೇಳಿದ್ದಾರೆ.

ತಂದೆ–ತಾಯಿ ಆಸೆಯಂತೆ ಮಂಡ್ಯದಲ್ಲಿ ಅದ್ಧೂರಿಯಾಗಿ ಬೀಗರ ಊಟ ಏರ್ಪಡಿಸಿದ್ದೆವು. ಆಯೋಜನೆ ಮಾಡಿದವರು ಬಹಳ ಕಷ್ಟಪಟ್ಟು ವ್ಯವಸ್ಥೆ ಮಾಡಿದ್ದರು. ಸಣ್ಣ ಪ್ರವೋಕ್‌ನಿಂದಾಗಿ ಅವ್ಯವಸ್ಥೆಯಾಗಿದೆ. ಯಾರಿಗೂ ಕೊರತೆಯಾಗದಂತೆ ಅಡುಗೆ ಮಾಡಿಸಿದ್ದೆವು. ಎಷ್ಟೇ ಜನ ಬಂದರೂ ಜನರ ಸಂಖ್ಯೆಯನ್ನು ನೋಡಿಕೊಂಡು ಇನ್ನೂ ಹೆಚ್ಚಾಗಿ ಅಡುಗೆ ಮಾಡುವ ವ್ಯವಸ್ಥೆಯೂ ಆಗಿತ್ತು ಎಂದಿರುವ ಅವರು, ತುಂಬಾ ಊಟ ಹಾಳಾಗಿದೆ. ಬೀಗರ ಊಟ ಹಾಳು ಮಾಡಿದ್ದು ಯಾರು ಎಂದು ಗೊತ್ತಿಲ್ಲ ಎಂದಿದ್ದಾರೆ. ಇದು ರಾಜಕೀಯ ಬೀಗರ ಊಟ ಎಂದು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಕೇಳಿದ್ದೇನೆ. ಆದರೆ, ಇದು ರಾಜಕೀಯದ ಊಟ ಅಲ್ಲ. ಅವ್ಯವಸ್ಥೆಯಿಂದ ಊಟ ವ್ಯರ್ಥವಾಗಿ ಹಲವರಿಗೆ ಊಟ ಸಿಗದೇ ಹೋಗಿದ್ದಕ್ಕೆ ಬಹಳ ಬೇಜಾರಾಗಿದೆ. ಇದನ್ನು ರಾಜಕೀಯ ವಿರೋಧಿಗಳು ರಾಜಕೀಯಕ್ಕಾಗಿ ಬಳಸಿಕೊಳ್ಳುವುದಾದರೆ ಅವರಿಗೂ ಒಳ್ಳೆಯದಾಗಲಿ. ಊಟಕ್ಕಿಂತ ನಿಮ್ಮನ್ನು ನೋಡಲು ಬಂದೆವು ಎಂದು ನಮಗೆ ಬಹಳಷ್ಟು ಜನ ಹೇಳಿದ್ದಾರೆ. ಜನರು ನಮ್ಮ ನಿರೀಕ್ಷೆಗಿಂತ ಹೆಚ್ಚು ಪ್ರೀತಿ ತೋರಿಸಿದ್ದಾರೆ. ಅದಕ್ಕಾಗಿ ಜನತೆಗೆ ಕೃತಜ್ಞತೆ ಸಲ್ಲಿಸುತ್ತಿದ್ದೇನೆ ಎಂದು ಅವರು ಹೇಳಿದರು.

ಬಾಕಿ ಉಳಿದಿರುವ ಎಲ್ಲಾ ಕಡತ ಶೀಘ್ರ ವಿಲೇವಾರಿ: ದರ್ಶನ್



ಪಾಂಡವಪುರ, ಜೂ.16– ತಾಲೂಕು ಕಚೇರಿಯಲ್ಲಿ ಬಾಕಿ ಉಳಿದಿರುವ ಎಲ್ಲಾ ಕಡತ(ಫೈಲ್)ಗಳನ್ನು ಶೀಘ್ರ ವಿಲೇವಾರಿ ಮಾಡಲಾಗುವುದು ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧದಲ್ಲಿ ಶಾಸಕರ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು ತಾಲೂಕು ಕಚೇರಿಯಲ್ಲಿರುವ ಸಮಸ್ಯೆ, ಕುಂದುಕೊರತೆ ನಿವಾರಿಸುವ ಸಂಬಂಧ ಜೂ.24, 25ರಂದು ತಹಸೀಲ್ದಾರ್ ನೇತೃತ್ವದಲ್ಲಿ ಅಧಿಕಾರಿಗಳ ಸಭೆ ಕರೆಯಲಾಗಿದೆ ಎಂದ ಅವರು, ಕಚೇರಿಯಲ್ಲಿರುವ ಹಳೇ ಫೈಲ್‌ಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಲು ಈಗಾಗಲೇ ತಹಸೀಲ್ದಾರ್ ಜೊತೆ ಚರ್ಚಿಸಿದ್ದು, ವಿಲೇವಾರಿಗೆ ಕ್ರಮ ಕೈಗೊಳ್ಳಲಾಗುವುದು. ಜೊತೆಗೆ ಆಧಾರ್ ಕಾರ್ಡ್‌ಗೆ ಮೊಬೈಲ್ ಸಂಖ್ಯೆ ಲಿಂಕ್ ಮಾಡುವ ಬಗ್ಗೆಯೂ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು ಸಾರ್ವಜನಿಕರು, ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು ಎಂದು ತಿಳಿಸಿದ ಶಾಸಕ ದರ್ಶನ್ ತಾಲೂಕು ಕಚೇರಿಯಲ್ಲಿ ಶಾಸಕರ ಕಚೇರಿ ತೆರೆಯಲಾಗಿದೆ. ಮಂಡ್ಯದಲ್ಲೂ ಶಾಸಕರ ಕಚೇರಿ ತೆರೆಯಲಾಗುವುದು. ಎರಡೂ ಕಚೇರಿಗಳಲ್ಲೂ ವಾರದಲ್ಲಿ ಒಂದೊಂದು ದಿನ ಸಾರ್ವಜನಿಕರ ಸಮಸ್ಯೆ ಆಲಿಸಲಾಗುವುದು. ನಮ್ಮ ಅನುಪಸ್ಥಿತಿಯಲ್ಲಿ ಸಾರ್ವಜನಿಕರ ಕುಂದು ಕೊರತೆ ಆಲಿಸಲು ಸಿಬ್ಬಂದಿ ನೇಮಿಸಲಾಗುವುದು ಎಂದರು. ಈ ವೇಳೆ ತಹಸೀಲ್ದಾರ್ ಸೌಮ್ಯ ಸೇರಿದಂತೆ ಇಲಾಖೆ ಅಧಿಕಾರಿಗಳಿದ್ದರು.

ಮೈಷುಗರ್‌ನಲ್ಲಿ ಕಬ್ಬು ನುರಿಯುವ ಕಾರ್ಯಕ್ಕೆ ಚಾಲನೆ



ಮಂಡ್ಯ, ಜೂ.16– ಜಿಲ್ಲೆಯ ಜೀವನಾಡಿ ಮೈಷುಗರ್ ನಲ್ಲಿ ಶುಕ್ರವಾರ ಕಬ್ಬು ನುರಿಯುವ ಕಾರ್ಯಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಸಕ್ಕರೆ ಮತ್ತು ಎಪಿಎಂಸಿ ಸಚಿವ ಶಿವಾನಂದ ಪಾಟೀಲ್ ಚಾಲನೆ ನೀಡಿದರು.

ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸುವ ಸಲುವಾಗಿ ನೂತನ ಸರ್ಕಾರ 50 ಕೋಟಿ ಮಂಜೂರು ಮಾಡಿತ್ತು. ಈ ನಿಟ್ಟಿನಲ್ಲಿ ಶುಕ್ರವಾರ ಮಂಡ್ಯದ ಷುಗರ್‌ಟೌನ್‌ನಲ್ಲಿರುವ ಮೈಷುಗರ್ ಕಾರ್ಖಾನೆಯಲ್ಲಿ 2023–24ನೇ ಸಾಲಿನ ಕಬ್ಬು ನುರಿಯುವ ಕಾರ್ಯಕ್ಕೆ ಬಾಯ್ಲರ್‌ಗೆ ಅಗ್ನಿ ಸ್ಪರ್ಶ ಮಾಡುವ ಮೂಲಕ ಚಾಲನೆ ನೀಡಲಾಯಿತು. ಬಾಯ್ಲರ್‌ಗೆ ಬೆಂಕಿ ಹಾಕುವ ಮುನ್ನಾ ಮೈಷುಗರ್ ಆವರಣದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ಪೂಜೆ ಹಾಗೂ ಹೋಮ ನಡೆಸಿದ ಪುರೋಹಿತ ವರ್ಗ, ಮೈಷುಗರ್ ಕಾರ್ಖಾನೆ ಆರಂಭಕ್ಕೆ ಅಡೆತಡೆಗಳು ಎದುರಾಗದಂತೆ ಜನಪ್ರತಿನಿಧಿಗಳು, ಅಧಿಕಾರಿ ವರ್ಗ ಹಾಗೂ ರೈತ ಮುಖಂಡರು ಪ್ರಾರ್ಥನೆ ಸಲ್ಲಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಮೊದಲ ಅನುದಾನ ಮಂಡ್ಯ ಜಿಲ್ಲೆಗೆ ಕೊಡಲಾಗಿದೆ. ಮೈಷುಗರ್ ಪುನರಾರಂಭಿಸಲು 50 ಕೋಟಿ ಕೊಟ್ಟಿದ್ದಾರೆ. ಜಿಲ್ಲೆಯ ರೈತರ ಪರವಾಗಿ ಸಿಎಂ, ಡಿಸಿಎಂಗೆ ಕೃತಜ್ಞತೆ ಸಲ್ಲಿಸುತ್ತೇನೆ. ಕಾರ್ಖಾನೆ ಆರಂಭಿಸಲು ಸರ್ಕಾರ ಎಲ್ಲಾ ರೀತಿ ಬೆಂಬಲ ನೀಡಲಿದೆ ಎಂದರು. ಜೂನ್ ಅಂತ್ಯದಲ್ಲಿ ಕಬ್ಬು ನುರಿಯುವ ಕಾರ್ಯ ಆರಂಭವಾಗಲಿದೆ. ಯಾವುದೇ ಸಮಸ್ಯೆ ಬರದಂತೆ ಫ್ಯಾಕ್ಟರಿ ನಡೆಯಲಿದೆ. ನಾವು ಕೊಟ್ಟ ಭರವಸೆಗಳನ್ನು ಹಂತ ಹಂತವಾಗಿ ಈಡೇರಿಸುತ್ತೇವೆ ಎಂದ ಅವರು, ಕಾರ್ಖಾನೆ ವಿದ್ಯುತ್ ದರ ಜಾಸ್ತಿ, ಕಡಿಮೆ ಮಾಡುವುದಕ್ಕೆ ನಿಗಮವಿದೆ. ಸರ್ಕಾರದ ಕೈಲಿ ಆ ತೀರ್ಮಾನ ಇಲ್ಲ ಎಂದರು.

ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಮಾತನಾಡಿ, ಮೈಷುಗರ್ ಕಾರ್ಖಾನೆಯಲ್ಲಿ ಕೆಲ ಸಮಸ್ಯೆಗಳಿವೆ. ಕಳೆದ ವರ್ಷ ಕಡಿಮೆ ಕಬ್ಬು ನುರಿಸಿರುವುದರಿಂದ ನಷ್ಟ ಆಗಿದೆ. ಈ ವರ್ಷ ಕನಿಷ್ಠ 3500 ಟನ್ ಕಬ್ಬು ನುರಿದರೆ ಲಾಭ ಆಗಲ್ಲ. ಆದರೆ ನಷ್ಟ ತಡೆಯಬಹುದು. ಹೊಸ ಕಾರ್ಖಾನೆ ಬೇಡಿಕೆ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಕಾರ್ಖಾನೆಗೆ ಬೇಕಾದ ಕಬ್ಬು ರೈತರು ಕೊಡಬೇಕು. ದುಡ್ಡು ಕೊಡಿಸುವ ಜವಾಬ್ದಾರಿ ನಮ್ಮದು. ಇತರೆ ಕಾರ್ಖಾನೆಗಳಲ್ಲಿ ಕೊಡುವ ಬೆಲೆಯನ್ನೇ ನಾವು ಕೊಡುತ್ತೇವೆ. ಸಂಪೂರ್ಣ ವಿಶ್ವಾಸ ಇಟ್ಟು ಕಾರ್ಖಾನೆಗೆ ಕಬ್ಬು ಕೊಡಿ ಎಂದು ಮನವಿ ಮಾಡಿದರು.

ಸಂಸದೆ ಸುಮಲತಾ ಅಂಬರೀಷ್ ಮಾತನಾಡಿದರು. ಈ ವೇಳೆ ಶಾಸಕರಾದ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ಗಣಿಗ ರವಿಕುಮಾರ್, ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ಅಪ್ಪಸಾಹೇಬ್ ಪಾಟೀಲ್, ಜಿಲ್ಲಾಧಿಕಾರಿ ಡಾ. ಗೋಪಾಲಕೃಷ್ಣ, ಜಿಪಂ ಸಿಇಓ ಶೇಕ್ ತನ್ವೀರ್ ಆಸೀಫ್, ಎಸ್ಪಿ ಎನ್.ಯತೀಶ್, ರೈತ ಮುಖಂಡರಾದ ಸುನಂದಾ ಜಯರಾಂ, ಮಂಜು ಸೇರಿದಂತೆ ಹಲವರಿದ್ದರು.

ಮೂರನೇ ಪುಟದಿಂದ

ತೆಲಂಗಾಣ ಒಪ್ಪಿಗೆ

ಇದರಿಂದ ತೆಲಂಗಾಣದಲ್ಲಿ ಪ್ರಸ್ತುತ 38 ಲಕ್ಷ ಮೆ.ಟನ್ ಅಕ್ಕಿ ಸರ್ಕಾರದ ಉಗ್ರಾಣ ಮತ್ತು ರೈತರ ಬಳಿ ಉಳಿದುಕೊಂಡಿದೆ. ಇಡೀ ರಾಷ್ಟ್ರದಲ್ಲಿ ಹೆಚ್ಚು ಎಂದರೆ 76.83 ಲಕ್ಷ ಟನ್ ಭತ್ತ ಬೆಳೆಯುವ ರಾಜ್ಯ ತೆಲಂಗಾಣವಾಗಿದ್ದು, ಬೆಳೆದ ಬೆಳೆಯಲ್ಲಿ ಶೇ.50 ರಷ್ಟು ಮಾರಾಟವಾಗದೇ ಉಳಿದಿದೆ. ಕೇಂದ್ರ ಸರ್ಕಾರದ ಈ ಧೋರಣೆಯಿಂದ ಅಸಮಾಧಾನಗೊಂಡಿರುವ ತೆಲಂಗಾಣ ಸರ್ಕಾರಕ್ಕೆ ಕರ್ನಾಟಕದ ಬೇಡಿಕೆ ವರದಾನವಾಗಿದೆ. ರೈತರು ಯಥೇಚ್ಛವಾಗಿ ಬೆಳೆಯುವ ಭತ್ತ ಪೂರ್ಣ ಪ್ರಮಾಣದಲ್ಲಿ ಮಾರಾಟವಾಗದೇ ಉಳಿದಿರುವುದರಿಂದ ಅಲ್ಲಿನ ಅನ್ನದಾತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ವಿಧಾನ ಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ಬಡತನ ರೇಖೆ ಗಿಂತ ಕೆಳಗಿನ ಕುಟುಂಬಗಳ ಪ್ರತಿ ಯುನಿಟ್‌ಗೆ 5 ಕೆ.ಜಿ. ಹೆಚ್ಚುವರಿಯಾಗಿ ಅಕ್ಕಿ ನೀಡುವ ಭರವಸೆ ನೀಡಿತ್ತು.

ಅಧಿಕಾರಕ್ಕೆ ಬಂದ ನಂತರ ಯೋಜನೆ ಅನುಷ್ಠಾನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ಮಾಡಿ ಸಂಪುಟದ ಒಪ್ಪಿಗೆಯೂ ದೊರೆಯಿತು. ಈ ಯೋಜನೆಗೆ ಅಗತ್ಯವಾಗಿರುವ 2.28 ಲಕ್ಷ ಮೆಟ್ರಿಕ್ ಟನ್ ಹೆಚ್ಚುವರಿ ಅಕ್ಕಿಯನ್ನು ಪೂರೈಸುವಂತೆ ಕೇಂದ್ರ ಆಹಾರ ನಿಗಮಕ್ಕೆ ಮಾಡಿದ ಮನವಿಗೆ ಮೊದಲು ಸ್ಪಂದನೆ ದೊರೆತಿತ್ತು. ಬದಲಾದ ಕೇಂದ್ರದ ನಿಲುವಿನಿಂದ ಕೊನೆ ಗಳಿಗೆಯಲ್ಲಿ ಆಹಾರ ನಿಗಮವು ಅಕ್ಕಿ ನೀಡಲು ನಿರಾಕರಿಸಿದ್ದರಿಂದ ರಾಜ್ಯ ಸಂಕಷ್ಟಕ್ಕೆ ಸಿಲುಕಿದ್ದು, ಜುಲೈ ಒಂದರಿಂದ ಗ್ಯಾರಂಟಿ ಅನುಷ್ಠಾನಗೊಳಿಸುವುದು ಅನುಮಾನವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ತೆಲಂಗಾಣ, ಛತ್ತೀಸ್‌ಘಡ, ಆಂಧ್ರಪ್ರದೇಶ ಸೇರಿದಂತೆ ಅತಿಹೆಚ್ಚು ಭತ್ತ ಬೆಳೆಯುವ ರಾಜ್ಯಗಳ ಸಂಪರ್ಕ ಮಾಡಿ ತಮಗೆ ಅಕ್ಕಿ ಲಭ್ಯತೆ ಬಗ್ಗೆ ಮಾತುಕತೆ ನಡೆಸಿದ್ದರು. ಸಿದ್ದರಾಮಯ್ಯ ಅವರು ತೆಲಂಗಾಣ ಮುಖ್ಯಮಂತ್ರಿಗಳೊಂದಿಗೆ ದೂರವಾಣಿ ಮೂಲಕ ಚರ್ಚೆ ನಡೆಸಿದ ನಂತರ ಅಲ್ಲಿನ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವಾಲಯವು ಕರ್ನಾಟಕಕ್ಕೆ ಅಗತ್ಯವಿರುವ ಅಕ್ಕಿ ಸರಬರಾಜು ಮಾಡುವ ಸಂಬಂಧ ಆಂತರಿಕವಾಗಿ ಚರ್ಚಿಸಿದ್ದು, ಅಂತಿಮವಾಗಿ ಅಕ್ಕಿ ನೀಡಲು ತೀರ್ಮಾನಿಸಿದೆ. ಇದೀಗ ರಾಜ್ಯ ಸರ್ಕಾರ ತೆಲಂಗಾಣ ಸರ್ಕಾರದೊಂದಿಗೆ ಅಕ್ಕಿ ಖರೀದಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಿ ಒಪ್ಪಂದ ಮಾಡಿಕೊಳ್ಳಬೇಕು. ಇದಾದ ನಂತರ ರಾಜ್ಯಕ್ಕೆ ಅಗತ್ಯವಿರುವಷ್ಟು ಅಕ್ಕಿ ದೊರೆಯಲಿದೆ.

ಪ್ರೀತ್ಸೆ... ಪ್ರೀತ್ಸೆ... ವಿದ್ಯಾರ್ಥಿನಿ ಆತ್ಮಹತ್ಯೆ

ಗ್ರಾಮಾಂತರ ಪೊಲೀಸ್ ಠಾಣೆಗೆ ಶರತ್ ಕಿರುಕುಳದಿಂದ ಮನನೊಂದು ನನ್ನ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ದೂರು ನೀಡಿದ್ದಾರೆ. ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಯುವಕ ಶರತ್‌ನನ್ನು ಬಂಧಿಸಿ, ಶವವನ್ನು ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಖಾಲಿ ಬಿಳಿ ಹಾಳೆ ಸೇರಿಸಿದ; ಧರ್ಮದೇಟು ತಿಂದ

ಉತ್ತರ ನೀಡಲಿಲ್ಲ. ಇದರಿಂದ ಸಿಟ್ಟಿಗೆದ್ದ ಉಮೇಶ್ ಕೂಗಾಡಿ ಸೈಯದ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಗಲಾಟೆ ಕೇಳಿ ಸುತ್ತಮುತ್ತಲಿದ್ದ ಜನ ಬಂದು ಸೇರಿದರು. ವಂಚಿಸಲು ಯತ್ನಿಸಿದ ಸೈಯದ್‌ಗೆ ಧರ್ಮದೇಟು ನೀಡಿ, ಪೊಲೀಸರಿಗೊಪ್ಪಿಸಿದರು.

ಅಸಲಿ–ನಕಲಿಯಾಟ: ಜಮೀನು ಖರೀದಿಸಿದ ವೇಳೆ ನಂಬಿಕಸ್ಥನಂತೆ ನಟಿಸಿದ್ದ ಸೈಯದ್, 12 ಲಕ್ಷ ಮುಂಗಡ ನೀಡಿ, ಉಳಿಕೆ 30 ಲಕ್ಷವನ್ನು ನೋಂದಣಿ ಬಳಿಕ ನೀಡುವುದಾಗಿ ಒಪ್ಪಂದ ಮಾಡಿಕೊಂಡಿದ್ದ. ಮುಂಗಡ ನೀಡುವಾಗ ಅಸಲಿ ನೋಟುಗಳನ್ನೇ ನೀಡಿದ್ದ ಆತ ಬಾಕಿ ಹಣ ನೀಡುವಾಗ ನಕಲಿಯಾಟಕ್ಕೆ ಮುಂದಾಗಿದ್ದ. ಸಾರ್ವಜನಿಕ ಸ್ಥಳದಲ್ಲಿ ಹಣದ ಕಂತೆಗಳನ್ನು ನೀಡಿದರೆ ಅಲ್ಲಿಯೇ ಎಣಿಸಲು ಹೋಗುವುದಿಲ್ಲ. ಮನೆಗೆ ತೆಗೆದುಕೊಂಡು ಹೋಗುತ್ತಾರೆ. ನಂತರ ಗೊತ್ತಾದರೂ ಆಸ್ತಿ ನೋಂದಣಿ ಆಗಿರುವುದರಿಂದ ಅವರು ಏನೂ ಮಾಡಲಾಗುವುದಿಲ್ಲ ಎನ್ನುವ ದುರಾಲೋಚನೆಯಿಂದ ನೋಟುಗಳ ಮಧ್ಯೆ ಬಿಳಿ ಹಾಳೆಗಳನ್ನು ಸೇರಿಸಿ ಕಂತೆ ಕಂತೆ ಸಿದ್ಧಪಡಿಸಿಕೊಂಡಿದ್ದ ಎನ್ನಲಾಗಿದೆ. ಆದರೆ ಅವರ ಕೆಟ್ಟ ಲೆಕ್ಕಾಚಾರವೆಲ್ಲಾ ಉಲ್ಟಾ ಆಗಿದೆ. ಹಣ ಪಡೆದ ಉಮೇಶ್ ಸ್ಥಳದಲ್ಲೇ ಎಣಿಕೆಗೆ ಮುಂದಾಗಿದ್ದಾರೆ. ಮೊದಲ ಕಟ್ಟಿನಲ್ಲೇ ಬಿಳಿ ಹಾಳೆಗಳನ್ನು ಕಂಡು ಎಚ್ಚೆತ್ತುಕೊಂಡಿದ್ದಾರೆ. ಬಿಳಿ ಹಾಳೆಗಳನ್ನಿಟ್ಟಿರುವ ಬಗ್ಗೆ ಏರುಧ್ವನಿಯಲ್ಲೇ ಪ್ರಶ್ನಿಸಿ, ತರಾಟೆಗೆ ತೆಗೆದುಕೊಂಡಿದ್ದಾರೆ. ಅಮಾಯಕರನ್ನು ಯಾಮಾರಿಸಬಹುದು ಎಂದುಕೊಂಡಿದ್ದ ಸೈಯದ್‌ಗೆ ತಕ್ಕ ಶಾಸ್ತಿ ಮಾಡಿದ್ದಾರೆ. ಈ ಸಂಬಂಧ ಪಶ್ಚಿಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ತನಿಖೆ ಮುಂದುವರೆಸಿದ್ದಾರೆ.

ಬಿಜೆಪಿಗೆ ಈ ಸ್ಥಿತಿ ಬರುತ್ತಿರಲ್ಲ

ಉತ್ಸಾಹ ಅವರಲ್ಲಿ ಕಾಣಲಿಲ್ಲ. ಜನರ ಆಕ್ರೋಶ, ಕಾರ್ಯಕರ್ತರ ನೋವಿಗೆ ನಾನು ಧ್ವನಿಯಾಗಿದ್ದೇನೆ ಎಂದು ಪ್ರತಾಪ್‌ಸಿಂಹ ಹೇಳಿದರು. ನನ್ನನ್ನು ಎಳಸು ಎನ್ನುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಜ್ಯದ ಆರ್ಥಿಕ ಪರಿಸ್ಥಿತಿ ಹಾದಿ ತಪ್ಪುವ ಪರಿವೇ ಇಲ್ಲದೇ ಗ್ಯಾರಂಟಿಗಳನ್ನು ಘೋಷಣೆ ಮಾಡಿದ್ದರಲ್ಲಿ ಯಾವ ಮೆಚ್ಯೂರಿಟಿ ಇದೆ. ಇದಕ್ಕೆ ಬೇಕಾಗುವ 59 ಸಾವಿರ ಕೋಟಿ ರೂ.ಗಳನ್ನು ಅವರು ಹೇಗೆ ತರುತ್ತಾರೆ ಎಂದು ಪ್ರಶ್ನಿಸಿದರು.

ಮಣಿಪುರ ಹಿಂಸಾಚಾರ: ಕೇಂದ್ರ ಸಚಿವ ಆರ್‌ಕೆ ರಂಜನ್ ನಿವಾಸದ ಮೇಲೆ ಪೆಟ್ರೋಲ್ ಬಾಂಬ್ ದಾಳಿ



ಇಂಫಾಲ: ಗುರುವಾರ ತಡರಾತ್ರಿ ಇಂಫಾಲ್‌ನ ಕೊಂಗ್ಬಾದಲ್ಲಿರುವ ಕೇಂದ್ರ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಆರ್‌ಕೆ ರಂಜನ್ ಸಿಂಗ್ ಅವರ ನಿವಾಸಕ್ಕೆ ಗುಂಪೊಂದು ಬೆಂಕಿ ಹಚ್ಚಿದೆ. ಇದನ್ನು ಮಣಿಪುರ ಸರ್ಕಾರ ಖಚಿತಪಡಿಸಿದೆ.

ಎಎನ್‌ಐ ಜೊತೆ ಮಾತನಾಡಿದ ಸಿಂಗ್, ನಾನು ಸದ್ಯ ಅಧಿಕೃತ ಕೆಲಸಕ್ಕಾಗಿ ಕೇರಳದಲ್ಲಿದ್ದೇನೆ. ಅದೃಷ್ಟವಶಾತ್, ನಿನ್ನೆ ರಾತ್ರಿ ನನ್ನ ಇಂಫಾಲ್ ಮನೆಯಲ್ಲಿ ಯಾರಿಗೂ ಅಪಾಯವಾಗಿಲ್ಲ. ದುಷ್ಕರ್ಮಿಗಳು ಪೆಟ್ರೋಲ್ ಬಾಂಬ್‌ಗಳೊಂದಿಗೆ ಬಂದಿದ್ದರು. ನನ್ನ ಮನೆಯ ನೆಲ ಮಹಡಿ ಮತ್ತು ಮೊದಲ ಮಹಡಿಗೆ ಹಾನಿಯಾಗಿದೆ ಎಂದಿದ್ದಾರೆ.

ಈಶಾನ್ಯ ರಾಜ್ಯದಲ್ಲಿ ಶಾಂತಿಗಾಗಿ ಮನವಿ ಮಾಡಿದ ಅವರು, ನನ್ನ ತವರು ರಾಜ್ಯದಲ್ಲಿ ಏನಾಗುತ್ತಿದೆ ಎಂಬುದನ್ನು ನೋಡುವುದು ತುಂಬಾ ದುಃಖಕರವಾಗಿದೆ. ನಾನು ಇನ್ನೂ ಶಾಂತಿಗಾಗಿ ಮನವಿ ಮಾಡುವುದನ್ನು ಮುಂದುವರಿಸುತ್ತೇನೆ. ಈ ರೀತಿಯ ಹಿಂಸಾಚಾರದಲ್ಲಿ ತೊಡಗುವವರು ಸಂಪೂರ್ಣವಾಗಿ ಅಮಾನವೀಯರು ಎಂದರು.

ಈ ಪ್ರದೇಶದಲ್ಲಿ ಕರ್ಫ್ಯೂ ಜಾರಿಯಲ್ಲಿದ್ದರೂ ಜನರ ಗುಂಪು ಸಚಿವರ ನಿವಾಸಕ್ಕೆ ಪ್ರವೇಶಿಸುವಲ್ಲಿ ಯಶಸ್ವಿಯಾಗಿದೆ. ಮಣಿಪುರದಲ್ಲಿ ಸಚಿವರೊಬ್ಬರ ಮನೆಗೆ ಬೆಂಕಿ ಹಚ್ಚುವುದು ಇದು ಎರಡನೇ ಬಾರಿ. ಹೆಚ್ಚಿನ ಸಂಖ್ಯೆಯಲ್ಲಿದ್ದ ಗುಂಪು ಆವರಣದೊಳಗೆ ಪ್ರವೇಶಿಸುವುದನ್ನು ಭದ್ರತಾ ಸಿಬ್ಬಂದಿ ತಡೆಯಲು ಸಾಧ್ಯವಾಗಲಿಲ್ಲ. ಇದುವರೆಗೆ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎನ್ನಲಾಗಿದೆ.

ಸರ್ಕಾರಿ ನೌಕರರ ಸಾಮಾನ್ಯ ವರ್ಗಾವಣೆ ಅವಧಿ ಜೂ.30ರವರೆಗೆ ವಿಸ್ತರಿಸಿ ಸರ್ಕಾರ ಆದೇಶ

ಬೆಂಗಳೂರು, ಜೂ.16– ರಾಜ್ಯ ಸರ್ಕಾರಿ ನೌಕರರ ಸಾಮಾನ್ಯ ವರ್ಗಾವಣೆ ಅವಧಿಯನ್ನು ಜೂನ್ 30ರವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಶುಕ್ರವಾರ ಆದೇಶ ಹೊರಡಿಸಿದೆ. ಈ ಮುಂಚೆ 2023–24ನೇ ಸಾಲಿನ ಸರ್ಕಾರಿ ನೌಕರರ ಸಾಮಾನ್ಯ ವರ್ಗಾವಣೆಗಳನ್ನು ಜೂನ್ 15ರ ವರೆಗೆ ಕೈಗೊಳ್ಳಲು ಅವಕಾಶ ನೀಡಲಾಗಿತ್ತು. ಇದೀಗ ಈ ಅವಧಿಯನ್ನು ಜೂನ್ ಅಂತ್ಯದವರೆಗೂ ವಿಸ್ತರಿಸಿ ಸರ್ಕಾರ ಆದೇಶಿಸಿದೆ.

ಡಾ.ಕುಮಾರ್ ಮಂಡ್ಯ ನೂತನ ಜಿಲ್ಲಾಧಿಕಾರಿ



ಮಂಡ್ಯ, ಜೂ.16– ಕಳೆದ ಒಂದು ವರ್ಷದಿಂದ ಮಂಡ್ಯ ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದ ಡಾ. ಹೆಚ್.ಎನ್.ಗೋಪಾಲಕೃಷ್ಣ ಅವರನ್ನು ರಾಜ್ಯ ಸರ್ಕಾರ ವರ್ಗಾವಣೆ ಮಾಡಿದ್ದು, ಅವರಿಂದ ತೆರವಾದ ಸ್ಥಾನಕ್ಕೆ ಡಾ. ಕುಮಾರ್ ಅವರನ್ನು ನಿಯೋಜಿಸಲಾಗಿದೆ. ಡಾ.ಕುಮಾರ್ ಈ ಹಿಂದೆ ದಕ್ಷಿಣ ಕನ್ನಡ ಜಿಲ್ಲೆ ಜಿಲ್ಲಾ ಪಂಚಾಯತ್ ಸಿಇಓ ಆಗಿ ಕಾರ್ಯ ನಿರ್ವಹಿಸುತ್ತಿದ್ದರು.

ಕೆ.ಆರ್.ಪೇಟೆ ಪಿಎಲ್‌ಡಿ ಬ್ಯಾಂಕ್‌ಗೆ ಜಯಶೀಲ ಅಧ್ಯಕ್ಷೆ



ಕೆ.ಆರ್.ಪೇಟೆ, ಜೂ.16– ತಾಲೂಕು ಪಿಎಲ್‌ಡಿ ಬ್ಯಾಂಕ್ ನೂತನ ಅಧ್ಯಕ್ಷೆಯಾಗಿ ಜಯಶೀಲರಾಮೇಗೌಡ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಕಾಂತರಾಜೇಗೌಡ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶನಿವಾರ ಚುನಾವಣೆ ನಿಗದಿಯಾಗಿತ್ತು. ಅದರಂತೆ ಜಯಶೀಲ ರಾಮೇಗೌಡ ಹಾಗೂ ಶಂಭುಲಿಂಗೇಗೌಡ ನಾಮಪತ್ರ ಸಲ್ಲಿಸಿದರು. ಬಳಿಕ ನಡೆದ ಚುನಾವಣೆಯಲ್ಲಿ 8 ಮತ ಪಡೆದು ಜಯಶೀಲ ರಾಮೇಗೌಡ ಅಧ್ಯಕ್ಷರಾಗಿ ಆಯ್ಕೆಯಾದರೇ, ಶಂಭುಲಿಂಗೇಗೌಡ 6 ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆ ಅಧಿಕಾರಿ ಆನಂದ್ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷೆ ಜಯಶೀಲ ಮಾತನಾಡಿ, ನನ್ನ ಅಧಿಕಾರವಧಿಯಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಬ್ಯಾಂಕ್ ಅಭಿವೃದ್ಧಿ ಹಾಗೂ ಬ್ಯಾಂಕ್‌ನ ಷೇರುದಾರರ ಪರ ನಿಲ್ಲುತ್ತೇನೆ. ಸಕಾಲಕ್ಕೆ ರೈತರಿಂದ ಸಾಲ ಮರುಪಾವತಿ ಮಾಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ಬ್ಯಾಂಕ್ ಉಪಾಧ್ಯಕ್ಷ ಧನಂಜಯ, ಮಾಜಿ ಅಧ್ಯಕ್ಷ ಪುಟ್ಟಸ್ವಾಮಿಗೌಡ, ಗೋವಿಂದರಾಜು, ಕಾಂತರಾಜು, ನಿರ್ದೇಶಕರಾದ ಏಜಾಜ್ ಪಾಷಾ, ಕಮಲಮ್ಮ, ಚಂದ್ರೇಗೌಡ, ನಾಗರಾಜು, ರಾಮಕೃಷ್ಣ, ರಮೇಶ್, ಸುರೇಶ್, ರಾಮೇಗೌಡ, ಶ್ರೀಧರ್, ಮುದ್ದೇಗೌಡ, ಶಿವಕುಮಾರ್, ಎ.ಎನ್.ಗೋವಿಂದರಾಜು, ರಾಜಾನಾಯಕ್, ಅಂಜನಿ, ರಾಧ, ಬಿ. ಪಿ.ನಾಗೇಶ್ ಇತರರಿದ್ದರು.

ರಂಗ ಶಿಕ್ಷಣ ಡಿಪ್ಲೋಮಾಗೆ ಅರ್ಜಿ ಆಹ್ವಾನ

ಮಂಡ್ಯ, ಜೂ.15– ಕರ್ನಾಟಕ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶ್ರೀಶಿವಕುಮಾರ ರಂಗ ಪ್ರಯೋಗ ಶಾಲೆಯ 2023–24ನೇ ಸಾಲಿನ ರಂಗ ಶಿಕ್ಷಣಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ರಂಗಶಾಲೆ ವೆಬ್‌ಸೈಟ್: www.theatreschoolsanehalli.org ಮೂಲಕ ಜೂ.30ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ: 9448398144, 8861043553 ಸಂಪರ್ಕಿಸಿ.

ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಕೆ.ಸಿ.ಜೋಗಿಗೌಡ ಆಯ್ಕೆ



ಮಂಡ್ಯ, ಜೂ.16– ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಡಿಸಿಸಿ) ಆಡಳಿತ ವಶಪಡಿಸಿಕೊಳ್ಳುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದ್ದು, ನಿರೀಕ್ಷೆಯಂತೆ ಕಾಂಗ್ರೆಸ್ ಬೆಂಬಲಿತ ನಿರ್ದೇಶಕ ಕೆ.ಸಿ. ಜೋಗಿಗೌಡ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ನಾಮ ನಿರ್ದೇಶಿತ ನಿರ್ದೇಶಕರಾಗಿ, ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದ ಸಿ.ಪಿ.ಉಮೇಶ್ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ಚುನಾವಣೆ ನಡೆಯಿತು.

ಕೈಗಾರಿಕೆ ಮತ್ತು ಇತರೆ ಸಹಕಾರ ಸಂಘಗಳ ಪ್ರತಿನಿಧಿಯಾಗಿ ಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿದ್ದ ಕೆ.ಸಿ.ಜೋಗಿಗೌಡ ಅವರನ್ನು ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯೂ ಆದ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ಘೋಷಿಸಿದರು.

ಪ್ರಸ್ತುತ ಕಾಂಗ್ರೆಸ್ ಮೂವರು ನಾಮ ನಿರ್ದೇಶಿತ ಸದಸ್ಯರು ಸೇರಿ 9 ಸ್ಥಾನ ಪಡೆದಿದ್ದು, ಜೆಡಿಎಸ್ 4 ಮಂದಿ ನಿರ್ದೇಶಕರನ್ನು ಹೊಂದಿದೆ. ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಅಮರಾವತಿ ಅಶ್ವತ್ ಹಾಗೂ ಮದ್ದೂರು ತಾಲೂಕಿನ ಸಂದರ್ಶ ಅವರು ಪ್ರಸ್ತುತ ನಿರ್ದೇಶಕರಾಗಿದ್ದಾರೆ. ಆದರೆ ಅವರು ಯಾವ ಪಕ್ಷದ ಬೆಂಬಲಿತರು ಎಂಬುದು ಸ್ಪಷವಾಗಿಲ್ಲ.

2020ರಲ್ಲಿ ನಡೆದ ಪ್ರಥಮ ಅವಧಿ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಬಿಜೆಪಿ ಸರ್ಕಾರದಿಂದ ನಾಮ ನಿರ್ದೇಶನಗೊಂಡಿದ್ದ ಸಿ.ಪಿ.ಉಮೇಶ್ ಜೆಡಿಎಸ್ ನಿರ್ದೇಶಕರು ಹಾಗೂ ನಾಮ ನಿರ್ದೇಶಿತ ಅಧಿಕಾರಿಗಳ ಬೆಂಬಲ ಪಡೆದು ಅಧ್ಯಕ್ಷ ಸ್ಥಾನಕ್ಕೇರಿದ್ದರು. ಅಧ್ಯಕ್ಷರಾಗಿ ಎರಡೂವರೆ ವರ್ಷ ಅಧಿಕಾರ ನಡೆಸಿದ ಸಿ.ಪಿ.ಉಮೇಶ್ ಕಾಂಗ್ರೆಸ್ ಪಕ್ಷಕ್ಕೆ ಚುನಾವಣೆಯಲ್ಲಿ ಬಹುಮತ ದೊರಕಿದ ಹಿನ್ನೆಲೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ರಮೇಶ್‌ಬಾಬುಗೆ ಒಲಿದ ನಾಮ ನಿರ್ದೇಶನ



ಮಂಡ್ಯ: ಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿಗೆ ಸರ್ಕಾರದ ನಾಮ ನಿರ್ದೇಶಕರೊಬ್ಬರನ್ನು ನಾಮಕರಣ ಮಾಡುವ ಅವಕಾಶವಿದ್ದು, ಅದರ ಲಾಭ ಶ್ರೀರಂಗಪಟ್ಟಣ ಶಾಸಕ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ ಅವರಿಗೆ ಒಲಿದು ಬಂದಿದೆ.

ನಿರ್ದೇಶಕ ಸ್ಥಾನಕ್ಕೆ ಹಲವು ಪ್ರಭಾವಿಗಳು ಒತ್ತಡ ತಂದ ಹಿನ್ನೆಲೆಯಲ್ಲಿ ಚುನಾವಣೆಯಲ್ಲಿ ಯಾವುದೇ ಅಪಸ್ವರ ಉಂಟಾಗದಂತೆ ಜಾಣ್ಮೆ ಮೆರೆದ ಜಿಲ್ಲೆಯ ಕಾಂಗ್ರೆಸ್ ಜೋಡೆತ್ತುಗಳಾದ ಎನ್.ಚಲುವರಾಯಸ್ವಾಮಿ ಮತ್ತು ಪಿ.ಎಂ.ನರೇಂದ್ರಸ್ವಾಮಿ ಅವರು ಶಾಸಕ ರಮೇಶ್‌ಬಾಬು ಅವರನ್ನು ತಾತ್ಕಾಲಿಕವಾಗಿ ನಾಮ ನಿರ್ದೇಶನ ಸ್ಥಾನಕ್ಕೆ ಆಯ್ಕೆಗೊಳಿಸಿ ಚುನಾವಣೆ ಪ್ರಕ್ರಿಯೆ ಸುಸೂತ್ರವಾಗಿ ನಡೆಯುವಂತೆ ತಂತ್ರಗಾರಿಕೆ ಎಣೆಯುವಲ್ಲಿ ಯಶಸ್ವಿಯಾಗಿದ್ದಾರೆ.

ನೂತನ ಅಧ್ಯಕ್ಷ ಕೆ.ಸಿ.ಜೋಗೀಗೌಡ ಮಾತನಾಡಿ, ಸಚಿವ ಚಲುವರಾಯಸ್ವಾಮಿ ಹಾಗೂ ಶಾಸಕ ನರೇಂದ್ರಸ್ವಾಮಿ ಮತ್ತು ಜಿಲ್ಲೆಯ ಶಾಸಕರು ಹಾಗೂ ನಿರ್ದೇಶಕರ ಬೆಂಬಲದಿಂದ ಬ್ಯಾಂಕ್ ಅಭಿವೃದ್ಧಿಗೆ ಶ್ರಮಿಸಲಾಗುವುದೆಂದು ತಿಳಿಸಿದರು. ನೂತನ ಅಧ್ಯಕ್ಷರನ್ನು ಚುನಾವಣಾಧಿಕಾರಿ, ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿ ಸದಸ್ಯರು ಅಭಿನಂದಿಸಿದರು.

ನಂದಿನಿ ಪಾರ್ಲರ್ ಬೀಗ ಮುರಿದು ಡೈರಿ ಉತ್ಪನ್ನ, ಸಿಗರೇಟ್, ನಗದು ಕಳವು

ಮೈಸೂರು, ಜೂ. 16– ನಂದಿನಿ ಹಾಲಿನ ಪಾರ್ಲರ್ ಬೀಗ ಮುರಿದು ಡೈರಿ ಉತ್ಪನ್ನಗಳು, ಸಿಗರೇಟ್ ಹಾಗೂ ನಗದು ಕಳವು ಮಾಡಿರುವ ಬಗ್ಗೆ ಮೈಸೂರಿನ ಹೆಬ್ಬಾಳ್‌ನಿಂದ ವರದಿಯಾಗಿದೆ. ಹೆಬ್ಬಾಳ್ ಸಿಐಟಿಬಿ ಛತ್ರ ರಸ್ತೆಯ ಸುಬ್ರಹ್ಮಣ್ಯ ದೇವಸ್ಥಾನದ ಆರ್ಚ್ ಎದುರಿನಲ್ಲಿರುವ ಮೀನಾಕ್ಷಿ(53) ಎಂಬುವರಿಗೆ ಸೇರಿದ ನಂದಿನಿ ಪಾರ್ಲರ್‌ನಲ್ಲಿ ಕಳವು ನಡೆದಿದ್ದು, ಸಿಗರೇಟ್ ವಿತರಕರ ಬಳಿ ಕೆಲಸ ಮಾಡುತ್ತಿರುವ ಇವರ ಅಳಿಯ ರವಿ ತನ್ನ ಬಳಿ ವಿತರಣೆಗಾಗಿ ಇದ್ದ 20,500 ರೂ. ಮೌಲ್ಯದ ಸಿಗರೇಟ್, 15 ಸಾವಿರ ರೂ. ನಗದು ಹಾಗೂ 11 ಸಾವಿರ ರೂ. ಮೌಲ್ಯದ ನಂದಿನಿ ಉತ್ಪನ್ನಗಳನ್ನು ಪಾರ್ಲರ್‌ನಲ್ಲಿ ಇಟ್ಟು, ಪಾರ್ಲರ್‌ಗೆ ಬೀಗ ಹಾಕಿಕೊಂಡು ಹೋಗಿದ್ದರು. ಮರುದಿನ ಬೆಳಗ್ಗೆ 5 ಗಂಟೆಗೆ ಬಂದು ನೋಡಿದಾಗ ಪಾರ್ಲರ್ ಬೀಗ ಮುರಿದು ಕಳವು ಮಾಡಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಹೆಬ್ಬಾಳ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೊಲೀಸ್ ಇಲಾಖೆಯ ಸಿಸಿ ಕ್ಯಾಮರಾಗಳ ಯುಪಿಎಸ್, ಬ್ಯಾಟರಿ ಕಳವು

ಮೈಸೂರು, ಜೂ. 16– ಮೈಸೂರು–ತಿ.ನರಸೀಪುರ ರಸ್ತೆಯಲ್ಲಿ ಪೊಲೀಸ್ ಇಲಾಖೆಯಿಂದ ಅಳವಡಿಸಿದ್ದ ಸಿಸಿ ಕ್ಯಾಮರಾಗಳ ಯುಪಿಎಸ್ ಹಾಗೂ ಬ್ಯಾಟರಿ ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ಮೈಸೂರು–ತಿ.ನರಸೀಪುರ ರಸ್ತೆಯ ದೊಡ್ಡ ಆಲದ ಮರ ಬಳಿ ಮತ್ತು ಶ್ರೀನಿವಾಸನ್ ಐಪಿಎಸ್ ನಗರದ ಬಳಿ ಅಳವಡಿಸಿದ್ದ ಸಿಸಿ ಕ್ಯಾಮರಾಗಳು ಜೂನ್ 12ರಂದು ಕಾರ್ಯನಿರ್ವಹಿಸುತ್ತಿಲ್ಲ ಎಂದು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸಿಸಿ ಕ್ಯಾಮರಾ ದೃಶ್ಯಾವಳಿಗಳ ಪರಿಶೀಲಿಸುತ್ತಿದ್ದ ಸಿಬ್ಬಂದಿಯು ಸಿಸಿ ಕ್ಯಾಮರಾ ನಿರ್ವಹಣೆ ಮಾಡುತ್ತಿರುವ ಟ್ರಿನಿಟಿ ಟೆಕ್ನಾಲಜಿ ಮತ್ತು ಸಾಫ್ಟ್‌ವೇರ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್‌ನ ಸಿಬ್ಬಂದಿ ಕಿರಣ್ ಛಬ್ಬಿ ಅವರಿಗೆ ತಿಳಿಸಿದ್ದಾರೆ. ರಜೆಯಲ್ಲಿದ್ದ ಕಿರಣ್ ಛಬ್ಬಿ ಜೂನ್ 15ರಂದು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದಾಗ ಖದೀಮರು ಜೂನ್ 12ರ ಮುಂಜಾನೆ 2.30ರ ಸುಮಾರಿನಲ್ಲಿ ದೊಡ್ಡ ಆಲದ ಮರದ ಬಳಿ ಮತ್ತು ಶ್ರೀನಿವಾಸನ್ ಐಪಿಎಸ್ ನಗರದ ಬಳಿ ಸಿಸಿ ಕ್ಯಾಮರಾಗೆ ಅಳವಡಿಸಿದ್ದ ಯುಪಿಎಸ್, ಬ್ಯಾಟರಿ, ಮೋಡಮ್ ಹಾಗೂ ಸ್ವಿಚ್‌ಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾರ್ಟ್‌ಟೈಮ್ ಜಾಬ್ ಮೂಲಕ ಹಣ ಗಳಿಸುವ ಆಸೆ ತೋರಿಸಿ ಲಕ್ಷಾಂತರ ರೂ. ವಂಚನೆ

ಮೈಸೂರು, ಜೂ. 16– ಪಾರ್ಟ್ ಟೈಮ್ ಜಾಬ್ ಬಗ್ಗೆ ವಾಟ್ಸಾಪ್ ಮೂಲಕ ಸಂದೇಶ ರವಾನಿಸಿ ಇಂಜಿನಿಯರ್‌ಗೆ 2.49 ಲಕ್ಷ ರೂ. ಆನ್‌ಲೈನ್ ಮೂಲಕ ವಂಚಿಸಲಾಗಿದೆ.



ಮೈಸೂರಿನ ವಿಜಯ ನಗರ 3ನೇ ಹಂತ ದಲ್ಲಿ ವಾಸವಿರುವ ಇಂಜಿನಿಯರ್ ಪಿ. ಸಾಂಗ್ವಿ(27) ಎಂಬುವರ ವಾಟ್ಸಾಪ್‌ಗೆ ಪಾರ್ಟ್ ಟೈಮ್ ಜಾಬ್ ಬಗ್ಗೆ ಸಂದೇಶ ಬಂದಿದೆ. ಸಂದೇಶ ಬಂದ ನಂಬರ್ ಅನ್ನು ಸಂಪರ್ಕಿಸಿದಾಗ ಮಾತನಾಡಿದ ವಂಚಕರು, ಯೂಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಮಾಡಿದರೆ ಪ್ರತಿ ಟಾಸ್ಕ್‌ಗೆ 50 ರೂ. ನೀಡುವುದಾಗಿ ತಿಳಿಸಿದ್ದಲ್ಲದೇ, ಅವರ ಖಾತೆಗೆ 500 ರೂ.ಗಳನ್ನು ವರ್ಗಾವಣೆ ಮಾಡಿದ ನಂತರ ಹಣ ಇನ್ವೆಸ್ಟ್ ಮಾಡುವ ಪ್ರೀ–ಪೇಯ್ಡ್ ಟಾಸ್ಕ್ ಮಾಡಿದರೆ ಹೆಚ್ಚು ಹಣ ಬರುತ್ತದೆ ಎಂದು ನಂಬಿಸಿದ್ದಾರೆ. ಅದನ್ನು ನಂಬಿದ ಸಾಂಗ್ವಿಯುವರು ಹಂತ ಹಂತವಾಗಿ 2,49,600 ರೂ. ವರ್ಗಾವಣೆ ಮಾಡಿ ಮೋಸ ಹೋಗಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ರಾಜೀವ್ ನಗರ 2ನೇ ಹಂತದ ಎಸ್. ಆಂಟನಿ ವಿಲಿಯಂ (45) ಎಂಬುವರಿಗೆ ರೂಪಾಲಿ ಎಂಬ ಹೆಸರಿನಲ್ಲಿ ವಾಟ್ಸಾಪ್ ಮೆಸೇಜ್ ಬಂದಿದ್ದು, ಸಾಂಗ್ವಿಯುವರಿಗೆ ಹೇಳಿದಂತೆಯೇ ಇವರಿಗೂ ಕೂಡ ಹೇಳಲಾಗಿದೆ. ಅದನ್ನು ನಂಬಿದ ಅವರು, ಹಂತ ಹಂತವಾಗಿ 3.78 ಲಕ್ಷ ರೂ. ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ ಪರಸಯ್ಯನ ಹುಂಡಿ ನಿವಾಸಿ ಬಿ.ಆರ್. ಪ್ರದೀಪ್ ಎಂಬುವರಿಗೆ ಟೆಲಿಗ್ರಾಂ ಆಪ್ ಮೂಲಕ ಎಂ.ಟಿ. ಗೋಲ್ಡ್ ಆಪ್‌ನಲ್ಲಿ ಟ್ರೇಡಿಂಗ್ ಕಾಲ್ ಕೊಟ್ಟು ಇನ್ವೆಸ್ಟ್ ಮಾಡಿದರೆ ಹೆಚ್ಚು ಲಾಭ ಬರಲಿದೆ ಎಂದು ನಂಬಿಸಿ 22.96 ಲಕ್ಷರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಮೂರು ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಪ್ರತ್ಯೇಕ ಅಪಘಾತ ಪ್ರಕರಣ

ದ್ವಿಚಕ್ರ ವಾಹನಗಳಿಗೆ ಡಿಕ್ಕಿ: ಇಬ್ಬರ ಸಾವು

ಮಂಡ್ಯ, ಜೂ. 16– ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ದ್ವಿಚಕ್ರ ವಾಹನ ಸವಾರರು ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ.



ಮದ್ದೂರು ತಾಲೂಕು ಮಾರಗೌಡನ ಹಳ್ಳಿಯ ದನದ ವ್ಯಾಪಾರಿಯೂ ಆದ ರೈತ ಎಂ.ಡಿ. ಪ್ರಜ್ವಲ್(21) ಜೂನ್ 14ರಂದು ಟಿವಿಎಸ್ ಎಕ್ಸೆಲ್ ಮೊಪೆಡ್ (ಕೆಎ 11–ಇಕೆ 2365)ನಲ್ಲಿ ತೊರೆಶೆಟ್ಟಿ ಹಳ್ಳಿ ಗ್ರಾಮಕ್ಕೆ ಹೋಗಿ ದನಗಳನ್ನು ನೋಡಿಕೊಂಡು ಹಿಂತಿರುಗುತ್ತಿದ್ದಾಗ ರಾತ್ರಿ 7.30ರ ಸುಮಾರಿನಲ್ಲಿ ತುಮಕೂರು–ಮದ್ದೂರು ಮುಖ್ಯ ರಸ್ತೆಯ ಯರಗನಹಳ್ಳಿ ಗ್ರಾಮದ ಬಳಿ ಇರುವ ಎಟಿಬಿ ಡಾಬಾ ಹತ್ತಿರ ಹಿಂಬದಿಯಿಂದ ಬಂದ ಹುಂಡೈ ಐ–10 ಕಾರು (ಕೆಎ 05–ಎಂಹೆಚ್ 2326) ಡಿಕ್ಕಿ ಹೊಡೆದಿದೆ. ಅಪಘಾತದ ನಂತರ ಕಾರಿನ ಚಾಲಕ ಕಾರನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದು, ತೀವ್ರವಾಗಿ ಗಾಯಗೊಂಡಿದ್ದ ಪ್ರಜ್ವಲ್‌ಗೆ ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಲಾಯಿತು. ಮಂಡ್ಯ ಜಿಲ್ಲಾಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾನೆ. ಈ ಸಂಬಂಧ ಕೆಸ್ತೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಪಾಂಡವಪುರ ತಾಲೂಕು ಲಕ್ಷ್ಮೀಸಾಗರ ಗ್ರಾಮದ ವಕೀಲ ಎಲ್.ಸಿ. ಪ್ರಕಾಶ್(48) ಅವರು ಬೈಕ್ (ಕೆಎ 11–ಇಆರ್ 3729)ನಲ್ಲಿ ಶ್ರೀರಂಗಪಟ್ಟಣ ತಾಲೂಕು ಬಾಬುರಾಯನ ಕೊಪ್ಪಲು ಗ್ರಾಮದ ಕಡೆಯಿಂದ ಕೂಡಲಕುಪ್ಪೆ ಗ್ರಾಮದ ಕಡೆಗೆ ಜೂನ್ 15ರಂದು ಬೆಳಗ್ಗೆ 10.50ರ ಸುಮಾರಿನಲ್ಲಿ ತೆರಳುತ್ತಿದ್ದಾಗ ಕಿರಂಗೂರು ಗ್ರಾಮದ ಶ್ರೀರಾಮ ಮಂದಿರ ಮುಂಭಾಗ ಇವರ ಹಿಂಬದಿಯಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ (ಕೆಎ 14–ಎಫ್ 0048) ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಇವರು, ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಖಾಸಗಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಈ ಸಂಬಂಧ ಶ್ರೀರಂಗಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಸ್ತಿ ಕಬಳಿಸಲು ಸಂಚು: ಜೀವಂತ ವ್ಯಕ್ತಿಗೆ ಡೆತ್ ಸರ್ಟಿಫಿಕೇಟ್

ಮೈಸೂರು, ಜೂ.16(ಬಿಎಲ್‌ಯು)– ನಮ್ಮ ಕೆಲವು ಅಧಿಕಾರಿಗಳಿಗೆ ದುಡ್ಡು ಕೊಟ್ಟರೆ ಏನು ಬೇಕಾದರೂ ಮಾಡುತ್ತಾರೆ. ಸತ್ತ ವ್ಯಕ್ತಿಯನ್ನು ಬದುಕಿಸುತ್ತಾರೆ, ಜೀವಂತ ವ್ಯಕ್ತಿಯನ್ನು ಸಾಯಿಸುತ್ತಾರೆ. ಆಸ್ತಿ ಕಬಳಿಸಲು ಅನುಕೂಲವಾಗುವಂತೆ ಕಂದಾಯ ಇಲಾಖೆಯ ಅಧಿಕಾರಿಗಳು ಜೀವಂತವಾಗಿರುವ ವ್ಯಕ್ತಿಗೆ ಡೆತ್ ಸರ್ಟಿಫಿಕೇಟ್ ಕೊಟ್ಟಿರುವ ಪ್ರಕರಣ ಇದಕ್ಕೆ ಸಾಕ್ಷಿಯಾಗಿದೆ.


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿನಿಧಿಸುವ ವರುಣ ಕ್ಷೇತ್ರದಲ್ಲಿ ಈ ಪ್ರಕರಣ ನಡೆದಿದೆ. ಜೀವಂತವಿರುವ ವ್ಯಕ್ತಿಗೆ ಡೆತ್ ಸರ್ಟಿಫಿಕೇಟ್ ಕೊಟ್ಟ ಕಂದಾಯ ಇಲಾಖೆಯ ಅಧಿಕಾರಿಗಳ ನಡೆ ಕುತೂಹಲ ಮೂಡಿಸಿದೆ.

ಮೈಸೂರಿನ ನಂಜನಗೂಡು ತಾಲೂಕು ಗೀಕಳ್ಳಿ ಗ್ರಾಮದ ಬಸಮ್ಮ ಎಂಬಾಕೆ ಒಂದು ಎಕರೆ ಜಮೀನಿನ ಮಾಲೀಕರಾಗಿದ್ದಾರೆ. ಈ ಆಸ್ತಿ ಕಬಳಿಸಲು ಅದೇ ಗ್ರಾಮದ ಶಿವಮ್ಮ, ರತ್ನಮ್ಮ ಎಂಬವರು ಸ್ಕೆಚ್ ಹಾಕಿದ್ದಾರೆ. ಇವರು ಬಸಮ್ಮನ ಮರಣ ಸಮರ್ಥನಾ ಪತ್ರ ಅಂದರೆ ಡೆತ್‌ನೋಟ್ ಮಾಡಿಸಿ ತಮ್ಮ ಹೆಸರಿಗೆ ನನ್ನ ಒಂದು ಎಕರೆ ಜಮೀನನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ಬಸಮ್ಮ ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ಮೇ 24ರಂದು ದೂರು ಸಲ್ಲಿಸಿದ್ದಾರೆ. ಈ ಸಂಬಂಧ ಎಫ್‌ಐಆರ್ ಕೂಡ ದಾಖಲಾಗಿದೆ.

ಈ ಜಮೀನು ಲಪಟಾಯಿಸಲು ಗ್ರಾಮ ಲೆಕ್ಕಿಗರಾದ ಮಂಜುನಾಥ್, ರಾಜಸ್ವ ನಿರೀಕ್ಷಕರಾದ ಪ್ರಕಾಶ್ ಅವರು ಆರೋಪಿಗಳಿಗೆ ಸಹಾಯ ಮಾಡಿದ್ದಾರೆ. ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಬದುಕಿರುವಾಗಲೇ ನಾನು ಸತ್ತಿದ್ದೇನೆ ಎಂದು ಡೆತ್‌ನೋಟ್ ಕೊಟ್ಟಿರುವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಸಮ್ಮ ದೂರಿನಲ್ಲಿ ಮನವಿ ಮಾಡಿದ್ದಾರೆ.

ಆರ್‌ಟಿಇ ಅಡಿ ಪ್ರತಿಷ್ಠಿತ ಖಾಸಗಿ ಶಾಲೆಗಳಿಗೆ ಮಕ್ಕಳ ಸೇರಿಸುವ ಪೋಷಕರ ಕ್ರೇಜ್ ಇಳಿಮುಖ!

ಕಾಯ್ದಿಟ್ಟ ಸೀಟುಗಳು ಇನ್ನೂ ಖಾಲಿ ಬಿದ್ದಿವೆ



ಮೈಸೂರು, ಜೂ.16(ಎಸ್‌ಬಿಡಿ)– ಶಿಕ್ಷಣ ಹಕ್ಕು ಕಾಯ್ದೆ(ಆರ್‌ಟಿಇ) ಅಡಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ತಮ್ಮ ಮಕ್ಕಳನ್ನು ದಾಖಲಿಸಲು ಬಯಸುವವರ ಸಂಖ್ಯೆ ಕ್ಷೀಣಿಸಿದೆ.

ಮಕ್ಕಳ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹಕ್ಕು(ಆರ್‌ಟಿಇ) ಕಾಯ್ದೆಯಡಿ ಮೈಸೂರು ಜಿಲ್ಲೆಗೆ ಪ್ರಸ್ತುತ ಶೈಕ್ಷಣಿಕ ವರ್ಷ(2023–24)ದಲ್ಲಿ 815 ಸೀಟು ಮಂಜೂರಾಗಿದ್ದು, ಈವರೆಗೆ ಅರ್ಧದಷ್ಟೂ ಭರ್ತಿಯಾಗಿಲ್ಲ. ಆರ್‌ಟಿಇ ಅಡಿಯಲ್ಲಿ ಖಾಸಗಿ ಶಾಲೆಗಳಲ್ಲಿ ಸೀಟು ಪಡೆಯಲು ಭಾರೀ ಕಸರತ್ತು ನಡೆಸುತ್ತಿದ್ದ ಕಾಲ ಬದಲಾಗಿದೆ. ಈಗ ಪೋಷಕರ ನಿರಾಸಕ್ತಿಯಿಂದ ಮೊದಲ ಸುತ್ತಿನಲ್ಲೇ ಸೀಟುಗಳು ಖಾಲಿ ಉಳಿದಿವೆ. ಇನ್ನು ಎರಡು ಮತ್ತು ಮೂರನೇ ಸುತ್ತಿನ ಹಂಚಿಕೆ ಪ್ರಕ್ರಿಯೆ ನೆಪಮಾತ್ರಕಷ್ಟೇ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಕ್ಷೇತ್ರವಾರು ವಿವರ: ಮೈಸೂರು ಉತ್ತರ ಕ್ಷೇತ್ರಕ್ಕೆ 406, ದಕ್ಷಿಣಕ್ಕೆ 182, ಹೆಚ್.ಡಿ.ಕೋಟೆಗೆ 55, ಕೆ.ಆರ್.ನಗರಕ್ಕೆ 43, ಮೈಸೂರು ಗ್ರಾಮಾಂತರಕ್ಕೆ 33, ನಂಜನಗೂಡಿಗೆ 30, ತಿ.ನರಸೀಪುರಕ್ಕೆ 25, ಹುಣಸೂರಿಗೆ 23 ಹಾಗೂ ಪಿರಿಯಾಪಟ್ಟಣಕ್ಕೆ 18 ಸೇರಿ ಜಿಲ್ಲೆಗೆ ಒಟ್ಟು 815 ಆರ್‌ಟಿಇ ಸೀಟುಗಳು ಮಂಜೂರಾಗಿದ್ದು, ಮೊದಲ ಸುತ್ತಿನಲ್ಲಿ ಹಂಚಿಕೆಯಾಗಿದ್ದ 463ರಲ್ಲಿ ಕೇವಲ 342 ಸೀಟುಗಳು ಭರ್ತಿಯಾಗಿವೆ.

ಮೂರರಲ್ಲಿ ಶೂನ್ಯ: ಪಿರಿಯಾಪಟ್ಟಣ, ತಿ.ನರಸೀಪುರ ಹಾಗೂ ನಂಜನಗೂಡು ಶೈಕ್ಷಣಿಕ ಕ್ಷೇತ್ರದಲ್ಲಿ ಮೊದಲ ಸುತ್ತಿನಲ್ಲಿ ಯಾರೊಬ್ಬರೂ ಆರ್‌ಟಿಇ ಅಡಿಯಲ್ಲಿ ಪ್ರವೇಶಾತಿ ಪಡೆದಿಲ್ಲ. ಮೈಸೂರು ಉತ್ತರದಲ್ಲಿ ಅತೀ ಹೆಚ್ಚು 246 ಮಕ್ಕಳು ಆರ್‌ಟಿಇ ಪ್ರಯೋಜನ ಪಡೆದು ಕೊಂಡಿದ್ದಾರೆ. ಮೈಸೂರು ದಕ್ಷಿಣದಲ್ಲಿ 83, ಹೆಚ್.ಡಿ.ಕೋಟೆ ಹಾಗೂ ಹುಣಸೂರಿನಲ್ಲಿ ತಲಾ 5, ಕೆ.ಆರ್.ನಗರದಲ್ಲಿ 2 ಮತ್ತು ಮೈಸೂರು ಗ್ರಾಮಾಂತರದಲ್ಲಿ ಒಂದು ಮಗು ಮಾತ್ರ ಆರ್‌ಟಿಇ ಪ್ರವೇಶಾತಿ ಪಡೆದಿದೆ. ಎರಡನೇ ಸುತ್ತಿನ ಪ್ರಕ್ರಿಯೆ ನಡೆದಿದ್ದು, ಎಷ್ಟು ಮಕ್ಕಳು ದಾಖಲಾಗಿದ್ದಾರೆನ್ನುವುದು ಮೂರ್‍ನಾಲ್ಕು ದಿನಗಳಲ್ಲಿ ತಿಳಿಯಲಿದೆ. ಆದರೆ ಮೊದಲ ಸುತ್ತಿನಲ್ಲೇ ಸೀಟುಗಳು ಭರ್ತಿಯಾಗಿಲ್ಲ ಹಾಗೂ ಈಗಾಗಲೇ ಶಾಲಾ ತರಗತಿಗಳು ಆರಂಭವಾಗಿರುವ ಹಿನ್ನೆಲೆಯಲ್ಲಿ ಎರಡು ಮತ್ತು ಮೂರನೇ ಸುತ್ತಿನಲ್ಲಿ ಹೆಚ್ಚು ಸಂಖ್ಯೆಯ ದಾಖಲಾತಿ ನಿರೀಕ್ಷಿಸಲಾಗದು.

ಸಮರ್ಪಕ ಮಾಹಿತಿ ಕೊರತೆ: ಆರ್‌ಟಿಇ ಬಗ್ಗೆ ಹಲವು ಪೋಷಕರಿಗೆ ಮಾಹಿತಿ ಇಲ್ಲ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಬಹುತೇಕರಿಗೆ ಆರ್‌ಟಿಇ ಪ್ರಕ್ರಿಯೆ ಬಗ್ಗೆ ತಿಳಿದಿಲ್ಲ. ಆನ್‌ಲೈನ್ ಹಾಗೂ ಆಫ್‌ಲೈನ್ ಅರ್ಜಿ ಸಲ್ಲಿಕೆಗೆ ಅವಕಾಶ ನೀಡುತ್ತಾರಾದರೂ ಪ್ರಕ್ರಿಯೆಯ ವೇಳಾಪಟ್ಟಿ ಬಗ್ಗೆ ಸಮರ್ಪಕ ಮಾಹಿತಿ ಇರುವುದಿಲ್ಲ. ಯಾವ ಸಮಯದಲ್ಲಿ ಅರ್ಜಿ ಹಾಕಬೇಕು, ಅದಕ್ಕೆ ಬೇಕಾದ ದಾಖಲೆಗಳೇನು, ನಿಗದಿಪಡಿಸಿರುವ ವಯಸ್ಸಿನ ಮಿತಿ ಎಷ್ಟು, ಹೀಗೆ ಅಗತ್ಯ ವಿಚಾರಗಳು ಸಕಾಲದಲ್ಲಿ ಲಭ್ಯವಾಗುವುದಿಲ್ಲ ಎನ್ನುವುದು ಹಲವರ ಆರೋಪ. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಕೂಲವಾಗುವಂತಿರುವ ನಿಯಮಗಳ ಬದಲಾವಣೆ ಮಾಡಬೇಕು. ನಿಗದಿಪಡಿಸಿರುವ ಸೀಟುಗಳು ಅರ್ಹ ಪೋಷಕರ ಮಕ್ಕಳಿಗೆ ಲಭ್ಯವಾಗುವಂತೆ ನಿಯಮಾವಳಿಗಳನ್ನು ಸರಳಗೊಳಿಸಬೇಕು ಎನ್ನುವುದು ಎಲ್ಲರ ಬೇಡಿಕೆಯಾಗಿದೆ.

ಆರ್‌ಟಿಇ ಸೌಲಭ್ಯಕ್ಕೆ ಕಠಿಣ ನಿಯಮಗಳು

ಆರ್‌ಟಿಇ ಸೀಟುಗಳ ಬೇಡಿಕೆ ಕುಸಿಯಲು ಕಾಯ್ದೆಯಲ್ಲಿನ ನಿಯಮಾವಳಿ ಬದಲಾವಣೆಯೇ ಪ್ರಮುಖ ಕಾರಣ ಎನ್ನಲಾಗುತ್ತಿದೆ. ಮಗುವಿನ ವಾಸಸ್ಥಳದ 1 ಕಿ.ಮೀ. ವ್ಯಾಪ್ತಿಯಲ್ಲಿ ಸರ್ಕಾರಿ ಶಾಲೆಗಳಿದ್ದರೆ ಅಂತಹವರು ಆರ್‌ಟಿಇ ಅಡಿಯಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿಲ್ಲ. ಈ ಒಂದು ನಿಯಮದಿಂದಲೇ ಜಿಲ್ಲೆಯ ಶೇ.50ರಷ್ಟು ಖಾಸಗಿ ಶಾಲೆಗಳು ಆರ್‌ಟಿಇ ಕೋಟಾದಿಂದ ಹೊರಗುಳಿದಿವೆ. ಅಲ್ಲದೆ ಆರ್‌ಟಿಇ ಪ್ರವೇಶಕ್ಕೆ ಆಧಾರ್, ಬಿಪಿಎಲ್ ಕಾರ್ಡ್ ಕಡ್ಡಾಯಗೊಳಿಸಿರುವುದಲ್ಲದೆ ಈ ದಾಖಲೆಗಳನ್ನು ಲಿಂಕ್ ಮಾಡಬೇಕಾಗಿರುವ ಕಾರಣ ಪೋಷಕರು ನಿರುತ್ಸಾಹ ತೋರುತ್ತಿದ್ದಾರೆ. ಹರಸಾಹಸಪಟ್ಟು ಅರ್ಜಿ ಹಾಕಿದರೂ ಕ್ಲಿಷ್ಟ ನಿಬಂಧನೆಗಳಿಂದ ಸೌಲಭ್ಯ ದೊರಕುವುದು ಅನುಮಾನ ಎಂದು ದೂರ ಸರಿದಿದ್ದಾರೆ. ಪರಿಣಾಮ ಅರ್ಧದಷ್ಟು ಆರ್‌ಟಿಇ ಸೀಟುಗಳು ಭರ್ತಿಯಾಗುತ್ತಿಲ್ಲ.

2009–10ನೇ ಸಾಲಿನಿಂದ 1ರಿಂದ 8ನೇ ತರಗತಿವರೆಗೆ ಸರಕಾರವು ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಿಗೆ ಆರ್‌ಟಿಇ ಅಡಿ ಒಟ್ಟು ಸಾಮರ್ಥ್ಯದ ಶೇ.25ರಷ್ಟು ಸೀಟುಗಳನ್ನು ಮೀಸಲಿಡಲಾಗುತ್ತಿದೆ. ಆರ್‌ಟಿಇ ಅಡಿಯಲ್ಲಿ ದಾಖಲಾಗುವ ಮಕ್ಕಳ ಶುಲ್ಕವನ್ನು ಸರ್ಕಾರವೇ ಆಯಾ ಶಿಕ್ಷಣ ಸಂಸ್ಥೆಗಳಿಗೆ ಭರಿಸುವ ವ್ಯವಸ್ಥೆ ಇದೆ. ಆದರೆ ಹಲವು ಕಾರಣಗಳಿಂದ ಪೋಷಕರು ನಿರಾಸಕ್ತಿ ಹೊಂದಿರುವುದರಿಂದ ಆರ್‌ಟಿಇ ಸೀಟುಗಳಲ್ಲಿ ಶೇ.50ರಷ್ಟೂ ಭರ್ತಿಯಾಗುತ್ತಿಲ್ಲ. ಕಳೆದ 2022–23ನೇ ಸಾಲಿನಲ್ಲಿ 928 ಸೀಟುಗಳು ಮಂಜೂರಾಗಿದ್ದವು, ಅಂತಿಮವಾಗಿ 382 ಮಕ್ಕಳು ಮಾತ್ರ ಪ್ರವೇಶಾತಿ ಪಡೆದಿದ್ದು ಇಲ್ಲಿ ಸ್ಮರಿಸಬಹುದು.

ಮೈಸೂರು ಮೆಡಿಕಲ್ ಕಾಲೇಜು ಅಧೀನದ 5 ಆಸ್ಪತ್ರೆಗಳಿಗೆ 230 ನರ್ಸ್‌ಗಳ ನೇಮಕ

ನೇರ ಸಂದರ್ಶನದ ಮೂಲಕ ಸಹಾಯಕ ಪ್ರಾಧ್ಯಾಪಕರ ನೇಮಿಸಲು ಸಿದ್ಧತೆ



ಮೈಸೂರು, ಜೂ.16(ಆರ್‌ಕೆ)–ಕೆ.ಆರ್. ಆಸ್ಪತ್ರೆ ಸೇರಿದಂತೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC&RI) ಅಧೀನದಲ್ಲಿರುವ ಐದು ಆಸ್ಪತ್ರೆಗಳಲ್ಲಿ ಖಾಲಿ ಇದ್ದ 230 ಸ್ಟಾಫ್ ನರ್ಸ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ.

ಕೆ.ಆರ್.ಆಸ್ಪತ್ರೆಗೆ 100, ಚೆಲುವಾಂಬಗೆ 20, ಪಿಕೆಟಿಬಿ ಆಸ್ಪತ್ರೆಗೆ 10, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ 50 ಹಾಗೂ ಟ್ರಾಮಾ ಕೇರ್ ಸೆಂಟರ್‌ಗೆ 50 ಮಂದಿ ನರ್ಸ್‌ಗಳನ್ನು ಕರ್ತವ್ಯಕ್ಕೆ ನಿಯೋಜನೆ ಮಾಡಲಾಗಿದೆ. ನಿವೃತ್ತಿ ಹಾಗೂ ಇನ್ನಿತರ ಕಾರಣಗಳಿಂದ ಖಾಲಿಯಾಗಿದ್ದ ನರ್ಸ್‌ಗಳ ಹುದ್ದೆಗಳನ್ನು ಭರ್ತಿ ಮಾಡಿರಲಿಲ್ಲ. ಪರಿಣಾಮ ಈ ಐದೂ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ನರ್ಸಿಂಗ್ ಸೇವೆ ಒದಗಿಸುವುದು ಕಷ್ಟವಾಗುತ್ತಿತ್ತು. ಸರ್ಕಾರದಿಂದ ಅನುಮತಿ ಪಡೆದು ತಾತ್ಕಾಲಿಕ ನಿಯೋಜನೆ ಮೇಲೆ ನೇಮಕ ಮಾಡಿಕೊಂಡಿರುವುದರಿಂದ ಈಗ ಯಾವುದೇ ತೊಂದರೆ ಇಲ್ಲದೇ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಮತ್ತು ಡೈರೆಕ್ಟರ್ ಡಾ. ಕೆ.ಎಸ್.ದಾಕ್ಷಾಯಿಣಿ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರಿನ ಕೆಆರ್‌ಎಸ್ ರಸ್ತೆಯ ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿರುವ ರಾಜಕುಮಾರಿ ಕೃಷ್ಣಾಜಮ್ಮಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಟ್ರಾಮಾ ಕೇರ್ ಸೆಂಟರ್‌ಗೆ ಅಗತ್ಯವಿರುವ ಸಹಾಯಕ ಪ್ರಾಧ್ಯಾಪಕರನ್ನು ನೇಮಕ ಮಾಡಲು ಸಿದ್ಧತೆ ನಡೆಸಲಾಗುತ್ತಿದೆ. ಸರ್ಕಾರದ ನೇಮಕಾತಿ ನಿಯಮಗಳು, ರೋಸ್ಟರ್ ಪದ್ಧತಿಯಂತೆ ವೈದ್ಯರನ್ನು ನೇಮಿಸಿಕೊಳ್ಳಲು ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಕಾಲೇಜು ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಅನುಮೋದನೆ ಪಡೆದುಕೊಂಡು ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಇಲಾಖೆ ಹಿರಿಯ ಅಧಿಕಾರಿಗಳ ಅನುಮತಿಯೊಂದಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಅವರು ತಿಳಿಸಿದರು.

ಈಗ ಸದ್ಯಕ್ಕೆ ಕೆ.ಆರ್.ಆಸ್ಪತ್ರೆ ಸೂಪರ್ ಸ್ಪೆಷಾಲಿಟಿ ಸೇವೆಯಲ್ಲಿರುವ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರನ್ನೇ ರಾಜಕುಮಾರಿ ಕೃಷ್ಣಾಜಮ್ಮಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಟ್ರಾಮಾ ಕೇರ್ ಸೆಂಟರ್‌ಗೆ ನಿಯೋಜಿಸಲಾಗಿದ್ದು, ಅವರು ರೋಗಿಗಳಿಗೆ ಚಿಕಿತ್ಸಾ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಡಾ. ದಾಕ್ಷಾಯಿಣಿ ಅವರು ತಿಳಿಸಿದ್ದಾರೆ.

ಸಂಸ್ಥೆಯ ಆಂತರಿಕ ಸಂಪನ್ಮೂಲದಿಂದಲೇ ನರ್ಸ್‌ಗಳಿಗೆ ಸಂಬಳ ನೀಡುತ್ತೇವೆ. ಉಳಿದ ಹುದ್ದೆಗಳನ್ನು ಸರ್ಕಾರ ಭರ್ತಿ ಮಾಡಲಿ. ಈವರೆಗೆ ಕೆ.ಆರ್., ಚೆಲುವಾಂಬ, ಪಿಕೆಟಿಬಿ, ಸೂಪರ್ ಸ್ಪೆಷಾಲಿಟಿ ಮತ್ತು ಟ್ರಾಮಾ ಕೇರ್ ಸೆಂಟರ್‌ಗಳಲ್ಲಿ ನರ್ಸ್‌ಗಳಿಲ್ಲದೇ ತೀವ್ರ ತೊಂದರೆಯಾಗುತ್ತಿತ್ತು. ದಿನದ 3 ಪಾಳಿಯಲ್ಲೂ ಸೇವೆಗೆ ನಿಯೋಜಿಸಲು ನರ್ಸ್‌ಗಳೇ ಸಿಗುತ್ತಿರಲಿಲ್ಲ ಎಂದು ಅವರು ತಿಳಿಸಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋನಾ ಸಂಸ್ಥೆ ಅಧೀನಕ್ಕೆ ಬರುವ ಪಿಕೆಟಿಬಿ ಆಸ್ಪತ್ರೆ ಆವರಣದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಟ್ರಾಮಾ ಕೇರ್ ಸೆಂಟರ್‌ನಲ್ಲಿ ಕೋವಿಡ್ ಸಂದರ್ಭ ಕೆ.ಆರ್., ಚೆಲುವಾಂಬ, ಆಸ್ಪತ್ರೆಗಳಿಂದಲೇ ವೈದ್ಯರನ್ನು ನಿಯೋಜಿಸಿ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಕೋವಿಡ್ ನಿರ್ಮೂಲನೆ ನಂತರವೂ ಆ ಎರಡೂ ಆಸ್ಪತ್ರೆಗಳಲ್ಲಿ ಹೊರ ರೋಗಿ ವಿಭಾಗ ಮತ್ತು ಒಳ ರೋಗಿಗಳಿಗೆ ನಮ್ಮ ವೈದ್ಯರೇ ಚಿಕಿತ್ಸೆ ನೀಡುತ್ತಿದ್ದಾರೆ ಎಂದೂ ಡಾ. ದಾಕ್ಷಾಯಿಣಿ ಅವರು ತಿಳಿಸಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ನೂತನ ನಿರ್ದೇಶಕರಾದ ಡಾ. ಸಿ.ವೆಂಕಟೇಶ್ ಅವರನ್ನು ಸ್ಪೋರ್ಟ್ಸ್ ಪೆವಿಲಿಯನ್ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ದೀಪು, ಮಂಜೇಶ್, ಅಶೋಕ, ವಿಷ್ಣು ಕಿರಣ್, ರವಿ ಇನ್ನಿತರು ಉಪಸ್ಥಿತರಿದ್ದರು.

ಅರ್ಹ ಫಲಾನುಭವಿಗಳಿಗೆ ಮನೆ ನೀಡಲು ಸಜ್ಜಾಗಿ

ಅಧಿಕಾರಿಗಳಿಗೆ ಶಾಸಕ ಶ್ರೀವತ್ಸ ಸೂಚನೆ



ಮೈಸೂರು, ಜೂ.16(ಆರ್‌ಕೆ)–ಕೆಆರ್.ಕ್ಷೇತ್ರದ ಅರ್ಹ ಫಲಾನುಭವಿಗಳಿಗೆ ಆಶ್ರಯ ಮನೆ ನೀಡಲು ಸಿದ್ಧತೆ ಮಾಡಿಕೊಳ್ಳಿ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕೆ.ಆರ್. ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈವರೆಗೆ ರಾಜೀವ್ ಗಾಂಧಿ ವಸತಿ ಯೋಜನೆ, ಕೊಳಚೆ ಅಭಿವೃದ್ಧಿ ಮಂಡಳಿಯಿಂದ ನಿರ್ಮಿಸಿರುವ ಮನೆಗಳು, ನರ್ಮ್ ಯೋಜನೆಯಡಿ ನಿರ್ಮಿಸಿ ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ, ಆ ಪೈಕಿ ಈಗಾಗಲೇ ವಾಸಿಸುತ್ತಿರುವ ಫಲಾನುಭವಿಗಳು, ಖಾಲಿ ಇರುವ ಮನೆಗಳ ಸಂಖ್ಯೆ ಇತ್ಯಾದಿ ಮಾಹಿತಿ ಪಡೆದುಕೊಂಡರು.

ಕ್ಷೇತ್ರ ವ್ಯಾಪ್ತಿಯಲ್ಲಿ ಮನೆ ಇಲ್ಲದೆ ಬಾಡಿಗೆ ಮನೆಯಲ್ಲಿ, ಗುಡಿಸಲುಗಳಲ್ಲಿ ವಾಸಿಸುತ್ತಿರುವ ಬಡ ನಿರಾಶ್ರಿತರನ್ನು ಗುರ್ತಿಸಿ ಪಟ್ಟಿ ಮಾಡಬೇಕು. ಫಲಾನುಭವಿಗಳ ಆಯ್ಕೆ ಮಾನದಂಡಗಳನ್ನು ಸಿದ್ಧಪಡಿಸಿಕೊಂಡು ಲಭ್ಯವಿರುವ ಖಾಲಿ ಮನೆಗಳ ಮಾಹಿತಿಯೊಂದಿಗೆ ಹಾಗೂ ಸರ್ವರಿಗೂ ಸೂರು ಒದಗಿಸಲು ಬೇಕಾದ ಭೂಮಿಯ ವಿವರಗಳೊಂದಿಗೆ ಸೋಮವಾರ(ಜೂ.19)ದಂದು ಮತ್ತೊಂದು ಸಭೆಗೆ ಹಾಜರಾಗುವಂತೆ ಶ್ರೀವತ್ಸ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಯಿಂದ ನಿರ್ಮಿಸಿರುವ ಆಶ್ರಯ, ಜೆಎನ್–ನರ್ಮ್ ಯೋಜನೆ ಮನೆಗಳ ನಿರ್ವಹಣೆ, ಸ್ಥಿತಿ–ಗತಿ, ಅನಧಿಕೃತ ವ್ಯಕ್ತಿಗಳು ಸ್ವಾಧೀನಾನುಭವದಲ್ಲಿರುವವರನ್ನು ತೆರವುಗೊಳಿಸಿ ಅರ್ಹ ಫಲಾನುಭವಿಗಳಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಅನುಸರಿಸಬೇಕಾದ ಕ್ರಮದ ಬಗ್ಗೆಯೂ ಮಾರ್ಗಸೂಚಿಗಳನ್ನು ತಿಳಿದುಕೊಂಡು ಮುಂದಿನ ಸಭೆಗೆ ತಿಳಿಸುವಂತೆಯೂ ಅವರು ಸೂಚಿಸಿದರು.

ಮೇಯರ್ ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಂಸದ ಪ್ರತಾಪ್ ಸಿಂಹ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಉಪ ಆಯುಕ್ತೆ (ಅಭಿವೃದ್ಧಿ) ರೂಪಾ, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ ಕಾರ್ಯ ನಿರ್ವಾಹಕ ಇಂಜಿನಿಯರ್ ಹರೀಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಚಾಮರಾಜ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್‌ಗೌಡ ಅವರನ್ನು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ವತಿಯಿಂದ ಅದ್ದೂರಿಯಾಗಿ ಅಭಿನಂದಿಸಲಾಯಿತು. ಚಿತ್ರದಲ್ಲಿ ಸಂಘದ ಅಧ್ಯಕ್ಷ ಮರಿಸ್ವಾಮಿ, ಪ್ರಧಾನ ಕಾರ್ಯದರ್ಶಿ ಚೇತನ್, ಖಜಾಂಚಿ ಲೋಕೇಶ್, ನಿರ್ದೇಶಕರಾದ ಮಂಜೇಗೌಡ, ರವಿ, ಗೋಪಾಲ್, ಕುಮಾರ್‌ಗೌಡ, ಬೋರೇಗೌಡ, ಪ್ರಕಾಶ್, ಸುಶೀಲ್ ನಂಜಪ್ಪ ಹಾಗೂ ಒಂಟಿಕೊಪ್ಪಲು ಗುರುರಾಜ್ ಅವರನ್ನು ಕಾಣಬಹುದು

ಪತ್ರಕರ್ತರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ, ಯಶಸ್ವಿನಿ ಕಾರ್ಡ್ ವಿತರಣೆ



ಮಾನ್ಯತೆ ಹೊಂದಿರುವ ಪತ್ರಕರ್ತರಿಗೆ ಮಾತ್ರ ಉಚಿತವಾಗಿ ಬಸ್‌ನಲ್ಲಿ ಪ್ರಯಾಣಿಸುವ ಅಕಾಶವಿದೆ. ಎಲ್ಲಾ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡುವ ವಿಚಾರವಾಗಿ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸುತ್ತೇನೆ
-ಡಿ.ರವಿಶಂಕರ್, ಶಾಸಕ

ಪತ್ರಕರ್ತರು ಹಾಗೂ ಜನಪ್ರತಿನಿಧಿಗಳು ತಮ್ಮ ಕೆಲಸದ ಒತ್ತಡದ ನಡುವೆ ಆರೋಗ್ಯದ ಬಗ್ಗೆ ಗಮನಹರಿಸುವುದಿಲ್ಲ ಇದರಿಂದ ಅನೇಕ ಅನಾರೋಗ್ಯಗಳು ಉಂಟಾಗುತ್ತಿವೆ. ಆರೋಗ್ಯದ ಬಗ್ಗೆ ಎಲ್ಲರೂ ಎಚ್ಚರಿಕೆ ವಹಿಸಬೇಕು.
-ಅನಿಲ್ ಚಿಕ್ಕಮಾದು, ಶಾಸಕ

ಮೈಸೂರು, ಜೂ 16(ಜಿಎ)–ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘದ ವತಿಯಿಂದ ಪತ್ರಕರ್ತರಿಗೆ ಯಶಸ್ವಿನಿ ಆರೋಗ್ಯ ವಿಮೆ ಸ್ಮಾರ್ಟ್ ಕಾರ್ಡ್ ವಿತರಣೆ ಮತ್ತು ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಅವರು ಪ್ರಶಸ್ತಿ ಪ್ರದಾನ ಮಾಡಿದರೆ, ಶಾಸಕರಾದ ಅನಿಲ್ ಚಿಕ್ಕಮಾದು ಮತ್ತು ಡಿ.ರವಿಶಂಕರ್ ಅವರು ಯಶಸ್ವಿನಿ ಆರೋಗ್ಯ ವಿಮೆ ಸ್ಮಾರ್ಟ್ ಕಾರ್ಡ್ ವಿತರಿಸಿದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಸಹಕಾರ ಸಂಘಗಳನ್ನು ಕಟ್ಟುವುದು ಹಾಗೂ ನಿರ್ವಹಣೆ ಮಾಡುವುದು ಬಹಳ ಕಷ್ಟದ ಸಂಗತಿಯಾಗಿದೆ. ನಾಯಿಕೊಡೆಗಳಂತೆ ಹಲವಾರು ಗೃಹ ನಿರ್ಮಾಣ ಸಹಕಾರಿ ಸಂಘಗಳು ಬೆಳೆದು ನಿಂತಿವೆ. ಆದರೆ, ಅನೇಕ ಸಮಸ್ಯೆಗಳಿಂದ ಬೆಳವಣಿಗೆ ಕಾಣದೇ ಅಸ್ತಿತ್ವ ಕಳೆದುಕೊಂಡಿವೆ. ಇಂತಹ ಸಂದರ್ಭದಲ್ಲಿ ಪತ್ರಕರ್ತರ ಅಭ್ಯುದಯ ಸಂಘವು ಯಶಸ್ವಿಯಾಗಿ ಸಾಗುತ್ತಿರುವುದು ಸಂತಸದ ವಿಚಾರ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪತ್ರಕರ್ತರಾದ ನೇರಳೆಕುಪ್ಪೆ ಮಹದೇವ್ (ವಿಜಯವಾಣಿ ಹುಣಸೂರು), ಸಿ.ಎನ್.ರಘು (ಪ್ರಜಾನುಡಿ, ಎಚ್.ಡಿ.ಕೋಟೆ), ಎಸ್.ಆರ್. ನಾಗರಾಂ (ಪ್ರಜಾವಾಣಿ ಸರಗೂರು), ಎಚ್.ಡಿ.ರಮೇಶ್ (ವಾರ್ತಾ ಭಾರತಿ, ಪಿರಿಯಾಪಟ್ಟಣ), ಕೆ.ಆರ್.ಶ್ರೀನಿವಾಸ್ (ನಗರಧೂತ ಕೆಆರ್.ನಗರ), ವಿ.ಸಿ.ಶಿವರಾಂ (ಸಂಯುಕ್ತ ಕರ್ನಾಟಕ, ಸಾಲಿಗ್ರಾಮ), ನಂಜನಗೂಡು ಮಧು (ಮಹಾನಂದಿ, ನಂಜನಗೂಡು), ಎಸ್.ಬಸವರಾಜ್ (ಕನ್ನಡಪ್ರಭ, ತಿ.ನರಸೀಪುರ), ಎಂ.ಎನ್.ಕಿರಣ್ (ದಿನ ತಂತಿ, ಮೈಸೂರು ನಗರ) ಅವರಿಗೆ ಇದೇ ವೇಳೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪತ್ರಕರ್ತರ ಅಭ್ಯುದಯ ಸಂಘದ ಜಿಲ್ಲಾಧ್ಯಕ್ಷ ಕೆ.ದೀಪಕ್, ಮೈಸೂರು ಸಹಕಾರ ಸಂಘಗಳ ನಿಬಂಧಕ ಪ್ರಕಾಶ್ ರಾವ್, ಜಿಲ್ಲಾ ಯಶಸ್ವಿನಿ ಸಂಯೋಜಕ ಕುಮಾರ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘದ ಉಪಾಧ್ಯಕ್ಷ ಹನಗೋಡು ನಟರಾಜ್, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ವಿವಿಧ ತಾಲೂಕಿನ ಪತ್ರಕರ್ತರ ಸಂಘದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಉಪಸ್ಥಿತರಿದ್ದರು.

ಸೌಜನ್ಯ ಅತ್ಯಾಚಾರ, ಹತ್ಯೆ ಪ್ರಕರಣ

ಆರೋಪಿ ಖುಲಾಸೆಗೊಳಿಸಿದ ಸಿಬಿಐ ಕೋರ್ಟ್

ಬೆಂಗಳೂರು: ರಾಷ್ಟ್ರಮಟ್ಟದಲ್ಲಿ ಸದ್ದು ಮಾಡಿದ್ದ ದಕ್ಷಿಣ ಕನ್ನಡ ಜಿಲ್ಲೆ ಉಜಿರೆಯ ಸೌಜನ್ಯ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದ ಆರೋಪಿಯನ್ನು ಖುಲಾಸೆಗೊಳಿಸಿ ಬೆಂಗಳೂರಿನ ಸಿಬಿಐ ಕೋರ್ಟ್ ಶುಕ್ರವಾರ ತೀರ್ಪು ನೀಡಿದೆ.

2012ರಲ್ಲಿ ನಡೆದ ಸೌಜನ್ಯ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಸಿ.ಬಿ ಅವರು, ಸಾಕ್ಷ್ಯಾಧಾರ ಕೊರತೆ ಹಿನ್ನೆಲೆಯಲ್ಲಿ ಆರೋಪಿ ಸಂತೋಷ್ ರಾವ್‌ರನ್ನು ಖುಲಾಸೆಗೊಳಿಸಿ ತೀರ್ಪು ನೀಡಿದ್ದಾರೆ. ಧರ್ಮಸ್ಥಳದ ಪಾಂಗಳ ನಿವಾಸಿ ಚಂದ್ರಪ್ಪ ಗೌಡ ಹಾಗೂ ಕುಸುಮಾವತಿ ದಂಪತಿಯ ಪುತ್ರಿ ಸೌಜನ್ಯ ಉಜಿರೆಯ ಎಸ್‌ಡಿಎಂ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಳು. ಅಕ್ಟೋಬರ್ 9, 2012ರಂದು ಸಂಜೆ ಕಾಲೇಜು ಮುಗಿಸಿ ಮನೆಗೆ ಮರಳುತ್ತಿದ್ದಾಗ ಸೌಜನ್ಯ ನಾಪತ್ತೆಯಾಗಿದ್ದಳು, ಮರು ದಿನ ರಾತ್ರಿ ಮಣ್ಣಸಂಕ ಬಳಿಯಲ್ಲಿ ಸೌಜನ್ಯ ಮೃತದೇಹ ಪತ್ತೆಯಾಗಿತ್ತು. ಈ ಸಂಬಂಧ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ ಹಾಗೂ ಕೊಲೆ ಪ್ರಕರಣ ದಾಖಲಾಗಿತ್ತು.

ಶಂಕಿತ ಆರೋಪಿ ಸಂತೋಷ್ ರಾವ್ ಉಡುಪಿ ಜಿಲ್ಲೆ ಕಾರ್ಕಳ ತಾಲೂಕಿನ ಕುಕ್ಕುಂದೂರು ಗ್ರಾಮದ ನಿವಾಸಿಯಾಗಿದ್ದು, ಆರೋಪಿಯನ್ನು ಬಾಹುಬಲಿ ಬೆಟ್ಟದ ಬಳಿಯಲ್ಲಿ ಸಾರ್ವಜನಿಕರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು.

ಕಾಡಾನೆಯಿಂದ ತಪ್ಪಿಸಿಕೊಳ್ಳುವಾಗ ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ

ಸವಾರನಿಗೆ ಗಂಭೀರ ಗಾಯ


ಗಾಯಾಳು ಆರೋಗ್ಯ ವಿಚಾರಿಸುತ್ತಿರುವ ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ.

ಮಡಿಕೇರಿ, ಜೂ.16– ಬೈಕ್‌ನಲ್ಲಿ ತೆರಳುತ್ತಿದ್ದ ತೋಟದ ಕಾರ್ಮಿಕನ ಮೇಲೆ ಕಾಡಾನೆ ದಾಳಿ ನಡೆಸಲು ಯತ್ನಿಸಿದ್ದ ವೇಳೆ ಬೈಕ್ ಸವಾರ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡ ಘಟನೆ ಸಿದ್ದಾಪುರ ಮಲಿಯೇರಿ ಬಳಿ ಶುಕ್ರವಾರ ನಡೆದಿದೆ. ಸುರೇಶ್ ಎಂಬ ಕಾರ್ಮಿಕನೇ ಗಾಯಗೊಂಡವನಾಗಿದ್ದು, ಅಮ್ಮತ್ತಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಕಾರ್ಮಿಕನ ಎಡ ಕಾಲು ಮುರಿದಿದ್ದು, ವೈದ್ಯರ ಶಿಫಾರಸಿನಂತೆ ಶಸ್ತ್ರ ಚಿಕಿತ್ಸೆ ನಡೆಸಬೇಕಿದೆ.

ಸುರೇಶ್ ಎಂದಿನಂತೆ ಬೈಕ್‌ನಲ್ಲಿ ಕೆಲಸಕ್ಕೆ ತೆರಳುತ್ತಿದ್ದ ಸಂದರ್ಭ ಮಲಿಯೇರಿ ಸಮೀಪದ ಕಾಫಿ ಬೆಳೆಗಾರ ಅಯ್ಯಪ್ಪ ಎಂಬವರ ತೋಟದ ಬಳಿ ನಡು ರಸ್ತೆಯಲ್ಲೇ ಕಾಡಾನೆ ಪ್ರತ್ಯಕ್ಷವಾಗಿದ್ದು, ಘೀಳಿಡುತ್ತಾ ಬೈಕ್ ಸವಾರನ ಮೇಲೆ ದಾಳಿ ಮಾಡಲು ಮುಂದಾಗಿದೆ. ಇದರಿಂದ ಗಾಬರಿಯಾದ ಸುರೇಶ್ ದಾಳಿಯಿಂದ ತಪ್ಪಿಸಿಕೊಳ್ಳಲು ಹೋಗಿ ವಿದ್ಯುತ್ ಕಂಬಕ್ಕೆ ಬೈಕ್ ಸಹಿತ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಗಂಭೀರ ಸ್ವರೂಪದ ಗಾಯಗಳಾಗಿವೆ.

ಸಂಕೇತ್ ಭೇಟಿ: ಕಾಡಾನೆ ದಾಳಿಯ ಮಾಹಿತಿ ಅರಿತ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ತಕ್ಷಣವೇ ಸಂಕೇತ್ ಪೂವಯ್ಯ ಅವರನ್ನು ಸಂಪರ್ಕಿಸಿ ಗಾಯಾಳುವಿನ ಯೋಗ ಕ್ಷೇಮ ವಿಚಾರಿಸಲು ಸೂಚಿಸಿದ್ದಾರೆ. ಅದರಂತೆ ಆಸ್ಪತ್ರೆಗೆ ಭೇಟಿ ನೀಡಿದ ಕಾಂಗ್ರೆಸ್ ರಾಜ್ಯ ವಕ್ತಾರ ಸಂಕೇತ್ ಪೂವಯ್ಯ, ಗಾಯಾಳು ಸುರೇಶ್ ಅವರ ಆರೋಗ್ಯ ವಿಚಾರಿಸಿ, ಸಾಂತ್ವನ ಹೇಳಿದರು. ವೈದ್ಯರನ್ನು ಭೇಟಿ ಮಾಡಿ ಚರ್ಚಿಸಿದ ಸಂಕೇತ್ ಪೂವಯ್ಯ, ಉತ್ತಮ ಗುಣ ಮಟ್ಟದ ಚಿಕಿತ್ಸೆ ನೀಡುವಂತೆ ಹೇಳಿದರು. ವೈದ್ಯರ ಶಿಫಾರಸಿನಂತೆ ಗಾಯಾಳು ಸುರೇಶ್‌ಗೆ ಉನ್ನತ ಮಟ್ಟದ ಚಿಕಿತ್ಸೆಯ ಅಗತ್ಯವಿದ್ದಲ್ಲಿ, ಶಾಸಕ ಪೊನ್ನಣ್ಣ ಅವರಿಗೆ ಮಾಹಿತಿ ನೀಡಿ ಬೇರೆ ಆಸ್ಪತ್ರೆಗೆ ದಾಖಲಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು. ಈ ಸಂದರ್ಭ ಅರಣ್ಯಾಧಿಕಾರಿ ಕೆ.ದೇವಯ್ಯ, ಪಕ್ಷದ ಪ್ರಮುಖರಾದ ಹೆಚ್.ಎಸ್. ಮತೀನ್, ಜಾನ್ಸನ್, ನೌಶಾದ್, ದಿನೇಶ್, ದಿವಾಕರ್ ಹಾಜರಿದ್ದರು.

ಕಾಡಾನೆ ಸ್ಥಳಾಂತರಿಸಿ: ಸಾರ್ವಜನಿಕರ ಜೀವ ಹಾನಿ ಉಂಟು ಮಾಡುತ್ತಿರುವ ಕಾಡಾನೆಯನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸಬೇಕು. ಈ ನಿಟ್ಟಿನಲ್ಲಿ ತಕ್ಷಣವೇ ಕಾರ್ಯಾಚರಣೆ ನಡೆಸಬೇಕು. ಮಾತ್ರವಲ್ಲದೇ ಕಾಡಾನೆಗೆ ಸೂಕ್ತ ಪುನರ್ವಸತಿ ಕಲ್ಪಿಸಬೇಕು ಎಂದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್. ಪೊನ್ನಣ್ಣ ಸ್ಪಷ್ಟ ಸೂಚನೆ ನೀಡಿದ್ದಾರೆ.

ರಸ್ತೆಯಲ್ಲಿ ಅಟ್ಟಹಾಸ; ಆತಂಕ ಸೃಷ್ಟಿಸಿದ ಸಲಗ



ಸುಂಟಿಕೊಪ್ಪ, ಜೂ.16– ಚೆಟ್ಟಳ್ಳಿ–ಸುಂಟಿಕೊಪ್ಪ ಮಾರ್ಗದ ಕೃಷ್ಣ ತೋಟದ ಸಮೀಪ ಕಾಡಾನೆಯೊಂದು ರಸ್ತೆಯಲ್ಲಿ ಸಂಚರಿಸಿ ಕೆಲ ಕಾಲ ಆತಂಕ ಸೃಷ್ಟಿಸಿತು. ಕೊಡಗಿನಲ್ಲಿ ಈಗ ಹಲಸಿನ ಹಣ್ಣಿನ ಸಮಯವಾಗಿರುವ ಹಿನ್ನೆಲೆಯಲ್ಲಿ ಕಾಫಿ ತೋಟಗಳಲ್ಲಿ ಕಾಡಾನೆಗಳು ಬೀಡು ಬಿಟ್ಟಿವೆ. ಹಲಸಿನ ಹಣ್ಣಿನ ಪರಿಮಳದಿಂದ ಕಾಡಾನೆಗಳು ಒಂದು ತೋಟದಿಂದ ಮತ್ತೊಂದು ತೋಟದ ಕಡೆಗೆ ಸಂಚರಿಸುತ್ತಿವೆ. ಹಾಡಹಗಲೇ ನಡು ರಸ್ತೆಯಲ್ಲಿ ಆನೆ ಓಡಾಟ ಕಂಡು ವಾಹನ ಸವಾರರು ಆತಂಕಗೊಂಡರು. ಮಾಹಿತಿ ಅರಿತ ಅರಣ್ಯ ಇಲಾಖೆ ಆರ್‌ಆರ್‌ಟಿ ತಂಡದ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಪಟಾಕಿ ಸಿಡಿಸಿ ಕಾಡಾನೆಯನ್ನು ಕಾಡಿಗೆ ಅಟ್ಟಿದರು. ಒಂಟಿ ಆನೆ ಸಂಚರಿಸುತ್ತಿರುವುದರಿಂದ ಈ ಭಾಗದ ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಭಯಭೀತರಾಗಿದ್ದಾರೆ.

ಬುಲೆಟ್–ಸ್ಕೂಟಿ ಅಪಘಾತ: ಯುವತಿ ಸಾವು


ಭಾವನ

ಕುಶಾಲನಗರ, ಜೂ.16– ಬುಲೆಟ್ ಮತ್ತು ಸ್ಕೂಟಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಯುವತಿ ದಾರುಣವಾಗಿ ಮೃತಪಟ್ಟು, ಹಿಂಬದಿ ಸವಾರಳಾಗಿದ್ದ ಆಕೆಯ ಸ್ನೇಹಿತೆ ತೀವ್ರವಾಗಿ ಗಾಯಗೊಂಡ ಘಟನೆ ಕುಶಾಲನಗರದ ಬೈಚನಹಳ್ಳಿಯ ಬುಲೆಟ್ ಶೋ ರೂಂ ಸಮೀಪ ಶುಕ್ರವಾರ ನಡೆದಿದೆ.

ಕುಶಾಲನಗರದ ಇಂದಿರಾ ಬಡಾವಣೆ ನಿವಾಸಿ ಪೂಣಚ್ಚ ಎಂಬವರ ಪುತ್ರಿ ಭಾವನ (21) ಅಪಘಾತದಲ್ಲಿ ಮೃತಪಟ್ಟವಳಾಗಿದ್ದು, ಈಕೆಯ ಜೊತೆಗಿದ್ದ ಕೊಪ್ಪದ ಮರೂರು ಗ್ರಾಮದ ಕುಶಾಲಪ್ಪ ಎಂಬವರ ಪುತ್ರಿ ನಿಸರ್ಗ (21) ತೀವ್ರವಾಗಿ ಗಾಯಗೊಂಡು ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಸಾವು–ಬದುಕಿನ ಹೋರಾಟ ನಡೆಸುತ್ತಿದ್ದಾರೆ.

ವಿವರ: ಭಾವನ ಮತ್ತು ನಿಸರ್ಗ ಸ್ಕೂಟಿಯಲ್ಲಿ ಗುಡ್ಡೆಹೊಸೂರು ಕಡೆಯಿಂದ ಕುಶಾಲನಗರದ ಕಡೆಗೆ ಬರುತ್ತಿದ್ದಾಗ ಮಾದಾಪಟ್ಟಣದ ವರುಣ್ (25) ಎಂಬಾತ ಕುಶಾಲನಗರದ ಕಡೆಯಿಂದ ಗುಡ್ಡೆಹೊಸೂರು ಕಡೆಗೆ ಬುಲೆಟ್‌ನಲ್ಲಿ ತೆರಳುತ್ತಿದ್ದಾಗ ಎರಡೂ ವಾಹನಗಳು ಮುಖಾಮುಖಿ ಡಿಕ್ಕಿಯಾಗಿದೆ. ಈ ಅಪಘಾತದಲ್ಲಿ ಭಾವನ ಮೃತಪಟ್ಟು, ನಿಸರ್ಗ ತೀವ್ರವಾಗಿ ಗಾಯಗೊಂಡಿದ್ದರೆ, ಬುಲೆಟ್ ಸವಾರ ವರುಣ್‌ಗೂ ಕೂಡ ಗಂಭೀರವಾಗಿ ಗಾಯಗಳಾಗಿವೆ. ಕುಶಾಲನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಇಬ್ಬರು ಗಾಂಜಾ ಮಾರಾಟಗಾರರ ಬಂಧನ

ಕುಶಾಲನಗರ, ಜೂ.16– ತಾಲೂಕಿನ ಕೂಡುಮಂಗಳೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಬಸವನತ್ತೋರು ಸರ್ಕಲ್ ಬಳಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಯುವಕರನ್ನು ವಶಕ್ಕೆ ಪಡೆದು ಅವರ ಬಳಿ ಇದ್ದ 135 ಗ್ರಾಂ ಗಾಂಜಾವನ್ನು ಪೊಲೀಸರು ವಶ ಪಡಿಸಿಕೊಂಡಿದ್ದಾರೆ.

ಕೂಡ್ಲೂರು ಕೈಗಾರಿಕಾ ಬಡಾವಣೆಯ ಹೋಟೇಲೊಂದರ ಸಿಬ್ಬಂದಿ ಸೈಯದ್ ಶಾಯಿಲ್ ತಂದೆ ಸೈಯದ್ ಇಸ್ಮಾಯಿಲ್ (20 ವರ್ಷ) ಹಾಗೂ ಕೂಡಿಗೆ ಗ್ರಾಮದ ಕೃಷಿಕ ಪ್ರತೀಕ್ ತಂದೆ ಸ್ವಾಮಿ (22. ವರ್ಷ) ಬಂಧಿತ ವ್ಯಕ್ತಿಗಳಾಗಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಕೂಡ್ಲೂರು ಗ್ರಾಮಾಂತರ ಪೊಲೀಸ್ ಠಾಣೆಯ ಐಪಿಎಸ್ ಚಂದ್ರಶೇಖರ್ ನೇತೃತ್ವದಲ್ಲಿ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ.

ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಪ್ರಕರಣ

ಆಕ್ಷೇಪಣೆ ಸಲ್ಲಿಸಲು ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ



ಮಡಿಕೇರಿ, ಜೂ.16– ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯ ತ್ತತೆಯ ಕುರಿತು ಸಿಎನ್‌ಸಿ ಬೇಡಿಕೆಗೆ ಪೂರಕವಾಗಿ ಆಯೋಗವನ್ನು ರಚಿಸಬೇಕೆಂದು ಖ್ಯಾತ ಅರ್ಥ ಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಜೂ.14 ರಂದು ಹೈಕೋರ್ಟ್‌ನಲ್ಲಿ ನಡೆಯಿತು. ವಿಚಾರಣೆಯನ್ನು ಆ.3ಕ್ಕೆ ಮುಂದೂಡಲಾಗಿದ್ದು, ಮುಂದಿನ 6 ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಕೋರ್ಟ್ ನಿರ್ದೇಶನ ನೀಡಿತು.

ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಎಂ.ಜೆ.ಎಸ್ ಕಮಲ್ ಅವರ ವಿಭಾಗೀಯ ಪೀಠವು ಪ್ರಕರಣದ ವಿಚಾರಣೆ ನಡೆಸಿತು. ಡಾ. ಸುಬ್ರಮಣಿಯನ್ ಸ್ವಾಮಿ ಅವರ ಪರವಾಗಿ ನ್ಯಾಯವಾದಿ ಕಿರಣ್, ಎನ್.ಯು. ನಾಚಪ್ಪ ಅವರ ಪರ ಸುಪ್ರೀಂ ಕೋರ್ಟ್ ವಕೀಲ ವಿಕ್ರಮ್ ಹೆಗ್ಡೆ ಹಾಗೂ ಚಿತ್ವಾನ್ ಹಾಜರಾಗಿ ಅಹವಾಲು ಸಲ್ಲಿಸಿದರು.

ಎನ್.ಯು.ನಾಚಪ್ಪ, ಲೆಫ್ಟಿನೆಂಟ್ ಕರ್ನಲ್ ಪಾರ್ವತಿ, ಮಚ್ಚಾರಂಡ ಸಿಂಧು, ಶ್ರೇಯ ನಾಚಪ್ಪ, ಕಲಿಯಂಡ ಪ್ರಕಾಶ್, ಜಮ್ಮಡ ಮೋಹನ್, ಪಟ್ಟಮಾಡ ಕುಶ, ಅರೆಯಡ ಗಿರೀಶ್, ಚಂಬಂಡ ಜನತ್, ಮಂದಪಂಡ ಮನೋಜ್, ಆಲ್ಮಂಡ ಜೈ, ಬೊಳ್ಳಾರಪಂಡ ಬೋಪಣ್ಣ ಅಜ್ಜಿಕುಟ್ಟೀರ ಲೋಕೇಶ್, ಪಟ್ಟಡ ರಂಜನ್, ಕಾಂಡೇರ ಸುರೇಶ್, ಪಟ್ಟಮಾಡ ಅಶೋಕ್, ಕಿರಿಯಮಾಡ ಶರಿನ್, ಕಿರಿಯಮಾಡ ಶಾನ್, ಬೇಪಾಡಿಯಂಡ ದಿನು, ಅಪ್ಪೆಂಗಡ ಮಾಲೆ, ಪಾರ್ವಂಗಡ ನವೀನ್ ವಿಚಾರಣೆ ಸಂದರ್ಭ ಹಾಜರಿದ್ದರು.

ಮೂರ್ನಾಡು ಪ್ರಥಮ ದರ್ಜೆ ಕಾಲೇಜಿಗೆ ಹಾಕಿಯಲ್ಲಿ ಕಂಚಿನ ಪದಕ



ನಾಪೋಕ್ಲು, ಜೂ.16– ಮಂಗಳೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಪುರುಷರ ಹಾಕಿ ಪಂದ್ಯಾವಳಿ ಪೊನ್ನಂಪೇಟೆಯಲ್ಲಿ ಇತ್ತೀಚೆಗೆ ನಡೆಯಿತು.

ಮೂರ್ನಾಡು ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಪಂದ್ಯಾವಳಿಯಲ್ಲಿ ಭಾಗವಹಿಸಿ ಕಂಚಿನ ಪದಕವನ್ನು ತನ್ನದಾಗಿಸಿಕೊಂಡರು. ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಕರಾದ ಕಂಬೀರಂಡ ಬೋಪಣ್ಣನವರ ತರಬೇತಿಯಲ್ಲಿ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನವನ್ನು ನೀಡಿದರು. ಕಾಲೇಜಿನ ಅಂತಿಮ ಬಿಕಾಂ ವಿದ್ಯಾರ್ಥಿಯಾದ ವಿ.ಟಿ. ಸೋಮಣ್ಣ ಪಂದ್ಯಾವಳಿಯ ಅತ್ಯುನ್ನತ ಗೋಲ್ ಕೀಪರ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ.

ಇಂದು ಜನಸಂಪರ್ಕ ಸಭೆ

ಮಡಿಕೇರಿ, ಜೂ.16– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಗ್ರಾಮ ಮಟ್ಟದ ಬದಲಾಗಿ ಉಪ ವಿಭಾಗ ಮಟ್ಟದಲ್ಲಿ ಜೂನ್ 17 ರಂದು ವಿದ್ಯುತ್ ಆದಾಲತ್ ನಡೆಯಲಿದೆ ಎಂದು ಸೆಸ್ಕ್ ಕಾರ್ಯಪಾಲಕ ಎಂಜಿನಿಯರ್ ಅನಿತಾ ಬಾಯಿ ಅವರು ತಿಳಿಸಿದ್ದಾರೆ. ಆ ನಿಟ್ಟಿನಲ್ಲಿ ಜೂನ್, 17 ರಂದು ಬೆಳಗ್ಗೆ 11 ಗಂಟೆಗೆ ಮಡಿಕೇರಿ, ಗೋಣಿಕೊಪ್ಪಲು, ವಿರಾಜಪೇಟೆ, ಕುಶಾಲನಗರ ಮತ್ತು ಸೋಮವಾರಪೇಟೆ ಉಪ ವಿಭಾಗ ಕಚೇರಿಗಳಲ್ಲಿ ಜನಸಂಪರ್ಕ ಸಭೆ ನಡೆಯಲಿದೆ ಎಂದು ಸೆಸ್ಕ್ ಎಂಜಿನಿಯರ್ ಅವರು ಹೇಳಿದ್ದಾರೆ.

ಆದ್ದರಿಂದ ಮಡಿಕೇರಿ, ಗೋಣಿಕೊಪ್ಪಲು, ವಿರಾಜಪೇಟೆ, ಕುಶಾಲನಗರ ಮತ್ತು ಸೋಮವಾರಪೇಟೆ ಉಪ ವಿಭಾಗ ವ್ಯಾಪ್ತಿಯ ಸಾರ್ವಜನಿಕರು/ ವಿದ್ಯುತ್ ಗ್ರಾಹಕರು ಸಭೆಗೆ ಹಾಜರಾಗಿ ತಮ್ಮ ಅಹವಾಲುಗಳನ್ನು ಸಲ್ಲಿಸುವಂತೆ ಮಡಿಕೇರಿ ವಿಭಾಗದ ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಕೋರಿದ್ದಾರೆ.

ಸಿಇಟಿ ಉಚಿತ ಕಾರ್ಯಾಗಾರ

ವಿರಾಜಪೇಟೆ, ಜೂ.16– ಜಿಲ್ಲೆಯ ಸಿಇಟಿ, ಜೆಇಇ ಹಾಗೂ ನೀಟ್ ಆಕಾಂಕ್ಷಿಗಳಿಗೆ ಜುಲೈ 2ರಂದು ಮಂಗಳೂರಿನ ಪ್ರಾಧ್ಯಾಪಕರಾದ ಡಾ. ಪ್ರಶಾಂತ್ ರಾವ್ ಅವರು ಉಚಿತ ಕಾರ್ಯಾಗಾರವನ್ನು ನಡೆಸಿಕೊಡಲಿದ್ದಾರೆ ಎಂದು ಚಾಣಕ್ಯ ಎಜುಕೇಶನ್ ಟ್ರಸ್ಟ್‌ನ ಅಧ್ಯಕ್ಷೆ ಸಿ.ಎನ್.ಕವಿತಾ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿರಾಜಪೇಟೆ ಪಟ್ಟಣದ ತೆಲುಗರ ಬೀದಿಯಲ್ಲಿನ ಚಾಣಕ್ಯ ಎಜುಕೇಶನ್ ಟ್ರಸ್ಟ್‌ನ ಸಭಾಂಗಣದಲ್ಲಿ ಜುಲೈ 2 ರಂದು ಬೆಳಗ್ಗೆ 9 ರಿಂದ 10 ಗಂಟೆಯ ವರೆಗೆ ಕಾರ್ಯಾಗಾರ ನಡೆಯಲಿದ್ದು, ಪ್ರಥಮ ಹಾಗೂ ದ್ವಿತೀಯ ಪಿ.ಯು. ವಿಜ್ಞಾನ ವಿಭಾಗದ ಯಾವುದೇ ಕಾಲೇಜಿನ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಭಾಗವಹಿಸಬಹುದು. ಮಂಗಳೂರಿನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರಾಗಿರುವ ಡಾ. ಪ್ರಶಾಂತ್‌ರಾವ್ ಅವರು ಹಲವು ವಿದ್ಯಾಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿ ಅನುಭವವನ್ನು ಹೊಂದಿದ್ದಾರೆ. ಕಾರ್ಯಾಗಾರದಲ್ಲಿ ಭಾಗವಹಿಸುವವರು ದೂರವಾಣಿ ಸಂಖ್ಯೆ–8277496007 ನ್ನು ಸಂಪರ್ಕಿಸಬಹುದು ಎಂದರು.

ಚಾ.ನಗರದಲ್ಲಿ ಟ್ರ್ಯಾಕ್ಟರ್ ಖರೀದಿಸಿದ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ

• 25 ವರ್ಷದಿಂದ ಕೃಷಿ ಮಾಡುತ್ತಿರುವ ಕ್ರಿಕೆಟಿಗ • ಬಂಡೀಪುರ ಬಳಿ 36 ಎಕರೆ ತೋಟ ಹೊಂದಿರುವ ಬಿನ್ನಿ



ಚಾಮರಾಜನಗರ, ಜೂ.16(ಎಸ್‌ಎಸ್)– ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ರೋಜರ್ ಬಿನ್ನಿ ಅವರು ಶುಕ್ರವಾರ ಚಾಮರಾಜನಗರಕ್ಕೆ ಭೇಟಿ ನೀಡಿದ್ದರು. ಈ ವೇಳೆ ಅವರು ನಗರದ ನಂಜನಗೂಡು ರಸ್ತೆಯಲ್ಲಿರುವ ಈಶ್ವರಿ ಟ್ರ್ಯಾಕ್ಟರ್ ಶೋರೂಂನಲ್ಲಿ ಮಹೀಂದ್ರ ಕಂಪನಿಯ ಟ್ರ್ಯಾಕ್ಟರ್ ಖರೀದಿಸಿದರು.

ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಅರಣ್ಯ ದಂಚಿನಲ್ಲಿ ರೋಜನ್‌ಬಿನ್ನಿ ಅವರಿಗೆ 36 ಎಕರೆ ಜಮೀನು ಇದೆ. ಇಲ್ಲಿ ವ್ಯವಸಾಯ ಮಾಡುವುದಕ್ಕಾಗಿ ಅವರು ಟ್ರ್ಯಾಕ್ಟರ್ ಖರೀದಿಸಿದರು.

ರೋಜನ್ ಬಿನ್ನಿ ಅವರು ಬಿಸಿಸಿಐ ಅಧ್ಯಕ್ಷರಾಗಿದ್ದರೂ ಸಹ ಟ್ರ್ಯಾಕ್ಟರ್ ಖರೀದಿಸಲು ಬಹಳ ಸರಳವಾಗಿ ಬಂದಿದ್ದರು. ನಗರದ ಪಾಲಿಟೆಕ್ನಿಕ್ ಕಾಲೇಜು ಎದುರು ಇರುವ ಈಶ್ವರಿ ಟ್ರ್ಯಾಕ್ಟರ್ ಶೋರೂಂಗೆ ಆಗಮಿಸಿದ ಅವರು, ಮೊದಲಿಗೆ ಮಹೀಂದ್ರ ಟ್ರ್ಯಾಕ್ಟರ್ ಕಂಪನಿಯ ಮುಖ್ಯಸ್ಥರು ಹಾಗೂ ಶೋರೂಂ ಮಾಲೀಕರೊಂದಿಗೆ ಚರ್ಚಿಸಿ ಅತಿಥ್ಯ ಸ್ವೀಕರಿಸಿದರು. ಬಳಿಕ ತಾವು ಖರೀದಿಸಿದ್ದ ಟ್ರ್ಯಾಕ್ಟರ್‌ನ ಕೀ ಪಡೆದು ಸ್ವತಃ ಟ್ರ್ಯಾಕ್ಟರ್ ಅನ್ನು ಚಾಲನೆ ಮಾಡಿದರು.

ಬಿಸಿಸಿಐ ಅಧ್ಯಕ್ಷರು ನಗರಕ್ಕೆ ಆಗಮಿಸಿದ್ದರೆ ಎಂಬ ವಿಷಯ ತಿಳಿದ ಕೆಲವು ಯುವಕರು ಟ್ರ್ಯಾಕ್ಟರ್ ಶೋರೂಂಗೆ ಆಗಮಿಸಿದರು. ಈ ವೇಳೆ ಯುವಕರು ಕ್ರಿಕೆಟ್ ಬ್ಯಾಟ್ ಮೇಲೆ ಬಿನ್ನಿ ಅವರಿಂದ ಆಟೋಗ್ರಾಫ್ ಪಡೆದರು. ತದನಂತರ ಜೊತೆಯಲ್ಲಿ ನಿಂತುಕೊಂಡು ಫೋಟೋ ತೆಗೆಸಿಕೊಂಡರು. ಇದಲ್ಲದೇ ಟ್ರ್ಯಾಕ್ಟರ್ ಶೋರೂಂ ಪಾಲುದಾರರು ಹಾಗೂ ಸಿಬ್ಬಂದಿ, ಕೆಲ ನಾಗರಿಕರು ಹಾಗೂ ಮಾಧ್ಯಮದವರು ರೋಜರ್ ಬಿನ್ನಿ ಅವರೊಂದಿಗೆ ಫೋಟೋ ತೆಗೆಸಿಕೊಂಡು ಸಂತಸಗೊಂಡರು.

25 ವರ್ಷದಿಂದ ಕೃಷಿ: ಈ ವೇಳೆ ಮಾಧ್ಯಮದೊಂದಿಗೆ ಮಾತನಾಡಿದ ರೋಜರ್‌ಬಿನ್ನಿ, ಬಂಡೀಪುರದ ಬಳಿ ನಮ್ಮದು 36 ಎಕರೆ ಫಾರಂ ಇದೆ. ನಮ್ಮ ಪೂರ್ವಿಕರೇನೂ ಕೃಷಿಕರಲ್ಲ. ಆದರೆ, ನಾನು ಕಳೆದ 25 ವರ್ಷಗಳಿಂದ ಕೃಷಿ ಮಾಡುತ್ತಿದ್ದೇನೆ. ನನಗೆ ಕೃಷಿ ಮಾಡೋ ಅಭಿರುಚಿ ಎಂದರು.

ಟೆಸ್ಟ್‌ನಲ್ಲಿ ಕ್ರಿಕೆಟ್ ಭವಿಷ್ಯ: ಐಪಿಎಲ್ ಪಂದ್ಯಗಳಿಂದ ಅಂತರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಿಗೆ ಯಾವುದೇ ತೊಂದರೆ ಆಗಲ್ಲ. ಟಿ20ಗೂ, ಏಕದಿನ ಹಾಗೂ ಟೆಸ್ಟ್ ಪಂದ್ಯಗಳಿಗೆ ಸಾಕಷ್ಟು ವ್ಯತ್ಯಾಸವಿದೆ. ನಾವು ಟೆಸ್ಟ್ ಕ್ರಿಕೆಟ್ ಅನ್ನು ಯಾವುದೇ ಕಾರಣಕ್ಕೂ ಮರೆಯಬಾರದು. ಟೆಸ್ಟ್‌ನಲ್ಲಿ ಕ್ರಿಕೆಟ್ ಭವಿಷ್ಯ ಅಡಗಿದೆ. ವೀಕ್ಷಕರ ಮನರಂಜನೆಗಾಗಿ ಐಪಿಎಲ್ ನಡೆಯುತ್ತಿದೆ ಎಂದರು.

ಸಣ್ಣ ತಪ್ಪು ಆಗಿದೆ: ಡಬ್ಲ್ಯೂಟಿಸಿ ಫೈನಲ್‌ನಲ್ಲಿ ಭಾರತ ಸೋಲು ಅನುಭವಿಸಿದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಬಿಸಿಸಿಐ ಅಧ್ಯಕ್ಷರು, ವಿಭಿನ್ನ ವಾತಾವರಣದಲ್ಲಿ ಕ್ರಿಕೆಟ್ ಆಡುವಾಗ ಪಿಚ್‌ಅನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ ಆಗುತ್ತದೆ. ಆಸೀಸ್ ವಿರುದ್ಧದ ಟೆಸ್ಟ್ ಫೈನಲ್ ವೇಳೆ ಮೊದಲ ದಿನ ಸರಿಯಾಗಿ ಆಡಲು ಸಾಧ್ಯವಾಗಲಿಲ್ಲ. ಟೀಮ್ ಆಯ್ಕೆಯ ವೇಳೆ ಒಂದು ಸಣ್ಣ ತಪ್ಪು ಸಹ ಆಗಿದೆ. ಇಲ್ಲದಿದ್ದರೆ ಆ ಪಂದ್ಯವನ್ನು ನಾವು ಗೆಲ್ಲುತ್ತಿದ್ದೆವು ಎಂದರು. ಆಟಗಾರರು ಇಡೀ ವರ್ಷ ಕ್ರಿಕೆಟ್ ಆಡುವುದರಿಂದ ಅಭ್ಯಾಸ ಅಗತ್ಯವಿಲ್ಲ. ಟಿ20 ಇರಲಿ, ಏಕದಿನ ವಾಗಲಿ ಅಥವಾ ಟೆಸ್ಟ್ ಇರಲಿ ಎಲ್ಲದಕ್ಕೂ ಆಟಗಾರರು ಹೊಂದಾಣಿಕೆ ಆಗಬೇಕು. ಆಗ ಆ ಆಟಗಾರರು ಉತ್ತಮ ಆಟಗಾರರಾಗಿರುತ್ತಾರೆ ಎಂದು ರೋಜರ್ ಬಿನ್ನಿ ಹೇಳಿದರು.

ಈ ಸಂದರ್ಭದಲ್ಲಿ ಮಹೀಂದ್ರಾ ಟ್ರ್ಯಾಕ್ಟರ್ ಕಂಪನಿಯ ರಾಜ್ಯ ಮುಖ್ಯಸ್ಥರಾದ ಅರವಿಂದ್ ಪಾಂಡೆ, ಮೌಲಿಕ್ ತಕ್ಕರ್, ಸಂತೋಷ್ ದುಗಾನಿ, ಶಂಕರ್ ಶ್ರೀನಿವಾಸ್, ಟ್ರ್ಯಾಕ್ಟರ್ ಶೋರೂಂ ಪಾಲುದಾರರಾದ ಅಶೋಕ್, ಜಿ. ಪ್ರಶಾಂತ್, ಮುಖಂಡರಾದ ಅರಕಲವಾಡಿ ಮಹೇಶ್, ಶಮಿತ್‌ಕುಮಾರ್, ಅಶೋಕ್, ಮಹೇಶ್, ಸೋಮಶೇಖರ್, ರಾಜೇಶ್, ಶಿವರಾಜ್ ಇತರರು ಹಾಜರಿದ್ದರು.

ಚಾಮರಾಜನಗರ ನಗರಸಭೆಯಿಂದ ಉದ್ದಿಮೆ ಪರವಾನಗಿ ನವೀಕರಣ ಆಂದೋಲನ



ಚಾಮರಾಜನಗರ, ಜೂ. 16– ಚಾಮರಾಜನಗರದ ನಗರಸಭೆ ವತಿಯಿಂದ ಉದ್ದಿಮೆ ಪರವಾನಗಿ ನವೀಕರಣ ಆಂದೋಲನ ನಡೆಯಿತು.

ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಎಂ.ಬಿ.ಸುಧಾರವರು ಮಾತನಾಡಿ, ನಗರದ ವಾಣಿಜ್ಯ ಪ್ರದೇಶದಲ್ಲಿ ಉದ್ದಿಮೆಗಳನ್ನು ನಡೆಸುವ ಅಂಗಡಿ ಮಾಲೀಕರು, ದೊಡ್ಡ ಶೋರೂಂ ಮಾಲೀಕರು ಹಾಗೂ ಇತರೆ ಉದ್ದಿಮೆದಾರರು ತಮ್ಮ ಉದ್ದಿಮೆ ಪರವಾನಗಿಯನ್ನು ನವೀಕರಣ ಮಾಡಿಕೊಳ್ಳುವಂತೆ ನಗರಸಭೆ ವತಿಯಿಂದ ಆಂದೋಲನ ಹಮ್ಮಿಕೊಳ್ಳಲಾಗಿದ್ದು, ನವೀಕರಣ ಮಾಡಿಕೊಳ್ಳುವಂತೆ ಮಾಲೀಕರಿಗೆ ನೋಟೀಸ್ ನೀಡಲಾಗಿತ್ತು ಆದರೂ ಅವರು ನವೀಕರಣ ಮಾಡಿಕೊಳ್ಳದ ಹಿನ್ನಲೆಯಲ್ಲಿ, ನಗರದ ಪ್ರತಿ ಉದ್ದಿಮೆದಾರರ ಅಂಗಡಿಗಳಿಗೆ, ಶೋರೂಂಗಳಿಗೆ ಭೇಟಿ ನೀಡಿ ಪರವಾನಗಿ ನವೀಕರಣ ಮಾಡಿಕೊಳ್ಳುವಂತೆ ಹಾಗೂ ಅಂಗಡಿ ಮುಂದೆ ಸ್ವಚ್ಚತೆ ಕಾಪಾಡಿಕೊಳ್ಳುವಂತೆ ಜಾಗೃತಿ ಉಂಟು ಮಾಡಲಾಗಿದೆ ಎಂದರು. ಅಲ್ಲದೆ

ನಿಷೇಧಿತ ಪ್ಲಾಸ್ಟಿಕ್ ಬಳಕೆ ಮಾಡುವ ಅಂಗಡಿ ಮಾಲೀಕರಿಗೂ ಅರಿವು ಮೂಡಿಸಲಾಗುತ್ತಿದೆ. ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲೆಂದರಲ್ಲಿ ಕಸ ಹಾಕದಂತೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಹಿರಿಯ ಆರೋಗ್ಯ ನಿರೀಕ್ಷಕರಾದ ಶ್ರೀ.ಮಂಜುನಾಥ್, ಸುಷ್ಮಾ, ಕಿರಿಯ ಆರೋಗ್ಯ ನಿರೀಕ್ಷಕಿ ಪುಷ್ಪಾ, ಸಹಾಯಕ ಕಾರ್ಯಪಾಲಕ ಅಭಿಯಂತರಾದ ಗಿರಿಜಮ್ಮ ಇತರರು ಹಾಜರಿದ್ದರು.

ವೃತ್ತಿ ನೈಪುಣ್ಯತೆಯಿಂದ ಸ್ವಂತ ಉದ್ಯೋಗದಲ್ಲಿ ಯಶಸ್ಸು ಸಾಧ್ಯ

ಜಿಲ್ಲಾ ಪಂಚಾಯತ್ ಸಿಇಓ ಪೂವಿತಾ ಅಭಿಮತ



ಚಾಮರಾಜನಗರ, ಜೂ. 15– ವೃತ್ತಿ ನೈಪುಣ್ಯತೆಯನ್ನು ಹೊಂದಿ ಸ್ವಂತ ಉದ್ಯೋಗದಲ್ಲಿ ತೊಡಗಿಸಿಕೊಂಡರೆ ಹೆಚ್ಚಿನ ಸಂಪಾದನೆ ಮಾಡುವ ಜೊತೆಗೆ ನೆಮ್ಮದಿ ಜೀವನ ನಡೆಸಲು ಸಾಧ್ಯವಿದೆ ಎಂದು ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್ ಪೂವಿತಾ ತಿಳಿಸಿದರು.

ನಗರದ ಹೊರವಲಯದಲ್ಲಿರುವ ಮರಿಯಾಲ ಜೆಎಸ್‌ಎಸ್ ಐಟಿಐ ಕಾಲೇಜಿನಲ್ಲಿ ಜಿಪಂನ ಗ್ರಾಮೀಣ ಕೈಗಾರಿಕೆ ಹಾಗೂ ಜೆಎಸ್‌ಎಸ್ ನೈಪುಣ್ಯತಾ ತರಬೇತಿ ಸಂಸ್ಥೆಯ ಸಹಯೋಗದಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ವಿವಿಧ ವೃತ್ತಿಗಳಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ಪಡೆದ ಫಲಾನುಭವಿಗಳಿಗೆ ತರಬೇತಿ ಅರ್ಹತಾ ಪತ್ರ ವಿತರಣೆ ಮಾಡಿ ಅವರು ಮಾತನಾಡಿದರು.


ಸರ್ಕಾರಿ ಉದ್ಯೋಗವೇ ಬೇಕೆಂದು ಮನೆಯಲ್ಲಿದ್ದು ಕಾಲಹರಣ ಮಾಡುವ ಬದಲು ಇಂತಹ ತರಬೇತಿಗಳನ್ನು ಪಡೆದು ಸ್ವಂತ ಉದ್ಯೋಗ ಹೊಂದಿದರೆ, ತಮ್ಮ ದುಡಿಮೆ ಶ್ರಮದಿಂದ ಯಾವುದೇ ಇತಿಮಿತಿ ಇಲ್ಲದೇ ಸಂಪಾದನೆ ಮಾಡುವ ಅವಕಾಶ ಬಹಳಷ್ಟಿದೆ. ಇದಕ್ಕೆ ಕೌಶಲ್ಯ ನೈಪುಣ್ಯತೆಯು ಮುಖ್ಯವಾಗಿರುತ್ತದೆ. ಆತ್ಮಸ್ಥೈರ್ಯ ಮತ್ತು ಛಲ ಇದ್ದರೆ ಸಾಧನೆ ಮಾಡುವುದು ಕಷ್ಟವಲ್ಲ. ತರಬೇತಿ ಹೊಂದಿರುವ ಎಲ್ಲರು ಸಹ ಸ್ವಂತ ಉದ್ಯೋಗದಲ್ಲಿ ತೊಡಗಿ ಮತ್ತಷ್ಟು ಮಂದಿಗೆ ಉದ್ಯೋಗ ನೀಡುವ ಮಟ್ಟಕ್ಕೆ ಬೆಳೆಯಬೇಕು ಎಂದು ಪೂವಿತಾ ಶುಭ ಕೋರಿದರು. ಗ್ರಾಮೀಣ ಕೈಗಾರಿಕಾ ಇಲಾಖೆಯ ಉಪ ನಿರ್ದೇಶಕ ಕೆ.ಎ. ರಾಜೇಂದ್ರ ಪ್ರಸಾದ್ ಮಾತನಾಡಿ, ಗ್ರಾಮೀಣ ಕೈಗಾರಿಕೆ ಇಲಾಖೆಯಿಂದ ಬಹಳಷ್ಟು ಯೋಜನೆಗಳನ್ನು ಜಾರಿ ಮಾಡಿದ್ದು, ವೃತ್ತಿ ಕೌಶಲ್ಯವನ್ನು ಪಡೆದುಕೊಳ್ಳುವ ಜೊತೆಗೆ ಬ್ಯಾಂಕುಗಳಲ್ಲಿ ರಿಯಾಯಿತಿ ದರದಲ್ಲಿ ಸಾಲ ಸೌಲಭ್ಯಗಳನ್ನು ಪಡೆದು, ಉದ್ಯಮ ಆರಂಭಿಸಿ, ಹತ್ತಾರು ಮಂದಿಗೆ ಉದ್ಯೋಗ ನೀಡಿ, ಯಶಸ್ವಿ ಉದ್ಯಮಿದಾರರಾಗಬೇಕು ಎಂದು ಆಶಿಸಿದರು.

ಈಗಾಗಲೇ ಜೆಎಸ್‌ಎಸ್ ನೈಪುಣ್ಯತಾ ತರಬೇತಿ ಸಂಸ್ಥೆಯ ಸಹಯೋಗದಲ್ಲಿ ನಮ್ಮ ಇಲಾಖೆಯಿಂದ ನಿರುದ್ಯೋಗಿಗಳಿಗೆ ಹ್ಯಾಂಡ್ ಎಂಬ್ರಾಯಿಡರಿ, ಬ್ಯೂಟಿಷಿಯನ್, ಫ್ಯಾಷನ್ ಡಿಸೈನರ್, ಕಂಪ್ಯೂಟರ್ ಹಾರ್ಡ್‌ವೇರ್ ಹಾಗೂ ಅಡ್ವಾನ್ಸ್ ಸೀವಿಂಗ್ ಮೆಷಿನ್ ಆಪರೇಟರ್ ಕೋರ್ಸುಗಳಿಗೆ ತರಬೇತಿಯನ್ನು ನೀಡಲಾಗಿದೆ. 178 ಮಂದಿ ಯಶಸ್ವಿಯಾಗಿ ಆಯಾ ತಾಲೂಕುಗಳಲ್ಲಿ ಯಶಸ್ವಿಯಾಗಿ ತರಬೇತಿಯನ್ನು ಪೂರ್ಣಗೊಳಿಸಿ, ಅರ್ಹತಾ ಪತ್ರವನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಸಂಸ್ಥೆಯ ಸಂಯೋಜನಾಧಿಕಾರಿ ವೈ.ಎಂ. ಸಾಸಲಾರಾಧ್ಯ ಅಧ್ಯಕ್ಷತೆ ವಹಿಸಿ ವೃತ್ತಿ ಕೌಶಲ್ಯ ಹಾಗೂ ಜೀವನ ಮೌಲ್ಯಗಳ ಬಗ್ಗೆ ವಿವರವಾಗಿ ತಿಳಿಸಿದರು.

ಶಿಕ್ಷಣದ ಜೊತೆ ಕೌಶಲ್ಯವಿದ್ದರೆ ಮಾತ್ರ ಉದ್ಯೋಗ ಸಿಗಲು ಸಾಧ್ಯ

— ಶಾಸಕ ಎಆರ್ ಕೃಷ್ಣಮೂರ್ತಿ ಅಭಿಮತ —



ಯಳಂದೂರು, ಜೂ.16– ಇಂದಿನ ಜಗತ್ತು ಸ್ಪರ್ಧಾತ್ಮಕ ಯುಗವಾಗಿದೆ. ನಿರುದ್ಯೋಗಿ ಯುವಜನತೆ ತಮ್ಮ ಮನೆಯ ಸುತ್ತಮುತ್ತಲೇ ಉದ್ಯೋಗಬೇಕು ಎನ್ನುವ ಹಠ ಬಿಡಬೇಕು. ಉದ್ಯೋಗ ಅರಸಿಕೊಂಡು ಬೇರೆಡೆ ಹೋಗಬೇಕು. ಇದಕ್ಕಾಗಿ ಹೆಚ್ಚಿನ ಶ್ರಮ ಅಗತ್ಯ ಎಂದು ಕೊಳ್ಳೇಗಾಲ ಶಾಸಕ ಎ.ಆರ್. ಕೃಷ್ಣಮೂರ್ತಿ ಸಲಹೆ ನೀಡಿದರು.

ಅವರು ಸಮೀಪದ ಸಂತೆಮರಹಳ್ಳಿಯಲ್ಲಿ ಡಿಎಂ ಚಾರಿಟಬಲ್ ಟ್ರಸ್ಟ್ ವತಿಯಿಂದ ಇತ್ತೀಚೆಗೆ ನಡೆದ ಕೌಶಲ್ಯ ತರಬೇತಿ ಪ್ರಶಿಕ್ಷಣಾರ್ಥಿಗಳಿಗೆ ಪ್ರಮಾಣ ಪತ್ರ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂದಿನ ಯುವ ಜನತೆ ತಮ್ಮಲ್ಲಿ ವಿವಿಧ ಉದ್ಯೋಗಾಧಾರಿತ ಕೌಶಲ್ಯವನ್ನು ಹೆಚ್ಚಿಸಿಕೊಂಡರೆ ಅವರಿರುವಲ್ಲಿಯೇ ಉದ್ಯೋಗ ದೊರಕುತ್ತದೆ. ಆದ್ದರಿಂದ ಇಂದಿನ ಯುವಕರು ಯುವತಿಯರು ಶಿಕ್ಷಣದ ಜೊತೆ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಬೇಕು. ಗ್ರಾಮೀಣ ಯುವಜನತೆ ನಗರ ಪಟ್ಟಣಗಳಲ್ಲಿ ಉದ್ಯೋಗ ಸಿಕ್ಕರೂ ಹೋಗುತ್ತಿಲ್ಲ. ಏಕೆಂದರೆ ಅವರು ತಮ್ಮ ಮನೆಯ ಸುತ್ತಮುತ್ತಲೇ ಉದ್ಯೋಗ ಬಯಸುತ್ತಿದ್ದಾರೆ. ತಮಗೆ ಮಾಹಿತಿ ಇರುವಂತೆ ಬೆಂಗಳೂರಿನಲ್ಲಿ 2000ಕ್ಕೂ ಹೆಚ್ಚು ಉದ್ಯೋಗ ಖಾಸಗಿ ಕಂಪನಿಗಳಲ್ಲಿ ಲಭ್ಯವಿದೆ. ಆದರೂ ನಮ್ಮ ಯುವ ಜನತೆ ಅಲ್ಲಿ ಉದ್ಯೋಗ ಪಡೆಯಲು ಮುಂದಾಗುತ್ತಿಲ್ಲ. ಇಂತಹ ಮನಸ್ಥಿತಿಯಿಂದ ಯುವ ಜನತೆ ಹೊರ ಬರಬೇಕು ಎಂದು ಶಾಸಕರು ಕರೆ ನೀಡಿದರು.

ಹಿಂದಿನ ಸರ್ಕಾರ ಲಕ್ಷಾಂತರ ಜನರಿಗೆ ಉದ್ಯೋಗ ನೀಡುವ ಭರವಸೆ ನೀಡಿತ್ತು. ಆದರೆ ಉದ್ಯೋಗ ಎನ್ನುವುದು ಈಗ ಕನಸಿನ ಮಾತಾಗಿದೆ. ಆದರೆ ಈಗ ನಮ್ಮ ಸರಕಾರ ಉದ್ಯೋಗ ದೊರಕಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತಿದೆ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವವರೆಗೂ ನೆರವು ನೀಡುವ ಯುವಶಕ್ತಿ ಎನ್ನುವ ಗ್ಯಾರಂಟಿ ಯೋಜನೆಯನ್ನು ಸದ್ಯದಲ್ಲೇ ಜಾರಿಗೊಳಿಸಲಿದೆ, ಇದನ್ನು ಬಳಸಿಕೊಳ್ಳಿ ಎಂದರು.

ಜಿಲ್ಲಾಧಿಕಾರಿ ಡಿಎಸ್ ರಮೇಶ್ ಮಾತನಾಡಿ, ಇಂದಿನ ಯುವ ಜನತೆಗೆ ಕೌಶಲ್ಯದ ಜೊತೆಗೆ ನಂಬಿಕಾರ್ಹತೆ ಬಹಳ ಮುಖ್ಯ. ಇಂದಿನ ಸ್ಪರ್ಧಾತ್ಮಕ ಸಮಾಜದಲ್ಲಿ ಎಷ್ಟೇ ವಿದ್ಯಾವಂತರಾಗಿದ್ದರೂ ಕೌಶಲ್ಯ ಇಲ್ಲದಿದ್ದರೆ ಅದಕ್ಕೆ ನಿರೀಕ್ಷಿತ ಲಾಭ ಸಿಗುವುದಿಲ್ಲ. ಆದ್ದರಿಂದ ಕೌಶಲ್ಯ ಎನ್ನುವುದು ಇಂದಿನ ಅತ್ಯಗತ್ಯ. ಭಾರತದ ಯುವ ಜನತೆಗೆ ಅದರಲ್ಲೂ ಕೌಶಲ್ಯ ಭರಿತ ಯುವಕರಿಗೆ ಬೇಡಿಕೆ ಹೆಚ್ಚಾಗುತ್ತಿದ್ದು ಇದನ್ನು ಸದ್ಬಳಕೆ ಮಾಡಿಕೊಳ್ಳಲು ಯುವಕರು ಸಜ್ಜಾಗಬೇಕು ಎಂದು ಜಿಲ್ಲಾಧಿಕಾರಿಗಳು ಸಲಹೆ ನೀಡಿದರು.

ಇದಕ್ಕೂ ಮುನ್ನ ಡಿಎಂ ಚಾರಿಟೇಬಲ್ ಟ್ರಸ್ಟ್ ಮತ್ತು ಕೌಶಲ್ಯ ಅಭಿವೃದ್ಧಿ ಇಲಾಖೆಯಿಂದ ವಿವಿಧ ತರಬೇತಿ ಪಡೆದಿದ್ದ 30ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇಕಡ 98 ರಷ್ಟು ಅಂಕ ಪಡೆದ 15ಕ್ಕೂ ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಎಸ್‌ಬಿಐನ ಶಾಖಾವ್ಯವಸ್ಥಾಪಕ ಚನ್ನಕೇಶವ, ಡಿಎಂ ಟ್ರಸ್ಟ್‌ನ ಸಲಹೆಗಾರ ಜೈ ಶಂಕರ್, ಪ್ರಾಂಶುಪಾಲರುಗಳಾದ ಶಿವಣ್ಣ, ತಮ್ಮಯ್ಯ, ಜಯಶೀಲ, ಸಬ್‌ಇನ್ಸ್‌ಪೆಕ್ಟರ್ ಹನುಮಂತಪ್ಪ ಉಪ್ಪಾರ್, ತಾಜುದ್ದೀನ್ ಸೇರಿದಂತೆ ಇತರರು ಹಾಜರಿದ್ದರು.

ಮೂರನೇ ಪುಟದಿಂದ

ಮೋದಿಯಿಂದಲೇ ಮೈಸೂರು ಅಭಿವೃದ್ಧಿ

ಸರ್ಕಾರದ ಸಾಧನೆಗಳು ಏನೆಂದು ಜನರಿಗೆ ಮನದಟ್ಟು ಮಾಡಿಕೊಡಲಾಗುವುದು ಎಂದು ಪ್ರತಾಪ್ ಸಿಂಹ ತಿಳಿಸಿದರು. ಪ್ರಧಾನಿ ನರೇಂದ್ರ ಮೋದಿಯವರ 9 ವರ್ಷಗಳ ಅಭಿವೃದ್ಧಿ ಯೋಜನೆಯ ಬಗ್ಗೆ ಒಂದು ತಿಂಗಳ ಕಾಲ ಜಾಗೃತಿ ಮೂಡಿಸುತ್ತೇವೆ. ರಾಜ್ಯದ ಪ್ರಮುಖ ನಾಯಕರು ಅಂದಿನ ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ ಎಂದರು.

ಮೈಸೂರಿಗೆ ನರೇಂದ್ರ ಮೋದಿ ಅವರು ರೈಲ್ವೆ ವಿಮಾನ, ರಸ್ತೆ ನಿರ್ಮಾಣ ಕೊಡುಗೆ ನೀಡಿದ್ದಾರೆ. ಹತ್ತು ಸಾವಿರ ಕೋಟಿ ನೀಡಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ನಿರ್ಮಾಣ ಮಾಡಿಕೊಟ್ಟಿದ್ದಾರೆ. ವಿಮಾನ ನಿಲ್ದಾಣದಲ್ಲಿ ರನ್ ವೇ ವಿಸ್ತರಣೆಗೂ ಒಂದು ಸಾವಿರ ಕೋಟಿ ನೀಡಿದ್ದಾರೆ. ಈಗ ಮೈಸೂರು–ಕುಶಾಲನಗರ ರಸ್ತೆ ನಿರ್ಮಾಣ ಮಾಡುತ್ತೇವೆ. ರಿಂಗ್ ರಸ್ತೆಯಲ್ಲಿ ವಿದ್ಯುತ್ ವ್ಯವಸ್ಥೆ ಮಾಡಿದ್ದೇವೆ ಎಂದು ತಿಳಿಸಿದರು.

ಜಲಜೀವನ್ ಯೋಜನೆ ಮೂಲಕ ಕುಡಿಯುವ ನೀರು ಒದಗಿಸುತ್ತಿದ್ದೇವೆ. ಅಮೃತ್–2 ಮೂಲಕ ಮೈಸೂರು ನಗರದ ವಿವಿಧ ಕಡೆಗಳಿಗೆ ನೀರು ತರುತ್ತಿದ್ದೇವೆ. ಇಷ್ಟೆಲ್ಲಾ ಕೊಡುಗೆಗಳನ್ನು ಮೋದಿ ಮೈಸೂರಿಗೆ ನೀಡಿದ್ದಾರೆ. ಮುಂದಿನ ಲೋಕಸಭಾ ಚುನಾವಣೆಯಲ್ಲೂ ಕ್ಷೇತ್ರದ ಜನ ನಮಗೆ ಮತ್ತೆ ಆಶೀರ್ವಾದ ಮಾಡಲಿದ್ದಾರೆ.

ಮೈಸೂರು ಪ್ಯಾರಿಸ್‌ನಂತೆ ಪ್ರವಾಸಿಗರ ಆಕರ್ಷಿಸುವಂತೆ ಮಾಡುತ್ತೇವೆ ಎಂದು ಮೋದಿ ಹೇಳಿದ್ದರು. ಈ ನಿಟ್ಟಿನಲ್ಲಿ ಹಲವು ಕಾರ್ಯಕ್ರಮ ಅನುಷ್ಠಾನ ಮಾಡಿದ್ದೇವೆ. ಮೈಸೂರು– ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ ಯೋಜನೆಗೆ 8,448 ಕೋಟಿ ನೀಡಲಾಗಿತ್ತು. 510 ಕೋಟಿ ವೆಚ್ಚದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲಾಗಿದೆ. ಈ ಮೈಸೂರು–ನಂಜನಗೂಡು ಹೆದ್ದಾರಿಯ ಆರು ಪಥ ಮಾಡುತ್ತೇವೆ ಎಂದು ಪ್ರತಾಪ್ ಸಿಂಹ ವಿವರಿಸಿದರು. ಬೃಹತ್ ಮೈಸೂರು ನಗರ ಪಾಲಿಕೆ ಮಾಡಿ, ಮೆಟ್ರೋ ಹಾಗೂ ಮೊನೊ ರೈಲು ತರುವ ಚಿಂತನೆ ಇದೆ. ಮೈಸೂರಿನಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಇನ್ನೇನು ಉದ್ಘಾಟನೆ ಮಾಡುತ್ತೇವೆ. ಮೈಸೂರಿನಲ್ಲಿ 50 ಕೋಟಿ ರೂಪಾಯಿಯಲ್ಲಿ ಕಿದ್ವಾಯಿ ಘಟಕ ನಿರ್ಮಾಣ ಆಗುತ್ತದೆ. ಇಷ್ಟೆಲ್ಲಾ ಹೆಮ್ಮೆಯ ಯೋಜನೆಯನ್ನು ನರೇಂದ್ರ ಮೋದಿ ಅವರು ಮೈಸೂರಿಗೆ ನೀಡಿದ್ದಾರೆ ಎಂದು ಹೇಳಿದರು. ಮೈಸೂರು ಮಹಾರಾಜರು ಅಭಿವೃದ್ಧಿ ಹರಿಕಾರರು. ಅವರ ಕಾಲದಲ್ಲಿ ಮೈಸೂರಿನ ಅಭಿವೃದ್ಧಿ ಆಯಿತು. ಅದು ಬಿಟ್ಟರೆ ಈಗ ನರೇಂದ್ರ ಮೋದಿ ಅವರ ಅವಧಿಯಲ್ಲಿ ಅದೇ ಮಾದರಿ ಮೈಸೂರು ಅಭಿವೃದ್ಧಿ ಕಾರ್ಯಗಳಾಗಿವೆ ಎಂದು ಪ್ರತಾಪ್ ಸಿಂಹ ತಿಳಿಸಿದರು. ಕಾಂಗ್ರೆಸ್ ಸರ್ಕಾರ ಬಂದಾಗ ರಿಂಗ್ ರಸ್ತೆಗೆ ಅನುದಾನ ಸ್ಥಗಿತಗೊಳಿಸಲಾಗಿತ್ತು. ಗುತ್ತಿಗೆದಾರರಿಗೆ ಹಣ ನೀಡುತ್ತಿರಲಿಲ್ಲ. ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ಅಭಿವೃದ್ಧಿ ಕುಂಠಿತವಾಗಿತ್ತು ಎಂದರು.

ತಂತ್ರಗಾರಿಕೆ ಪ್ರಬುದ್ಧತೆ ನನಗೆ ಬೇಕಿಲ್ಲ

ರಾಜಕೀಯ ತಂತ್ರಗಾರಿಕೆಯ ಪ್ರಬುದ್ಧತೆ ನನಗೆ ಬೇಕಿಲ್ಲ ಎಂದು ಪ್ರತಾಪ್‌ಸಿಂಹ ಸಿದ್ದರಾಮಯ್ಯಗೆ ಟಾಂಗ್ ಕೊಟ್ಟಿದ್ದಾರೆ. ಕೆಂಪೇಗೌಡರಿಂದ ರಾಜಕೀಯಕ್ಕೆ ಬಂದ ಸಿದ್ದರಾಮಯ್ಯ, ತಮ್ಮನ್ನು ಎರಡು ಬಾರಿ ಉಪ ಮುಖ್ಯಮಂತ್ರಿ ಮಾಡಿ, ರಾಜಕೀಯ ಏಳಿಗೆಗೆ ಕಾರಣರಾದ ದೇವೇಗೌಡರನ್ನು ಎಲ್ಲಿಯೂ ನೆನಪು ಮಾಡಿಕೊಳ್ಳುವುದಿಲ್ಲ. ಅವರ ಬಗ್ಗೆ ಉಪಕಾರ ಸ್ಮರಣೆ ಇರಲಿ, ಏಕ ವಚನದಲ್ಲಿ ಮಾತನಾಡುವ ದುರಂಹಕಾರದ ಪರಮಾವಧಿಯ ಪ್ರಬುದ್ಧತೆ ನನಗೆ ಬೇಕಿಲ್ಲ ಎಂದು ಸಿದ್ದರಾಮಯ್ಯಗೆ ತಿರುಗೇಟು ಕೊಟ್ಟರು. ತಮ್ಮ ರಾಜಕೀಯ ಲಾಭಕ್ಕಾಗಿ ಕೊರಟಗೆರೆಯಲ್ಲಿ ಡಾ.ಪರಮೇಶ್ವರ್ ವಿರೋಧಿ ಯೊಬ್ಬನನ್ನು ಛೂ ಬಿಟ್ಟು, ಡಾ.ಪರಮೇಶ್ವರ್ ಅವರನ್ನೇ ಸೋಲಿಸುವಂತಹ ಕೆಟ್ಟ ರಾಜಕೀಯ ತಂತ್ರಗಾರಿಕೆಯ ಪ್ರಬುದ್ಧತೆ ನನಗೆ ಬೇಕಿಲ್ಲ ಎಂದು ಹರಿಹಾಯ್ದರು. ತಮ್ಮ ಮಗ ಹಾಗೂ ಮೊಮ್ಮಗ ನನ್ನು ರಾಜಕೀಯಕ್ಕೆ ತರುವ ಸ್ವಾರ್ಥ ರಾಜಕಾರಣದ ಪ್ರಬುದ್ಧತೆ, ಅಡ್ಜೆಸ್ಟ್‌ಮೆಂಟ್ ಪಾಲಿಟಿಕ್ಸ್ ಪ್ರಬುದ್ಧತೆ, ಮತ್ತೊಬ್ಬರ ವಿಚಾರದಲ್ಲಿ

ತುಚ್ಛವಾಗಿ ಮಾತನಾಡುವ ಪ್ರಬುದ್ಧತೆ ನನಗೆ ಬೇಕಿಲ್ಲ ಎಂದು ಕೌಂಟರ್ ಮೇಲೆ ಕೌಂಟರ್ ಕೊಟ್ಟು ಕುಟುಕಿದರು. ನಾನು ಅವರನ್ನು ಕೆಲವು ಪ್ರಶ್ನೆ ಕೇಳಿದಾಗ ಚೈಲ್ಡ್, ಎಳಸು, ಪ್ರಬುದ್ಧತೆ ಇಲ್ಲದವ ಎಂದು ಯಾವಾಗಲೂ ಅಂತೀರಾ. ಆದರೆ ನನಗೆ ಬೇಜಾರು ಇಲ್ಲ ಎಂದು ಪ್ರತಾಪ್ ಸಿಂಹ ಹೇಳಿದರು.

ತಾವು ಬಹಳ ಬುದ್ಧಿವಂತ ಅಂತಾರೆ, 13 ಬಾರಿ ಬಜೆಟ್ ಮಂಡಿಸಿದ್ದೇನೆ ಅಂತಾರೆ. ಆದರೆ 59 ಸಾವಿರ ಕೋಟಿ ರೂಪಾಯಿಯನ್ನು ಕ್ರೋಢೀಕರಿಸುವ ಬಗ್ಗೆ ಈ ತನಕ ಹೇಳಿಲ್ಲ. ಅಕ್ಕಿ ಕೊಡುತ್ತಿಲ್ಲ ಅಂತ ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿ ತೋರಿಸುತ್ತಿದ್ದೀರಾ. ಗ್ಯಾರಂಟಿ ಸ್ಕೀಂನಲ್ಲಿ ಅಕ್ಕಿ ಕೊಡುವ ಘೋಷಣೆ ಮಾಡುವ ವೇಳೆ ಪ್ರಧಾನಮಂತ್ರಿ ನರೇಂದ್ರ ಮೋದಿ ಕೇಳಿ ಘೋಷಣೆ ಮಾಡಿದ್ರಾ ಎಂದು ಪ್ರತಾಪ್ ಸಿಂಹ, ಸಿದ್ದರಾಮಯ್ಯ ಅವರಿಗೆ ನೇರವಾಗಿ ಪ್ರಶ್ನಿಸಿದ್ದಾರೆ.

ಬಿಜೆಪಿ ಸರ್ಕಾರ ಪಠ್ಯ ಪುಸ್ತಕದಲ್ಲಿ ಸೇರಿಸಿದ್ದ ವಿಚಾರಗಳಿಗೆ ಕೊಕ್ ಕೊಡುತ್ತಿದ್ದೀರಾ. ಕ್ಷಮಾಪಣೆ ಪತ್ರ ಬರೆದುಕೊಟ್ಟು ನವಾಬ್ ಜೈಲಿನ ಕಡೆ ತಿರುಗಿಯೂ ನೋಡುವುದಿಲ್ಲ ಎಂದು ಬ್ರಿಟಿಷರ ಮುಂದೆ ಮಂಡಿಯೂರಿದ ನೆಹರು ಅವರ ವಿಚಾರಗಳನ್ನು ಪಠ್ಯದಲ್ಲಿ ಸೇರಿಸುತ್ತಿದ್ದೀರಾ. ಅದೇ ಸ್ವಾತಂತ್ರ್ಯ ಹೋರಾಟ ಸಂಗ್ರಾಮದಲ್ಲಿ ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಹೋರಾಟ ಮಾಡಿದ ಸಾವರ್ಕರ್ ವಿಚಾರಗಳನ್ನು ಪಠ್ಯದಲ್ಲಿ ತೆಗೆಯುತ್ತಿದ್ದೀರಾ. ರಾಜ್ಯದ ಜನರಿಗೆ ಹಾಗೂ ಇತಿಹಾಸಕ್ಕೆ ದೋಖಾ ಮಾಡುತ್ತಿದ್ದೀರಾ ಎಂದು ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಪ್ರತಾಪ್ ಸಿಂಹ ಹರಿಹಾಯ್ದರು.

ಐಎಎಸ್ ಅಧಿಕಾರಿಗಳಾದ ರಶ್ಮಿ ಮಹೇಶ್ ಮೇಲೆ ಹಲ್ಲೆ, ಕಲಬುರಗಿಯಲ್ಲಿ ಪೊಲೀಸ್ ಅಧಿಕಾರಿ ಮಲ್ಲಿಕಾರ್ಜುನ ಬಂಡೆ ಹತ್ಯೆ, ಎಂ.ಕೆ.ಗಣಪತಿ ಆತ್ಮಹತ್ಯೆ ಸೇರಿದಂತೆ ಹಿಂದಿನ ಸಿದ್ದರಾಮಯ್ಯರ ಸರ್ಕಾರದಲ್ಲಿ ಸರಣಿ ಅಪರಾಧ ಕೃತ್ಯಗಳು ನಡೆದವು. ಈಗ ಕರ್ನಾಟಕದ ಜನತೆ ಅಂತಹುದೆ ಮತ್ತಷ್ಟು ಘಟನೆಗಳನ್ನು ನೋಡಬೇಕಾಗುತ್ತದೆ ಎಂದು ಪ್ರತಾಪ್ ಸಿಂಹ ಎಚ್ಚರಿಸಿದರು.

ಡಿಕೆಶಿಗೆ ಬಹುಪರಾಕ್ ಹಾಕಿದ ಪ್ರತಾಪ್ ಸಿಂಹ

ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದರು. ಆದರೆ, ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗದಂತೆ ತಡೆದರು ಎಂದು ಹೇಳಿದರು. ಅಷ್ಟೇ ಅಲ್ಲದೆ ಡಿ.ಕೆ.ಶಿವಕುಮಾರ್ ವಿರುದ್ಧ ಎಂ.ಬಿ.ಪಾಟೀಲ್ ಛೂ ಬಿಟ್ಟರು. ಎಂ.ಬಿ.ಪಾಟೀಲ್ ಬೆನ್ನ ಮೇಲೆ ಗನ್ ಇಟ್ಟು ಡಿಕೆಶಿ ಮೇಲೆ ಸಿದ್ದರಾಮಯ್ಯ ಗುಂಡು ಹಾರಿಸುತ್ತಿದ್ದಾರೆ ಎಂದು ದೂರಿದರು.

ಜೂ.20ರಂದು ರಾಜ್ಯಾದ್ಯಂತ ಕಾಂಗ್ರೆಸ್ ಪ್ರತಿಭಟನೆ

ಪ್ರತಿಭಟನೆ ಮಾಡಿ ಜನರಲ್ಲಿ ಅರಿವು ಮೂಡಿಸುವುದಾಗಿ ಹೇಳಿದರು. ಭಾರತೀಯ ಆಹಾರ ನಿಗಮ ಅಕ್ಕಿ ನೀಡಲು ನಿರಾ ಕರಿಸಿರುವುದು ಬಿಜೆಪಿಯ ದ್ವೇಷ ರಾಜಕಾರಣ ಹಾಗೂ ಬಡವರ ವಿರೋಧಿ ನೀತಿಗೆ ಸಾಕ್ಷಿ. ಕಾಂಗ್ರೆಸ್ ಸರ್ಕಾರವು ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ. ಅಕ್ಕಿ ನೀಡಲು ಬದ್ಧವಾಗಿದೆ. ನಮ್ಮ ಐದು ಗ್ಯಾರಂಟಿಗಳ ಜಾರಿ ಬಗ್ಗೆ ವಿರೋಧ ಪಕ್ಷದವರು ಅನೇಕ ಟೀಕೆ ಮಾಡುತ್ತಾ ಬಂದಿದ್ದಾರೆ ಎಂದರು. ಸರ್ಕಾರ ಬಂದ ಮೊದಲ ದಿನವೇ ಮೊದಲ ಆದೇಶ ಹೊರಡಿಸಿ ನಮ್ಮ ಬದ್ಧತೆ ಪ್ರದರ್ಶಿಸಿದ್ದೇವೆ. ಎರಡನೇ ಸಂಪುಟ ಸಭೆಯಲ್ಲಿ ಈ ಯೋಜನೆ ಜಾರಿಗೆ ಸಮಯ ನಿರ್ಧರಿಸಿದ್ದೇವೆ. ವಿರೋಧ ಪಕ್ಷಗಳ ಟೀಕೆಗೆ ನಾವು ಉತ್ತರ ನೀಡುವುದಿಲ್ಲ. ಟೀಕೆ ಸಾಯುತ್ತವೆ, ಕೆಲಸ ಉಳಿಯುತ್ತವೆ ಎಂಬ ಮಾತನ್ನು ನಾವು ನಂಬಿದ್ದೇವೆ ಎಂದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಚುನಾವಣೆ ಪ್ರಚಾರದ ವೇಳೆ ಬಿಜೆಪಿ ಸೋತರೆ ಕೇಂದ್ರ ಅನುದಾನ ಸ್ಥಗಿತ ಎಂದು ಹೇಳಿದ್ದರು. ಈಗ ಕರ್ನಾಟಕ ರಾಜ್ಯಕ್ಕೆ ಅಕ್ಕಿ ಖರೀದಿಗೆ ಅವಕಾಶ ತಪ್ಪಿಸುವ ಮೂಲಕ ತಮ್ಮ ಮಾತು ಉಳಿಸಿಕೊಂಡಿದ್ದಾರೆ. ಒಕ್ಕೂಟ ವ್ಯವಸ್ಥೆಯಲ್ಲಿ ಕೆಲಸ ಮಾಡುವುದಾಗಿ ಪ್ರಧಾನಮಂತ್ರಿಗಳು ಹೇಳಿಕೆ ನೀಡಿದ್ದರು. ಆದರೆ ಬಿಜೆಪಿ ಅಧ್ಯಕ್ಷರು ಮತದಾರರನ್ನು ಬೆದರಿಸಿದ್ದರು. ರಾಜ್ಯದಲ್ಲಿ ಯಾರೂ ಹಸಿವಿನಿಂದ ಇರಬಾರದು ಎಂಬ ಉದ್ದೇಶದಿಂದ ಅನ್ನಭಾಗ್ಯ ಯೋಜನೆ ಮಾಡಿದ್ದು, ಮುಂದಿನ ತಿಂಗಳಿಂದ ಯೋಜನೆ ಜಾರಿಗೆ ತೀರ್ಮಾನ ಮಾಡಿದ್ದೆವು. ಇದಕ್ಕಾಗಿ ಭಾರತೀಯ ಆಹಾರ ನಿಗಮಕ್ಕೆ ಅಕ್ಕಿ ಖರೀದಿಗೆ ಮನವಿ ಮಾಡಿದ್ದೆವು. ಪ್ರಾಧಿಕಾರ ಕೂಡ ಜೂನ್ 12 ರಂದು ಜುಲೈ ತಿಂಗಳಲ್ಲಿ ಇ ಹರಾಜು ಮೂಲಕ ಅಕ್ಕಿ ನೀಡುವುದಾಗಿ ಅನುಮತಿ ನೀಡಿತ್ತು. 2,08,425.750 ಮೆಟ್ರಿಕ್ ಟನ್ ಅಕ್ಕಿ ಖರೀದಿಗೆ ಅನುಮತಿ ನೀಡುವುದಾಗಿ ಪ್ರಾಧಿಕಾರ ಪತ್ರ ಬರೆದಿತ್ತು. ಇದಾದ ಮರುದಿನ ಅಂದರೆ ಜೂನ್ 13 ರಂದು, ಗೋಧಿ ಮತ್ತು ಅಕ್ಕಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರುವುದನ್ನು ತಡೆಯಲಾಗಿದೆ ಎಂದು ತಿಳಿಸಿದೆ.

ಬಿಜೆಪಿಯ ದ್ವೇಷದ ರಾಜಕಾರಣಕ್ಕೆ ಇದು ಸಾಕ್ಷಿ. ಕಾಂಗ್ರೆಸ್ ಪಕ್ಷಕ್ಕೆ ಜನ ಹಾಕಿರುವ ಮತಗಳಿಗೆ ಬಿಜೆಪಿಯ ಭ್ರಷ್ಟ ಸರ್ಕಾರ ಧಿಕ್ಕಾರ ಹಾಕಿದೆ. ಬಡವರಿಗೆ ದ್ರೋಹ ಮಾಡುತ್ತಿದೆ. ಬಡವರ ಹೊಟ್ಟೆ ಮೇಲೆ ಬರೆ ಎಳೆದಿದೆ. ಬಿಜೆಪಿ ಎಂದರೆ ಬಡವರಿಗೆ ದ್ರೋಹ ಬಗೆಯುವ ಪಕ್ಷವಾಗಿದೆ. ಕೇಂದ್ರದ ಈ ದ್ರೋಹ ಖಂಡಿಸಿ ಬರುವ ಮಂಗಳವಾರ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪಕ್ಷದ ವತಿಯಿಂದ ಪ್ರತಿಭಟನೆ ಮಾಡಲಾಗುವುದು. ಈ ಪ್ರತಿಭಟನೆಯಲ್ಲಿ ಆಯಾ ಜಿಲ್ಲೆಯ ಶಾಸಕರು ಭಾಗವಹಿಸಬೇಕು.

ಕೇಂದ್ರ ಸರಕಾರ ನೀಡದಿದ್ದರೂ ನಾವು 10 ಕೆ.ಜಿ ಅಕ್ಕಿ ನೀಡುತ್ತೇವೆ. ಅನ್ನ ಭಾಗ್ಯ ಯೋಜನೆ ಜಾರಿ ಆಗಲಿದೆ. ಮುಖ್ಯಮಂತ್ರಿಗಳು, ಸಚಿವರು ಬೇರೆ ರಾಜ್ಯಗಳ ಜತೆ ಚರ್ಚೆ ಮಾಡುತ್ತಿದ್ದೇವೆ. ನಾವು ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿ ಮಾಡಲು ಸಾಧ್ಯವಿಲ್ಲ ಎಂದೇನಿಲ್ಲ. ಇದು ಒಕ್ಕೂಟ ವ್ಯವಸ್ಥೆ. ದೇಶದಲ್ಲಿ ಈಗಾಗಲೇ ಇರುವ ವ್ಯವಸ್ಥೆ ಹಾಗೂ ಪ್ರಕ್ರಿಯೆ ಮೂಲಕ ಅಕ್ಕಿ ಖರೀದಿಗೆ ಮನವಿ ಮಾಡಿದ್ದೆವು.

ಪಾರದರ್ಶಕ ವ್ಯವಸ್ಥೆಯಲ್ಲಿ ಖರೀದಿಗೆ ನಾವು ಎಫ್‌ಸಿಐಗೆ ಕೇಳಿದ್ದೇವೆ. ಕೇಂದ್ರದ ಬಳಿ 7 ಲಕ್ಷ ಮೆಟ್ರಿಕ್ ಟನ್ ದಾಸ್ತಾನು ಇದೆ. ನಾವು ಕೇವಲ 2.85 ಲಕ್ಷ ಮೆಟ್ರಿಕ್ ಟನ್ ಖರೀದಿಗೆ ಕೇಳಿದ್ದೆವು. ದಾಸ್ತಾನು ಇದ್ದರೂ ಅಕ್ಕಿ ನೀಡಲು ನಿರಾಕರಿಸಿದ್ದಾರೆ. ಕೇಂದ್ರದ ಈ ಧೋರಣೆ ಪ್ರತಿಭಟಿಸಿ, ಜನರಿಗೆ ಅರಿವು ಮೂಡಿಸಿ ಕೇಂದ್ರದ ಮೇಲೆ ಒತ್ತಡ ಹೇರಬೇಕಿದೆ. ಎಫ್‌ಸಿಐ ನೀತಿ ಬದಲಾಗಿದ್ದು, ಈ ಬಗ್ಗೆ ನಮ್ಮ ಅಧಿಕಾರಿಗಳಿಗೆ ಗೊತ್ತಿಲ್ಲದೇ ಅನುಮತಿ ನೀಡಿ ಪತ್ರ ಬರೆದಿದ್ದಾರೆ ಎಂಬ ಎಫ್‌ಸಿಐ ಅಧಿಕಾರಿಗಳ ಸ್ಪಷ್ಟನೆ ಬಗ್ಗೆ ಕೇಳಿದಾಗ, ಅಲ್ಲಿಗೆ ಭಾರತ ಆಹಾರ ಪ್ರಾಧಿಕಾರಕ್ಕೆ ತಮ್ಮ ಅಧಿಕಾರಿಗಳ ಮೇಲೆ ನಿಯಂತ್ರಣವಿಲ್ಲ ಎಂಬುದು ಸ್ಪಷ್ಟವಾಗುತ್ತದೆಯಲ್ಲವೇ ಎಂದರು.

ಸರ್ಕಾರದ ಗ್ಯಾರಂಟಿ ಯೋಜನೆಗೆ ಆಧಾರ್ ಕಡ್ಡಾಯ: ಅಪ್ಡೇಟ್‌ಗಾಗಿ ಮುಗಿ ಬಿದ್ದ ಜನ

ಮೈಸೂರು,ಜೂ.16(ಎಂಟಿವೈ)– ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಸೌಲಭ್ಯ ಪಡೆದುಕೊಳ್ಳಲು ಮೊಬೈಲ್ ಸಂಖ್ಯೆ ನೋಂದಣಿ ಮಾಡಿರುವ ಆಧಾರ್ ಕಾರ್ಡ್ ಹಾಜರುಪಡಿಸಬೇಕಾಗಿರುವುದರಿಂದ ಮೈಸೂರಲ್ಲಿ ಆಧಾರ್ ಕಾರ್ಡ್ ಅಪ್ಡೇಟ್‌ಗಾಗಿ ಜನ ಮುಗಿಬೀಳುತ್ತಿದ್ದಾರೆ.

ಹತ್ತು ವರ್ಷದ ಹಿಂದೆ ಆಧಾರ್ ಕಾರ್ಡ್ ಮಾಡಿಸಿಕೊಂಡಿರುವವರು ನವೀಕರಿಸಿಕೊಳ್ಳುವುದು ಕಡ್ಡಾಯವೆಂದು ಕಳೆದ ಆಗಸ್ಟ್‌ನಲ್ಲಿಯೇ ಸುತ್ತೋಲೆ ಹೊರಡಿಸಲಾಗಿತ್ತು. ಆಧಾರ್ ಕಾರ್ಡ್ ಹೊಂದಿರುವವರು ಕಡ್ಡಾಯವಾಗಿ ಮೊಬೈಲ್ ನಂಬರ್ ನೋಂದಣಿ ಮಾಡಿಸುವುದು ಕಡ್ಡಾಯಗೊಳಿಸಲಾಗಿತ್ತು. ಇದರಿಂದ ಕೆಲವರು ಆಧಾರ್ ಸೇವಾ ಕೇಂದ್ರಕ್ಕೆ ಬಂದು ಅಪ್ಡೇಟ್ ಮಾಡಿಸಿಕೊಳ್ಳುತ್ತಿದ್ದರು. ಆದರೆ, ಇದೀಗ ಗ್ಯಾರಂಟಿ ಯೋಜನೆಗಳ ಸೌಲಭ್ಯ ಪಡೆದುಕೊಳ್ಳುವುದಕ್ಕಾಗಿ ಆಧಾರ್ ಕಾರ್ಡ್ ಅಪ್ಡೇಟ್ ಮಾಡಿಸಿಕೊಳ್ಳಲೇಬೇಕಾಗಿರುವುದರಿಂದ ಮೈಸೂರಿನ ಆಧಾರ್ ಕೇಂದ್ರಗಳು ತುಂಬಿ ತುಳುಕುತ್ತಿದೆ.

ದಶಕಕ್ಕೂ ಮುನ್ನ ಮಾಡಿಸಿಕೊಂಡಿರುವ ಆಧಾರ್ ಕಾರ್ಡ್‌ನಲ್ಲಿ ಅಪೂರ್ಣ ಮಾಹಿತಿ ನಮೂದಾಗಿದೆ. ಕಾಲ ಕಾಲಕ್ಕೆ ನವೀಕರಿಸಿಕೊಂಡು ಮಾಹಿತಿಯನ್ನು ಭರ್ತಿ ಮಾಡಿಸುವಂತೆ ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರ (ಯುಐಡಿಐ) ಸೂಚನೆ ನೀಡಿತ್ತು. 2009ರಿಂದ 2010ರವರೆಗೆ ಆಧಾರ್ ಕಾರ್ಡ್ ಮಾಡಿಸಿಕೊಂಡಿರುವವರು ಕಡ್ಡಾಯವಾಗಿ ಮೊಬೈಲ್ ನಂಬರ್ ಲಿಂಕ್ ಮಾಡಿಸಬೇಕಾಗಿದೆ. ಕೆಲವರು ವಿಳಾಸ, ಮೊಬೈಲ್ ನಂಬರ್ ಬದಲಾವಣೆ, ಹುಟ್ಟಿದ ದಿನಾಂಕ ನಮೂದು ಸೇರಿದಂತೆ ಕೆಲವು ತಿದ್ದುಪಡಿ ಮಾಡಿಸಿಕೊಳ್ಳಬೇಕಾಗಿರುವುದರಿಂದ ಇದೀಗ ಆಧಾರ್ ಸೇವಾ ಕೇಂದ್ರದಲ್ಲಿ ಜನಜಂಗುಳಿ ಹೆಚ್ಚಾಗಿದೆ.

ಮೈಸೂರಲ್ಲಿ ಎರಡು ಆಧಾರ್ ಸೇವಾ ಕೇಂದ್ರವಿದೆ. ಕೆಲವು ಬ್ರೌಸಿಂಗ್ ಸೆಂಟರ್, ಸೇವಾ ಕೇಂದ್ರಗಳಲ್ಲೂ ಆಧಾರ್ ಕಾರ್ಡ್ ಅಪ್ಡೇಟ್ ಮಾಡಲಾಗುತ್ತಿದೆ. ಸರಸ್ವತಿಪುರಂ ಹಾಗೂ ವಿಜಯನಗರದಲ್ಲಿರುವ ಆಧಾರ್ ಸೇವಾ ಕೇಂದ್ರದಲ್ಲಿ ಅಪ್ಡೇಟ್ ಮಾಡಿಸಿಕೊಂಡರೆ, 15 ದಿನದೊಳಗೆ ಆಧಾರ್ ಕಾರ್ಡ್ ಕೈ ಸೇರಲಿದೆ ಇದರಿಂದಾಗಿ ಈ ಎರಡು ಸೇವಾ ಕೇಂದ್ರದಲ್ಲಿ ಆಧಾರ್ ಕಾರ್ಡ್ ನವೀಕರಿಸಲು ಮುಂದಾಗಿದ್ದಾರೆ.

ಸರಸ್ವತಿಪುರಂ ಕೇಂದ್ರ: ಮೈಸೂರಿನ ಸರಸ್ವತಿಪುರಂನಲ್ಲಿರುವ ಆಧಾರ್ ಕೇಂದ್ರದಲ್ಲಿ ಕಳೆದ 15 ದಿನದ ಹಿಂದೆ ದಿನಕ್ಕೆ 150–200 ಮಂದಿಯಷ್ಟೇ ಆಧಾರ್ ಕಾರ್ಡ್ ನವೀಕರಿಸಲು ಆಗಮಿಸುತ್ತಿದ್ದರು. ಆದರೆ, ಗ್ಯಾರಂಟಿ ಯೋಜನೆ ಘೋಷಣೆಯಾಗುತ್ತಿದ್ದಂತೆಯೇ ಆಧಾರ್ ಕಾರ್ಡ್ ನವೀಕರಿಸಲು ದಿನಕ್ಕೆ ಸಾವಿರಕ್ಕೂ ಹೆಚ್ಚು ಮಂದಿ ಆಗಮಿಸುತ್ತಿದ್ದಾರೆ. ಆದರೆ, ಎಲ್ಲರಿಗೂ ಒಂದೇ ದಿನ ನವೀಕರಣ ಮಾಡಲು ಸಾಧ್ಯವಾಗದೇ, ದಿನಕ್ಕೆ 800 ಮಂದಿಗೆ ಮಾತ್ರ ಕಾರ್ಡ್ ಮಾಡಿಕೊಡಲಾಗುತ್ತಿದೆ. ಈ ಕೇಂದ್ರದಲ್ಲಿ 7 ಯೂನಿಟ್‌ಗಳಿದ್ದು (ಟೇಬಲ್), ಪ್ರತಿಯೊಂದು ಟೇಬಲ್‌ನಲ್ಲೂ ಆಧಾರ್ ಕಾರ್ಡ್ ನವೀಕರಿಸಲಾಗುತ್ತಿದೆ. ಪ್ರತಿದಿನ ಬೆಳಗ್ಗೆ 8ರಿಂದ ಸಂಜೆ 6 ಗಂಟೆವರೆಗೂ ಆಧಾರ್ ಕಾರ್ಡ್ ನವೀಕರಿಸುವ ಕಾರ್ಯದಲ್ಲಿ ಸಿಬ್ಬಂದಿಗಳು ಮಗ್ನರಾಗಿದ್ದಾರೆ. ಈ ಕೇಂದ್ರದಲ್ಲಿ ಆನ್‌ಲೈನ್, ಆಫ್‌ಲೈನ್ ಮೂಲಕ ಜನರಿಗೆ ಆಧಾರ್ ಕಾರ್ಡ್ ನವೀಕರಿಸಲಾಗುತ್ತಿದೆ. ಆನ್‌ಲೈನ್‌ನಲ್ಲಿ ಹೆಸರು ನೋಂದಾಯಿಸಿದವರಿಗೆ ಹಾಗೂ ನೇರವಾಗಿ ಬಂದವರಿಗೆ ಪ್ರತ್ಯೇಕ ಸಾಲಿನಲ್ಲಿ ಕೇಂದ್ರದ ಒಳಗೆ ಬರಲು ವ್ಯವಸ್ಥೆ ಮಾಡಲಾಗಿದ್ದು, ಸುಸಜ್ಜಿತ ವ್ಯವಸ್ಥೆ ಮೂಲಕ ಗೊಂದಲಕ್ಕೆ ಆಸ್ಪದೆ ನೀಡದೆ ಆಧಾರ್ ನವೀಕರಣ ಮಾಡಿಕೊಡಲಾಗುತ್ತಿದೆ.

ವಿಜಯನಗರ: ಮೈಸೂರಿನ ವಿಜಯನಗರದ ಕಾಳಿದಾಸ ರಸ್ತೆಯಲ್ಲಿರುವ ಆಧಾರ್ ಸೇವಾ ಕೇಂದ್ರದಲ್ಲೂ ಜನಜಂಗುಳಿ ಕಂಡುಬಂದಿದೆ. ಗೃಹಲಕ್ಷ್ಮೀ ಯೋಜನೆಯಡಿ ಮಹಿಳೆಯರಿಗೆ ಮಾಸಿಕ ಎರಡು ಸಾವಿರ ರೂ. ನೀಡುವ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಅರ್ಜಿ ಸಲ್ಲಿಸುವುದಕ್ಕೆ ಆಧಾರ್ ಕಾರ್ಡ್ ಅಗತ್ಯವಾಗಿರುವುದರಿಂದ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಆಧಾರ್ ಸೇವಾ ಕೇಂದ್ರಕ್ಕೆ ಆಗಮಿಸುತ್ತಿದ್ದಾರೆ. ಈ ಕೇಂದ್ರದಲ್ಲೂ 7 ಟೇಬಲ್‌ಗಳಿದ್ದು, ದಿನಕ್ಕೆ 600 ರಿಂದ 700 ಮಂದಿಗೆ ಆಧಾರ್ ಕಾರ್ಡ್ ನವೀಕರಿಸಲಾಗುತ್ತಿದೆ. ಈ ಕೇಂದ್ರದಲ್ಲಿ ಆನ್‌ಲೈನ್ ವ್ಯವಸ್ಥೆ ಇಲ್ಲದ ಕಾರಣ ಆಫ್‌ಲೈನ್ ವ್ಯವಸ್ಥೆಯಲ್ಲೇ ಮೊದಲು ಬಂದವರಿಗೆ ಆದ್ಯತೆ ನೀಡಿ ಸೌಲಭ್ಯ ಒದಗಿಸಲಾಗುತ್ತಿದೆ.



ಅಗತ್ಯ ದಾಖಲೆ ತರಬೇಕು

ಕೆಲವರು ಆಧಾರ್ ಕಾರ್ಡ್ ನವೀಕರಿಸಲು ಅಗತ್ಯ ದಾಖಲೆ ತರದೇ ಬರುತ್ತಿದ್ದಾರೆ. ಇದರಿಂದ ಅಪ್ಡೇಟ್ ಮಾಡಿಸಲು ಆಗದೇ ವಾಪಸಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಆಧಾರ್ ಸೇವಾ ಕೇಂದ್ರಕ್ಕೆ ಬರುವಾಗ ಅಗತ್ಯ ದಾಖಲೆ ತರಬೇಕು. ಹುಟ್ಟಿದ ದಿನಾಂಕ ನಮೂದು ಮಾಡಬೇಕಾದರೆ ಕಡ್ಡಾಯವಾಗಿ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಅಥವಾ ಜನನ ಪ್ರಮಾಣ ಪತ್ರ, ಡಾಕ್ಯುಮೆಂಟ್ ಅಪ್ಡೇಟ್‌ಗೆ ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, 18 ವರ್ಷದೊಳಗಿನವರ ಆಧಾರ್ ಕಾರ್ಡ್‌ಗಾಗಿ ಜನನ ಪ್ರಮಾಣ ಪತ್ರ, ಪೋಷಕರ ಆಧಾರ್ ಕಾರ್ಡ್, 18 ವರ್ಷ ಮೇಲ್ಪಟ್ಟವರ ಆಧಾರ್ ಕಾರ್ಡ್‌ಗಾಗಿ ಮತದಾರರ ಗುರುತಿನ ಚೀಟಿ, ಚಾಲನ ಪರವಾನಗಿ (ಡಿಎಲ್), ಪೋಷಕರ ಆಧಾರ್ ಕಾರ್ಡ್ ಸೇರಿದಂತೆ ಯಾವುದಾದರೂ ದೃಢೀಕೃತ ದಾಖಲೆಗಳನ್ನು ಹಾಜರುಪಡಿಸಬೇಕು. ಇಲ್ಲದಿದ್ದರೆ, ನವೀಕರಿಸಲು ಸಾಧ್ಯವಾಗುವುದಿಲ್ಲ.

– ಕರ್ನಲ್ ಕೃಷ್ಣಪ್ರಸಾದ್, ಆಧಾರ್ ಸೇವಾ ಕೇಂದ್ರದ ಮುಖ್ಯಸ್ಥರು

ದಿ.ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನ ನವೀಕರಣಗೊಂಡ ಕಟ್ಟಡ ಉದ್ಘಾಟನೆ





ಮೈಸೂರಿನ ಶ್ರೀ ಹರ್ಷ ರಸ್ತೆಯ ದಿ. ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನ ನವೀಕರಣಗೊಂಡ ಕಟ್ಟಡವನ್ನು ಅಧ್ಯಕ್ಷ ಸ್ವರೂಪ, ಉಪಾಧ್ಯಕ್ಷ ಜೆ.ಪ್ರಕಾಶ್ ನೇತೃತ್ವದಲ್ಲಿ ನಿರ್ದೇಶಕರಾದ ಎಸ್.ಬಿ.ಶಿವು, ಎನ್.ಧ್ರುವರಾಜ್, ವಿ.ಮಧು, ಎಂ.ಪುಟ್ಟಸ್ವಾಮಿ, ಪ್ರಸನ್ನ ಎನ್.ಲಕ್ಷ್ಮಣ್, ದಿನೇಶ್ ಎಂ, ವೆಂಕಟಲಿಂಗಯ್ಯ, ಜಯ್‌ಕುಮಾರ್, ಎಸ್.ಸ್ವಾಮಿ, ಎಂ.ಕೆ.ಅಶೋಕ್, ಹೇಮಾ, ಪುಷ್ಪಲತಾ ಹಾಗೂ ಪ್ರಭಾರ ವ್ಯವಸ್ಥಾಪಕ ಹೆಚ್.ರಾಜಶೇಖರ್ ಸಾಮೂಹಿಕವಾಗಿ ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಬಲಚಿತ್ರದಲ್ಲಿ ಬ್ಯಾಂಕ್‌ನ ನಿರ್ದೇಶಕರೆಲ್ಲರನ್ನು ಕಾಣಬಹುದು.

ಮೂಲ ಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಜೂ.16(ಜಿಎ)– ವಿದ್ಯಾರ್ಥಿ ನಿಲಯಗಳಲ್ಲಿ ಮೂಲ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ, ಮೈಸೂರು ವಿಶ್ವ ವಿದ್ಯಾನಿಲಯ ಸಂಶೋಧಕರ ಸಂಘದ ವತಿಯಿಂದ ಮಾನಸ ಗಂಗೋತ್ರಿಯ ಕುವೆಂಪು ಪುತ್ಥಳಿ ಮುಂಭಾಗ ಹಾಗೂ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು ಕ್ರಾಫರ್ಡ್ ಹಾಲ್ ಮುಂಭಾಗ ಶುಕ್ರವಾರ ಪ್ರತಿಭಟನೆ ನಡೆಸಿದರು.

ಯುಜಿ,ಪಿಜಿ,ಪಿಎಚ್‌ಡಿ ಎಲ್ಲಾ ವಿದ್ಯಾರ್ಥಿ ನಿಲಯಗಳಿಗೂ ಶುದ್ಧ ಕುಡಿಯುವ ನೀರಿನ ಘಟಕ, ಸಂಶೋಧನಾ ವಿದ್ಯಾರ್ಥಿ ನಿಲಯಕ್ಕೆ ಸಿ.ಸಿ.ಟಿವಿ ಅಳವಡಿಕೆ ಮಾಡಬೇಕು, ಸಂಶೋಧನಾ ವಿದ್ಯಾರ್ಥಿನಿಲಯಕ್ಕೆ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು. ವೈ ಫೈ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ಎಲ್ಲಾ ವಿದ್ಯಾರ್ಥಿ ನಿಲಯಗಳಿಗೂ ಗುಣಮಟ್ಟದ ಆಹಾರ ನೀಡಬೇಕು. ಮಹಿಳಾ ವಿದ್ಯಾರ್ಥಿ ನಿಲಯಗಳ ರಸ್ತೆಗಳಿಗೆ ಬೀದಿ ದೀಪದ ವ್ಯವಸ್ಥೆ ಮಾಡಬೇಕು. ವಿದ್ಯಾರ್ಥಿ ನಿಲಯಗಳಲ್ಲಿ ಮೂಲ ಸೌಕರ್ಯಗಳ ಸಮಸ್ಯೆಗಳು ಉಂಟಾಗದಂತೆ ನಿಲಯಪಾಲಕರು ಎಚ್ಚರಿಕೆ ವಹಿಸಬೇಕು ಎಂದು ಆಗ್ರಹಿಸಿದರು.

ಸಂಶೋಧನಾ ವಿದ್ಯಾರ್ಥಿಗಳಿಗೆ ಗುಣಮಟ್ಟದ ಲ್ಯಾಪ್‌ಟಾಪ್ ವಿತರಣೆ ಮಾಡಬೇಕು. ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳ ಶಿಷ್ಯವೇತನ ಬಿಡುಗಡೆ ಮಾಡುವಂತೆ ಆದೇಶ ಹೊರಡಿಸಿ, ಸಂಶೋಧನಾ ವಿದ್ಯಾರ್ಥಿಗಳಿಗೆ ಲೇಖನ ಪ್ರಕಟಿಸುವುದಕ್ಕೆ ಆರು ತಿಂಗಳುಗಳ ಕಾಲ ಕಾಲಾವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಕೆಲವೊಂದು ವಿಭಾಗಗಳಲ್ಲಿ ಮುಖ್ಯಸ್ಥರು, ಪ್ರತಿ ತಿಂಗಳು ಶಿಷ್ಯವೇತನಕ್ಕೆ ಸಹಿ ಮಾಡುವುದಕ್ಕೆ ನಿರಾಕರಣೆ ಮಾಡುತ್ತಾರೆ. ಮುಖ್ಯಸ್ಥರಿಗೆ ತಿಳಿಹೇಳಬೇಕು. ಮಹಾರಾಜ ಕಾಲೇಜು ಸಂಶೋಧನಾ ಕೇಂದ್ರಕ್ಕೆ ಮೂಲ ಸೌಕರ್ಯವನ್ನು ಒದಗಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯಗಳಲ್ಲಿ ಮೂಲ ಸೌಕರ್ಯಗಳ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ, ವಿವಿಯ ಕ್ರಾಫರ್ಡ್ ಹಾಲ್ ಮುಂಭಾಗ ಜಮಾಯಿಸಿ ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘದ ಅಧ್ಯಕ್ಷ ಸಿ.ಮಹೇಶ್, ಕಾರ್ಯದರ್ಶಿ ಕೆ.ಆರ್.ರಂಗಸ್ವಾಮಿ, ಖಜಾಂಚಿ ಬಿ.ಎಸ್.ನಂಜುಂಡಸ್ವಾಮಿ, ಕಾರ್ಯಾಧ್ಯಕ್ಷರಾದ ಶಿವಶಂಕರ್, ಕುಮಾರ್ ಕಲ್ಲಹಳ್ಳಿ, ಹೂವಿನ ಸಿದ್ದು, ಅನಿಲ್, ಜಯಚಂದ್ರ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಬ್ರಾಹ್ಮಣರು ಯಹೂದಿಗಳಂತೆ ಎದ್ದು ನಿಲ್ಲಬೇಕಿದೆ: ರೋಹಿತ್ ಚಕ್ರತೀರ್ಥ



ಶಿವಮೊಗ್ಗ, ಜೂ.16– ಬ್ರಾಹ್ಮಣರು ಜಾಗತಿಕವಾಗಿ ಯಹೂದಿಗಳಂತೆ ಎದ್ದು ನಿಲ್ಲಬೇಕಿದೆ ಎಂದು ಅಂಕಣಕಾರ ರೋಹಿತ್ ಚಕ್ರತೀರ್ಥ ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿನ ವಿಪ್ರ ಬಾಂಧವರ ಸ್ನೇಹ ಬಳಗದಿಂದ ನಗರದಲ್ಲಿ ಗುರುವಾರ ರಾತ್ರಿ ಹಮ್ಮಿಕೊಂಡಿದ್ದ ಬಿಜೆಪಿ ಶಾಸಕ ಎಸ್.ಎನ್.ಚನ್ನಬಸಪ್ಪ ಅವರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದ್ದಾರೆ.

ಯಹೂದಿಗಳಿಗೆ 2,500 ವರ್ಷಗಳವರೆಗೆ ಜಗತ್ತಿನಲ್ಲಿ ನೆಲೆಯೇ ಇರಲಿಲ್ಲ ಆದರೂ ಜ್ಞಾನಾರ್ಥಿಗಳಾಗಿ ವಿಶ್ವಕ್ಕೆ ಮಾರ್ಗದರ್ಶನ ಮಾಡುತ್ತಾ ಬದುಕಿದರು. ಅವರು ವಿಶ್ವದಾದ್ಯಂತ ಶೇ 5ರಷ್ಟು ಮಂದಿ ಇದ್ದಾರೆ. ಆದರೆ ಎಲ್ಲರೂ ಅವರನ್ನು ಒಪ್ಪಿಕೊಂಡು ಬದುಕುವಂತೆ ಸಾಧಿಸಿ ತೋರಿಸಿಕೊಟ್ಟಿದ್ದಾರೆ. ಕಸಗುಡಿಸುವ ಕೆಲಸವನ್ನೂ ಅವರು ಶ್ರದ್ಧೆಯಿಂದ ಮಾಡುತ್ತಾರೆ ಎಂದು ಹೇಳಿದ್ದಾರೆ.

ಜಗತ್ತಿನಲ್ಲಿ ಬೌದ್ಧಿಕ ಶಕ್ತಿಯಾಗಿ ಬದುಕುವುದು ಅವರ ಗುರಿಯಾಗಿತ್ತು ಇಂದು ಎಲ್ಲಾ ರಂಗದಲ್ಲೂ ಯಹೂದಿಗಳಿದ್ದಾರೆ. ಬ್ರಾಹ್ಮಣರು ಅವರನ್ನು ಅನುಸರಿಸುವ ಅನಿವಾರ್ಯತೆ ಎದುರಾಗಿದೆ. ಆರ್ಥಿಕವಾಗಿ ನಾವೂ ಪ್ರಬಲರಾಗಬೇಕು. ಆಗ ಯಾರ ಮುಂದೆಯೂ ತಲೆತಗ್ಗಿಸಬೇಕಿಲ್ಲ ಎಂದು ಹೇಳಿದ್ದಾರೆ. ಬ್ರಾಹ್ಮಣರು ಸಿದ್ಧಾಂತಗಳನ್ನು ಒಪ್ಪಿಕೊಂಡವರು. ಕಮ್ಯುನಿಸ್ಟ್ ಪಾರ್ಟಿಯಲ್ಲೂ ಬ್ರಾಹ್ಮಣರು ಹೆಚ್ಚಿದ್ದಾರೆ. ಬ್ರಾಹ್ಮಣರಿಗೆ ಬ್ರಾಹ್ಮಣರೇ ಶತ್ರುಗಳು. ಹಾಗಾಗಿ ಬ್ರಾಹ್ಮಣರು ಬ್ರಹ್ಮಕ್ಷತ್ರಿಯರಾಗಿ ಬದುಕಬೇಕಿದೆ. ಎಲ್ಲಾ ರಂಗದಲ್ಲೂ ಇದ್ದು ಬದುಕುವಂತಾಗಬೇಕಿದೆ. ಬ್ರಾಹ್ಮಣರನ್ನು ದೇಶದ ವ್ಯವಸ್ಥೆಯಲ್ಲಿ ತುಚ್ಛವಾಗಿ ಕಾಣಲಾಗುತ್ತಿದೆ. ಮೊದಲೆಲ್ಲ ಹೀಗೆ ಇರಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಪಠ್ಯ ಪುಸ್ತಕ ಪರಿಷ್ಕರಣೆ ಮಾಡಲು ಮುಂದಾಗಿರುವ ಈ ಸರ್ಕಾರ, ಕೆಲವರ ಪಾಠ ಕೈಬಿಡಲಿದೆ ಎಂಬ ಮಾತು ಕೇಳಿಬರುತ್ತಿದೆ ಎಂದು ಪ್ರಸ್ತಾಪಿಸಿದ ಚಕ್ರತೀರ್ಥ ಗೆಲಿಲಿಯೋನ ಕಥೆ ಹೇಳಿದ್ದಾರೆ. ಗೆಲಿಲಿಯೋ ಭೂಮಿ ದುಂಡಾಗಿದೆ. ಸೂರ್ಯನ ಸುತ್ತ ಭೂಮಿ ತಿರುಗುತ್ತದೆ ಎಂದು ಹೇಳಿದಾಗ ಆಗಿನ ಜಗತ್ತು ಒಪ್ಪಲಿಲ್ಲ. ಜನರ ನಂಬಿಕೆಯನ್ನು ಮುರಿದಾಗ ಆತ ಸಂಕಷ್ಟಗಳನ್ನು ಎದುರಿಸಿ ಜರ್ಝರಿತನಾಗಿದ್ದ. ಹೀಗಾಗಿ ಭೂಮಿಯೇ ತಟಸ್ಥ, ಸೂರ್ಯನೇ ಅದರ ಸುತ್ತ ತಿರುಗೋದು ಎಂದು ರಾಜನ ಮುಂದೆ ತನ್ನ ಹೇಳಿಕೆ ಬದಲಿಸಿದ್ದ. ಅರಮನೆಯ ದ್ವಾರದ ಬಳಿ ನಿಂತವನೊಬ್ಬ ಗೆಲಿಲಿಯೋಗೆ ಕೊನೆಗೂ ಅವರು (ರಾಜ) ಹೇಳಿದ್ದನ್ನೇ ಒಪ್ಪಿಕೊಂಡ್ಯಲ್ಲಾ ಎಂದು ಕೇಳ್ತಾನೆ. ಅದಕ್ಕೆ ಗೆಲಿಲಿಯೋ, ನಾನು ಒಪ್ಪಿಕೊಂಡ ಕೂಡಲೇ ಜಗದ ನಿಯಮ ಬದಲಾಗೊಲ್ಲ. ಅದು ಹಾಗೆ ಇರುತ್ತದೆ. ಇವರ ಕಪಿಮುಷ್ಟಿಯಿಂದ ತಪ್ಪಿಸಿಕೊಳ್ಳಲು ಅವರ ವಾದ ಒಪ್ಪಬೇಕಾಯಿತು ಎಂದು ಉತ್ತರಿಸುತ್ತಾನೆ ಹಾಗೆಯೇ ಪಠ್ಯ ಪುಸ್ತಕದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪಾಠ ತೆಗೆಯುವುದರಿಂದ ಸತ್ಯ ಬದಲಿಸಲು ಆಗೊಲ್ಲ ಎಂದು ಮಾರ್ಮಿಕವಾಗಿ ನುಡಿದರು.

ಶ್ರೀಮಂತರ ಸಾಲಮನ್ನಾ ಮಾಡಿದಾಗ ಬಿಜೆಪಿ ನಾಯಕರು ಸುಮ್ಮನಿದ್ದರೇಕೆ?

ಮೈಸೂರು,ಜೂ.16(ಎಂಟಿವೈ)– ಶ್ರೀಮಂತರು ಮಾಡಿದ್ದ ಲಕ್ಷಾಂತರ ಕೋಟಿ ಸಾಲವನ್ನು ಕೇಂದ್ರ ಸರ್ಕಾರ ಮನ್ನಾ ಮಾಡಿದಾಗ ಸುಮ್ಮನಿದ್ದ ಬಿಜೆಪಿ ನಾಯಕರು, ಈಗ ಬಡವರಿಗೆ ಅನ್ನಭಾಗ್ಯ ಹಾಗೂ ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ನೀಡಿದರೆ ದೇಶ ದಿವಾಳಿಯಾಗುತ್ತದೆ ಎಂದು ಮೈ ಪರಚಿಕೊಳ್ಳುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಸಂಪತ್ತನ್ನು ಕೆಲವೇ ಕೆಲವು ವ್ಯಕ್ತಿಗಳ ವಶಕ್ಕೆ ನೀಡಲು ಕೇಂದ್ರ ಸರ್ಕಾರ ಸಂಚು ನಡೆಸುತ್ತಿದೆ. ತಮ್ಮ ಪರ ನಿಲುವು ಹೊಂದಿರುವ ಶ್ರೀಮಂತರ ಕೋಟಿ ಕೋಟಿ ರೂ. ಸಾಲವನ್ನು ಮನ್ನಾ ಮಾಡುವ ಮೂಲಕ ಋಣ ಸಂದಾಯ ಮಾಡುವ ಕೆಲಸವನ್ನು ಮೋದಿ ಸರ್ಕಾರ ಮಾಡಿದೆ. ಇದರ ಬಗ್ಗೆ ತುಟಿ ಬಿಚ್ಚದ ಬಿಜೆಪಿ ನಾಯಕರು ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಡವರ ಪರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳನ್ನು ಟೀಕಿಸುತ್ತಿರುವುದು ಜನ ವಿರೋಧಿ ನೀತಿ ಎಂದು ಕಿಡಿಕಾರಿದರು.

ಇತರೆ ರಾಜ್ಯಗಳಿಂದ ಅಕ್ಕಿ ಖರೀದಿ: ರಾಜ್ಯದಲ್ಲಿ 7 ಲಕ್ಷ ಟನ್ ಅಕ್ಕಿ ದಾಸ್ತಾನು ಇದೆ. ಕರ್ನಾಟಕಕ್ಕೆ ಅಗತ್ಯವಿರುವ 2.45 ಲಕ್ಷ ಟನ್ ಅಕ್ಕಿ ಕೊಡುತ್ತಿಲ್ಲ. ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಉತ್ತಮ ಹೆಸರು ಬರುತ್ತದೆ. ಕಾಂಗ್ರೆಸ್ ಮತ್ತಷ್ಟು ಜನಪ್ರಿಯಗೊಳ್ಳುತ್ತದೆ ಎಂಬ ಅನುಮಾನದಿಂದ ಕೇಂದ್ರ ಸರ್ಕಾರ ಅಕ್ಕಿ ಮಾರಾಟ ಮಾಡಲು ಹಿಂದೇಟು ಹಾಕುತ್ತಿದೆ.

ತಪ್ಪೇನಿದೆ : ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಖಾಸಗಿ ಹೋಟೆಲ್‌ನಲ್ಲಿ ಅಧಿಕಾರಿಗಳೊಂದಿಗೆ ಮಾತನಾಡಿರುವುದಕ್ಕೆ ಬಿಜೆಪಿ ನಾಯಕರು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಅವರು ಅಧಿಕಾರಿಗಳೊದಿಗೆ ಸಭೆ ನಡೆಸಿಲ್ಲ. ಆದರೆ ಸಮಾಜಕ್ಕೆ ತಪ್ಪು ಮಾಹಿತಿ ನೀಡಲು ಪ್ರಯತ್ನಿಸುತ್ತಿದ್ದಾರೆ ಎಂದರು.

ಹೊಂದಾಣಿಕೆ ಫಲವೇ ಪ್ರತಾಪ ಸಿಂಹ ಗೆಲುವು: 2014, 2019ರ ಚುನಾವಣೆಗಳಲ್ಲಿ ಸಂಸದ ಪ್ರತಾಪ ಸಿಂಹ ಯಾರೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದೀರಿ ಎಂಬುದನ್ನು ಬಹಿರಂಗಪಡಿಸುವಂತೆ ಲಕ್ಷ್ಮಣ್ ಸವಾಲು ಹಾಕಿದರು.

ಮೈಸೂರು ವಿವಿಯಲ್ಲಿ ಪ್ರತಾಪ ಸಿಂಹ ಅವರ ಕಾರ್ಯವೈಖರಿ ಏನು? ಸಿಂಡಿಕೇಟ್ ಸದಸ್ಯರ ಮೂಲಕ ಬ್ಲ್ಯಾಕ್‌ಮೇಲ್ ಮಾಡಲಾಗುತ್ತಿದೆ. ಇಲ್ಲಿನ ದಂಧೆ ಬಗ್ಗೆ ಮುಂದಿನ ದಿನಗಳಲ್ಲಿ ಜನರ ಮುಂದೆ ಇಡುತ್ತೇವೆ. ಕಾಂಗ್ರೆಸ್ ಭರ್ಜರಿ ಗೆಲುವಿನ ಬಳಿಕ ಸಿ.ಟಿ.ರವಿ, ಆರ್.ಅಶೋಕ್, ಪ್ರತಾಪ ಸಿಂಹ ಆ್ಯಕ್ಟಿವ್ ಆಗಿ ಅಟ್ಯಾಕ್ ಮಾಡುತ್ತಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ನಾಯಕರು ಮೊಸರಲ್ಲಿ ಕಲ್ಲು ಹುಡುಕುವ ಕೆಲಸವನ್ನು ಮುಂದುವರಿಸಿರುವುದು ರಾಜ್ಯದ ದುರಂತ ಎಂದು ಲೇವಡಿ ಮಾಡಿದರು.

ಹೆಚ್.ಡಿ.ಕುಮಾರಸ್ವಾಮಿ ಹತಾಶರಾಗಿದ್ದಾರೆ: ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹತಾಶರಾಗಿ ಶೇ. 50 ಕಮಿಷನ್ ಸರ್ಕಾರ ಎಂದು ಟೀಕಿಸುತ್ತ ತಮ್ಮ ಗೌರವ ಹಾಳು ಮಾಡಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದಲ್ಲಿ ಏನು ಮಾಡಿದರೂ ಪೇ ರೋಲ್ ನಡೆಯುವುದಿಲ್ಲ. ನಮ್ಮಲ್ಲಿ ಆ ವ್ಯವಸ್ಥೆ ಇಲ್ಲ. ಈಗ ಜೆಡಿಎಸ್‌ನ 19 ಶಾಸಕರಲ್ಲಿ 12 ಶಾಸಕರು ಕಾಂಗ್ರೆಸ್ ಸೇರಲು ಸಿದ್ಧರಾಗಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಹೊಂದಾಣಿಕೆ ಮಾಡಿ ಕೊಂಡು ಒಂದರೆಡು ಸ್ಥಾನ ಗೆದ್ದು ಕೇಂದ್ರದಲ್ಲಿ ಏನಾದರೂ ಲಾಭ ಮಾಡಿಕೊಳ್ಳುವ ಉದ್ದೇಶ ಹೊಂದಿದ್ದಾರೆ. ಆದರೆ, ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ. ಶಿವಣ್ಣ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ. ರಾಮು, ವಕ್ತಾರ ಮಹೇಶ್, ಈಶ್ವರ್ ಚಕ್ಕಡಿ, ಗಿರೀಶ್ ಇದ್ದರು.

ವಿದ್ಯುತ್ ದರ ಹೆಚ್ಚಳ ಬಿಜೆಪಿ ಕೊಡುಗೆ

ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಅವಧಿ ಯಲ್ಲಿ ಆಗಸ್ಟ್ 2019ರ ಆಗಸ್ಟ್‌ನಿಂದ 2023ರ ಏಪ್ರಿಲ್‌ವರೆಗೆ ಯೂನಿಟ್‌ಗೆ 5.62 ರೂ. ವಿದ್ಯುತ್ ದರ ಹೆಚ್ಚಿಸಲಾಗಿದೆ. ಯೂನಿಟ್‌ಗೆ 70 ಪೈಸೆ ಹೆಚ್ಚಳ ಆಗಿರು ವುದು ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ. ಆದರೆ, ಈ ಕುರಿತು ಬಿಜೆಪಿ ಮುಖಂಡರು ಮೈ ಮೇಲೆ ಚೇಳು ಬಿಟ್ಟು ಕೊಂಡವರಂತೆ ಆಡುತ್ತಿದ್ದಾರೆ. ವಿದ್ಯುತ್ ಕಚೇರಿ ಮುತ್ತಿಗೆ, ಪ್ರತಿಭಟನೆ ಮಾಡುತ್ತಿ ದ್ದಾರೆ. ಕಳೆದ ಸರ್ಕಾರ ಯುನಿಟ್‌ಗೆ 5.62 ರೂ. ಹೆಚ್ಚಳ ಮಾಡಿದೆ. 2018ರ ಕಾಂಗ್ರೆಸ್ ಸರ್ಕಾರ ಪ್ರತಿ ಯೂನಿಟ್‌ಗೆ 4 ರೂ. ನೀಡಿ ಖರೀದಿ ಮಾಡುತ್ತಿತ್ತು. 2019ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ 2.5 ರೂ. ಹೆಚ್ಚಿಸಿ, ಪ್ರತಿ ಯೂನಿಟ್‌ಗೆ 6.5 ರೂ.ಗೆ ಏರಿಕೆ ಮಾಡಿತು. ಏಕಾಏಕಿ ವಿದ್ಯುತ್ ದರ ಹೆಚ್ಚಿಸಿ 6536 ಕೋಟಿ ಲೂಟಿ ರೂ. ಮಾಡಿದ್ದಾರೆ ಎಂದು ಆರೋಪಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೊದಲ ಮಹಡಿ ರೂಮ್ ಬಾಡಿಗೆಗೆ ಇದೆ
978/3, ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜ ಮೊಹಲ್ಲಾ, RTO-9 ಹತ್ತಿರ, ಮೈಸೂರು–570005
9448800564
9900632322

POLYCLINIC SPACE AVAILABLE FOR DOCTORS
1) Fully Furnished
2) Comfortable Cabins
3) Reception Area
4) Patient Waiting Area
5) CCTV Camera security
6) Located in prime commercial area near surya bakery, Hebbal, Mysuru.
7) Already Running Dental Clinic
9845692563

NOBLE ENTERPRISES
No. 31/C1-A, Bannimantap 'A' Layout, Industrial Area, Mysore-15
REQUIRES
•Turners•Fitters•Helpers
Freshers & Experienced
Contact:
7892350447 / 9845380379

HOUSE FOR RENT/LEASE
30x40, 2 Bedroom, 1st Floor house in SVP Nagar, near to Nirmala Hospital, JSS Ayurvedic Hospital and Police Layout. Contact:
9632755122
Brokers Excuse

ಬೇಕಾಗಿದ್ದಾರೆ
ಮೊಬೈಲ್ ಫೋನ್ ಶೋರೂಮ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ. ಪಾರ್ಟ್ ಟೈಂ/ ಫುಲ್ ಟೈಂ
ಸಂಪರ್ಕಿಸಿ
9886409722

JOB VACANCY
OPERATOR
Freshers B.E (Mech)
ELECTRICAL MAINTENANCE
2 years exp., ITI / Diploma
Kadakola Industrial Area
Call : 73534 80662

SITE FOR SALE
30x40 N/F Site in "FERN HILL LAYOUT"
Opp. To JSS Ayurveda hospital, demanding location.
very good for investment, also constuction.
Ph: 8971261355
9591810822

ಮುಡಾ ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ
ಕಮರ್ಷಿಯಲ್ ಬ್ರಾಹ್ಮಿನ್ ಲೇಔಟ್ 'A' ಬ್ಲಾಕ್, 60 ಅಡಿ ರಸ್ತೆ, (ಪೂ.ಪ.47 ಅಡಿ, ದ.ಉ.127 ಅಡಿ) 2 ವಿಸ್ತೀರ್ಣ 2900 ಸ್ಕ್ವೇರ್ ಫೀಟ್ ಚದರ ಅಡಿಗೆ 1650/–
8618644886, 9880280299

ಪತ್ರ ಬರಹಗಾರರು
ಜಿ.ಪ್ರಫುಲ್ಲಚಂದ್ರ ನೊಂದಣಿ ಸಲಹೆಗಾರರು
ಕರಾರು ಪತ್ರ, ಕ್ರಯ ಪತ್ರ ರಿಜಿಸ್ಟ್ರೇಷನ್‌ಗಳಿಗೆ ಸಂಪರ್ಕಿಸಿ:
ವಿಳಾಸ: # 386, 14ನೇ ಮುಖ್ಯ ರಸ್ತೆ, ಸರಸ್ವತಿಪುರಂ
9480379977

ಬೇಕಾಗಿದ್ದಾರೆ
Captain, Cashier, Room Boys, Waiters, Asst. Waiters, KT/Asst., Bar/Boys, Supervisor, Receptionist, South Indian Cook
Attractive Salary, PF & ESI with food and accommodation
ಸಂಪರ್ಕಿಸಿ
ಪಾರ್ಕ್‌ಲೇನ್ ಹೋಟೆಲ್
2720, ಹರ್ಷ ರಸ್ತೆ, ಮೈಸೂರು

ನಿವೇಶನ ಮಾರಾಟಕ್ಕಿದೆ
ಸುಸಜ್ಜಿತವಾದ 5BHK ಮನೆಯುಳ್ಳ 60x40 ನಿವೇಶನ ಮಾರಾಟಕ್ಕಿದೆ.
ವಿಳಾಸ: #764, 8ನೇ ಕ್ರಾಸ್, 4ನೇ ಹಂತ, ಜೈನ್ ಹಾಸ್ಟೆಲ್ ರೋಡ್, ನಾಗಲಿಂಗೇಶ್ವರ ದೇವಸ್ಥಾನದ ಹತ್ತಿರ, ತೊಣಚಿಕೊಪ್ಪಲು, ಬಡಾವಣೆ (TK Layout) ಮೈಸೂರು
8971334799
9611537004

ಮಂಟಪ ಮನೆ

ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ
ಸಂಪರ್ಕಿಸಿ: ಶ್ರೀನಗರ ಮೈಸೂರು
9448207634
9036742526

ನಿವೇಶನ ಮಾರಾಟಕ್ಕಿದೆ
30x40
ಪಶ್ಚಿಮ ದಿಕ್ಕು, ಪೊಲೀಸ್ ಲೇಔಟ್, 2ನೇ ಹಂತ, ಮೈಸೂರು
Mob : 98800 48007

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

ತಕ್ಷಣ ಬೇಕಾಗಿದ್ದಾರೆ
ಬೋಗಾದಿ ಟಿ.ಕೆ.ಲೇಔಟ್ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ಸಂಬಳ: 14000/-
ವಯೋಮಿತಿ: 50 ವರ್ಷದೊಳಗೆ
ವಿದ್ಯಾರ್ಹತೆ : SSLC
ESI ಮತ್ತು PF ಸೌಲಭ್ಯವಿರುತ್ತದೆ
9620777819
9620667819

ತಕ್ಷಣ ಬೇಕಾಗಿದ್ದಾರೆ
ಅಪೋಲೋ ಆಸ್ಪತ್ರೆ & ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ಸಂಬಳ: 18,500/-
ESI ಮತ್ತು PF ಊಟ ತಿಂಡಿ ಸೌಲಭ್ಯವಿರುತ್ತದೆ
9620667819
9880727819

HOUSE FOR SALE
20x30, MUDA, new 3 BHK Duplex, fully furnished house, N/F Door at Dattagalli, Near Triveni Supermarket.
Price: Rs. 79 Lakhs.
Contact owner:
Mob: 6361295132

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194, 9606783264

100% TEAK WOOD FACTORY FINISH DOORS @ DEPOT RATES

10 YEARS WARRANTY
www.ssbuildmart.com
9901291267
9845426862

ಮನೆಯಿಂದಲೇ ಕೆಲಸ
ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುವ ಯುವಕ ಯುವತಿಯರಿಗೆ ಗೃಹಿಣಿಯರಿಗೆ ವಿದ್ಯಾರ್ಥಿಗಳಿಗೆ ನಿವೃತ್ತರಾದವರಿಗೆ ಎಲ್ಲರಿಗೂ ಸದಾವಕಾಶ ದಿನದ ಬಿಡುವಿನ ಸಮಯದಲ್ಲಿ ಕೆಲಸ ಮಾಡಿ ತಿಂಗಳಿಗೆ 12000 ದಿಂದ 18000ವರೆಗೆ ಗಳಿಸಿ.
9035023710, 9742332728

Sudarshan Saur

SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಜಮೀನುಗಳು ಮಾರಾಟಕ್ಕಿವೆ
ಮೈಸೂರು ಏರ್‌ಪೋರ್ಟ್ ಹಿಂಭಾಗದಲ್ಲಿ ಲೇಔಟ್ ಮಾಡಲು ಮುಡಾ Layout ಜಮೀನುಗಳು ಮಾರಾಟಕ್ಕಿವೆ. 20 ಗುಂಟೆ, 26 ಗುಂಟೆ, 22 ಗುಂಟೆ, Layout Compound Attach ಇರುವ ಜಮೀನುಗಳು ಮತ್ತು ಸೈಟ್ ಹಾಗೂ ನಂಜನಗೂಡು ತಾಲ್ಲೂಕಿನ Farm House ಮಾಡಲು ಸೂಕ್ತವಾದ ಜಮೀನುಗಳು ಮಾರಾಟಕ್ಕಿವೆ.
9611320189

ತಕ್ಷಣ ಬೇಕಾಗಿದ್ದಾರೆ
ವಿದ್ಯಾರ್ಹತೆ: 7th, 10th, ITI, SSLC, PUC, Diploma, Any Degree (Pass or Fail) ಸ್ಯಾಲರಿ : 18000–30000 ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ವಯಸ್ಸು : 35 ರ ಒಳಗೆ
ತರಬೇತಿ ಸಮಯದಲ್ಲಿ ಮೆಸ್ ಕೊಡಲಾಗುವುದು.
Contact: 9880151303, 8217557212, 8884466359

ಟೆಲಿಕಾಂ ಲೇಔಟ್
30x40 N/F ಸೈಟು @ Rs.25 ಲಕ್ಷ
ತಕ್ಷಣ ಮನೆ ಕಟ್ಟಬಹುದು. ಬ್ಯಾಂಕ್ ಲೋನ್ ಲಭ್ಯ, ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರಸ್ತೆ, ಮೈಸೂರು
9538583377

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ಮನೆ ಮಾರಾಟಕ್ಕಿದೆ/ಭೋಗ್ಯಕ್ಕಿದೆ
ಮೈಸೂರಿನ ವಿದ್ಯಾರಣ್ಯಪುರಂನಲ್ಲಿ 15x35 ಅಳತೆಯ ಪೂರ್ವ ದಿಕ್ಕಿನಲ್ಲಿರುವ 3 ಅಂತಸ್ತಿನ ಹೊಸ ಮನೆ 64 ಲಕ್ಷಕ್ಕೆ ಮಾರಾಟಕ್ಕಿದೆ
ಸಂಪರ್ಕಿಸಿ: 9900299714
ಕೆಲಸಕ್ಕೆ ಬೇಕಾಗಿದ್ದಾರೆ
TV Anchors, Social Media handler Marketing Executives, Male or Female
Contact: 9945813602

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
#2921/ಎ, ಸರಸ್ವತಿಪುರಂ, ಮೈಸೂರು
11B ಮತ್ತು 9 & 11A ಖಾತಾಗಳಿಗೂ ಮುಡಾ & ಕಾರ್ಪೋರೇಷನ್ ಖಾತೆ ಇದ್ದರು, ಇಲ್ಲದಿದ್ದರೂ ಹಾಗೂ 15,000 ಮೇಲ್ಪಟ್ಟು ಸಂಬಳ ಇರುವವರಿಗೆ ಪರ್ಸನಲ್ ಲೋನ್ ಹಾಗೂ ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಸೌಲಭ್ಯ ದೊರೆಯುತ್ತದೆ.
8088647887

APARTMENT FOR RENT
2BHK, ONE with attached bathroom (2nd Floor), Car Parking & Lift Facility, at Centrally Located Place in V V Mohalla, Mysuru, Vacant Possession.
9448896042
8050752585

ಹೊಸ ಮನೆ ಮಾರಾಟಕ್ಕಿದೆ & ಸೈಟುಗಳು ಮಾರಾಟಕ್ಕಿದೆ
ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರಸ್ತೆ, ಮೈಸೂರು
8050345574

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎನ್.ಕೃಷ್ಣಮೂರ್ತಿ
ಮೊ: 9741806990

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
ಪಂಡಿತ್ ಸಂತೋಷ್: 9741250896
Famous Astrologer

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ: 15200/- to 86000/-
9740733021
9535028750

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

SITE FOR SALE
30X50 'S' FACE
ROOPA NAGAR (BOGADI)
PRIME LOCATION
9448054390

ಬೇಕಾಗಿದ್ದಾರೆ
ಹೆಸರಾಂತ ಹೋಟೆಲ್, ಕೂರ್ಗ್ ಸ್ಟೈಲ್‌ಗೆ ಬೇಕಾಗಿದ್ದಾರೆ.
1) ಕಿಚನ್ ಅಸಿಸ್ಟೆಂಟ್–02
2) ಸಪ್ಲೈಯರ್–03
ಸ್ಥಳ: ಹೋಟೆಲ್ ಕೂರ್ಗ್ ಸ್ಟೈಲ್ ರಿಂಗ್ ರಸ್ತೆ, ಫ್ಲೈ ಓವರ್ ಹತ್ತಿರ, ಮೈಸೂರು.
9632153399

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ವಾಟರ್ ಲೆವೆಲ್ ಕಂಟ್ರೋಲ್‌ಗಾಗಿ

ಸಂಪರ್ಕಿಸಿ:
Mob: 8880558064

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
91487-33213

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 8th to 2nd PUC ವರೆಗೆ. ಊಟ ವಸತಿ ESI & PF ಸೌಲಭ್ಯವಿರುತ್ತದೆ ಸಂಬಳ 11400 to 18000 ಇರುತ್ತದೆ.
8951869646
9008819487

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

HOUSE FOR RENT
1- BHK Near JC Layout
Suitable for small family
9841074214

SITES FOR SALE
MUDA APPROVED
SEREIN VILLAS
30X40, 30X50
NEAR RAINBOW SCHOOL
MARTIKYATHANALLI
BOGADI ROAD, MYSORE
9448054390

ಹೋಲ್‌ಸೇಲ್ ದರದಲ್ಲಿ

ಜೀವಂತ ನಾಟಿ ಕೋಳಿ ಕೆ.ಜಿ. ರೂ. 260, ರೂ. 350, ರೂ. 580
ಗೌಡ್ರು ನಾಟಿಕೋಳಿ ಅಂಗಡಿ
ನಂ. 198/1, ಪಿ.ಟಿ.ಆರ್ ಕಾಂಪ್ಲೆಕ್ಸ್ ಮೇನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪ ಹತ್ತಿರ, ಎನ್.ಆರ್. ಮೊಹಲ್ಲಾ, ಮೈಸೂರು-570 007
9448048576, 9632378020

SITE FOR SALE
Urdu Teachers Layout, Moulim Nagar, Outer Ring Road from 50 meter Devegowda Circle, MUDA approved (MUDA Khatha) 1940 sq.ft. (West Face).
95 LAKHS (SLIGHTLY NEGO.)
BROKERS EXCUSE
DIRECT OWNER
Mob: 8880368881

SITES FOR SALE
30x50
MUDA Approved
Bank Loan Available.
Srirampura Ring Road, Mysore.
Mob: 8762686119

ತಕ್ಷಣ ಬೇಕಾಗಿದ್ದಾರೆ
ಹೇರ್ ಸಲೂನ್‌ಗೆ ಹುಡುಗರು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ.
ವೇತನ: 25000 ರೂ.ಗಳಿಂದ 30,000 ರೂ. ಸ್ಥಳ: ಸಾತಗಳ್ಳಿ, ಮೈಸೂರು. ಸಂಪರ್ಕಿಸಿ:
Mob: 9844341652

SITE FOR SALE
30x40 North
Somnatha nagar
30x40 North
Gayatry Layout
9880273834

ಬೇಕಾಗಿದ್ದಾರೆ
ಹೋಟೆಲ್‌ನಲ್ಲಿ ಪಾರ್ಸೆಲ್ ಹಾಗೂ ಕೌಂಟರ್ ನೋಡಿಕೊಳ್ಳಲು ಹುಡುಗರು ಬೇಕಾಗಿದ್ದಾರೆ
Full Time/ Part Time
9986306418

DTCP SITE FOR SALE
KRS Road Yelwala - Mysore Bhomika Layout
30x40 West Face
24 Lakhs, Negotiable
7829779070

ಶ್ರೀ ಶಕ್ತಿ ಮಹಾಕಾಳಿ ಜ್ಯೋತಿಷ್ಯರು
ಪಂಡಿತ್.ಹೆಚ್.ವೈ.ರಾವ್
15 ವರ್ಷಗಳಿಂದ ಜ್ಯೋತಿಷ್ಯದಲ್ಲಿ ಪರಿಣಿತರು. ಗಂಡ-ಹೆಂಡತಿಯಲ್ಲಿ ಕಲಹ, ವ್ಯಾಪಾರದಲ್ಲಿ ನಷ್ಟ, ಶೀಘ್ರ-ಪ್ರೇಮದಲ್ಲಿ ಮೋಸ, ಉದ್ಯೋಗ ಇನ್ನೂ ನಿಮ್ಮ ಸಮಸ್ಯೆಗಳಿಗೆ ಪರಿಹಾರ ತಿಳಿಸುತ್ತಾರೆ.
9686487402

WANTED
RECEPTIONIST ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ: 20000-30000/-
PH: 8860369369
SHIVARAMPET, MYSURU

ಹೊಸ ಮನೆ ಮಾರಾಟಕ್ಕಿದೆ
ಮೈಸೂರಿನ ಲಾಲ್‌ಬಹದ್ದೂರ್ ಶಾಸ್ತ್ರಿ ನಗರದಲ್ಲಿ 20x30 ಅಳತೆಯ ಪಶ್ಚಿಮ ದಿಕ್ಕಿನ ನಿವೇಶನದಲ್ಲಿ ಉತ್ತರ ದಿಕ್ಕಿನ ಬಾಗಿಲು ಅಳವಡಿಸಿ ವಾಸ್ತು ಪ್ರಕಾರ ನಿರ್ಮಿಸಿರುವ 2BHK ಸುಂದರ ಮನೆ ಮಾರಾಟಕ್ಕಿದೆ
Price : 45 Lakhs Negotiable
9164759650
9342125527

ಮೈತ್ರಿ ಟ್ರಾವೆಲ್ಸ್
07-07-23 ಶಿರಡಿ ಪ್ರವಾಸ 3 ದಿನಗಳು, 3 ಜ್ಯೋತಿರ್ಲಿಂಗ, ನಾಸಿಕ್, ಎಲ್ಲೋರ, ಶನಿಸಿಂಗಣಾಪುರ, 14-07-23 ಆಂಧ್ರ ಪ್ರವಾಸ 3 ದಿನಗಳು, ವಿಜಯವಾಡ-ಭದ್ರಾಚಲಂ-ದ್ವಾರಕಾ ತಿರುಮಲ-ಅನ್ನವರಂ-ವೈಜಾಗ್
6360422209

ಹೊಸ ಮನೆ ಮಾರಾಟಕ್ಕಿದೆ
MUDA
30x40 ಡ್ಯೂಪ್ಲೆಕ್ಸ್ 3BHK ವಿತ್ ಅಟ್ಯಾಚ್ಡ್ 100% ವಾಸ್ತು ಪಿಲ್ಲರ್ ಕನ್‌ಸ್ಟ್ರಕ್ಷನ್ ರಾಘವೇಂದ್ರ ಬಡಾವಣೆ, ನಿಯರ್ ಶ್ರೀರಾಂಪುರ, ಅಶೋಕಪುರಂ, ರೈಲ್ವೆ ಸ್ಟೇಷನ್.
9632380330

OFFICE SPACE FOR RENT
AVAILABLE AT KUVEMPUNAGAR
400 SQFT
PLEASE CONTACT
9513860582

CHANGE OF NAME
I NAINA JAIN GULECHA W/O J. Manak Chand aged 56 years residing at No.666/F99 Basaveshwara Main Road, Fort Mohalla, Mysore-04 has changed my name to NAINA JAIN Before Notary Umadevi M.V on 13-06-2023

ಹೋಂ ನರ್ಸಿಂಗ್ ಕೆಲಸ
ಯುವಕ, ಯುವತಿಯರು, ಮಹಿಳೆಯರು ವಿಧವೆ, ವಿಚ್ಛೇದಿತಿಯರು 12hr & 24hr ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ ಅನುಭವ ಅವಶ್ಯಕತೆ ಇಲ್ಲ ಅಗ್ರಹಾರ
9035113222

ಬೇಕಾಗಿದ್ದಾರೆ
ಮೈಸೂರಿನ SJCE ಬಳಿ ವಿದ್ಯಾರ್ಥಿ ನಿಲಯದಲ್ಲಿ ಅಡುಗೆ ಕೆಲಸ ಮಾಡಲು ಅಡುಗೆಯವರು ಹಾಗೂ ಕ್ಲೀನಿಂಗ್ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಅನುಭವವಿದ್ದರೆ ಆದ್ಯತೆ. ಬೋಗಾದಿ ಹಾಗೂ ಹತ್ತಿರದ ಸುತ್ತಮುತ್ತಲಿನವರಿಗೆ ಮೊದಲ ಆದ್ಯತೆ
9986339606

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ದೈಹಿಕವಾಗಿ ಸದೃಢವಾಗಿರುವ ಸೆಕ್ಯೂರಿಟಿ ಗಾರ್ಡ್ ಕೂಡಲೇ ಬೇಕಾಗಿದ್ದಾರೆ. ಓದಲು ಮತ್ತು ಬರೆಯಲು ತಿಳಿದಿರಬೇಕು. ನೇರ ಸಂದರ್ಶನದಲ್ಲಿ ಸೂಕ್ತ ವೇತನವನ್ನು ನಿರ್ಧರಿಸಲಾಗುವುದು.
ದಿವ್ಯ ದೀಪ ಚಾರಿಟಬಲ್ ಟ್ರಸ್ಟ್
ವಿ.ಸಾಲುಂಡಿ, ಹೌಸ್‌ಕಿಂಗ್ ರಸ್ತೆ, ಮೈಸೂರು-08
9341369901, 9538499901
8088586087
www.divyadeepatrust.org

ಹೊಸ ಮನೆ ಮಾರಾಟಕ್ಕಿದೆ
ಮೈಸೂರಿನ ವಸಂತನಗರದಲ್ಲಿ ನಿವೇಶನ ಸಂಖ್ಯೆ 1168, 20x30 ಅಳತೆಯ ಉತ್ತರ ದಿಕ್ಕಿನ ನಿವೇಶನದಲ್ಲಿ ವಾಸ್ತು ಪ್ರಕಾರ ನಿರ್ಮಿಸಿರುವ (2BHK ನೆಲ ಅಂತಸ್ತು ಮತ್ತು 2BHK ಮೊದಲನೇ ಅಂತಸ್ತು) ಸುಂದರ ಮನೆ ಮಾರಾಟಕ್ಕಿದೆ
Price : 62 Lakhs Negotiable
9342125527
9164759650

NEW APARTMENT FOR SALE / RENT
2bhk, Kuvempunagar
1100 Sqft.
9480606154
9448324232

SITE FOR SALE
SBM others layout
20x30 East
7996009299

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ + ಪಿಎಫ್+ಇಎಸ್ಐ ಸೌಲಭ್ಯವಿರುತ್ತದೆ. ಸ್ಥಳ: ಮೈಸೂರು, ಹೆಬ್ಬಾಳ್, ಜೆಪಿ ನಗರ, ನಂಜನಗೂಡು, ಅಶೋಕಪುರಂ ಮತ್ತು ಕುಶಾಲನಗರ
9739376832
9886200104

WANTED SITE
Wanted Muda allotted 30x40 Site @ Vijayanagar 4th Stage
Contact
9986732628

SITE FOR SALE
MUDA ALLOTTED
30X40 SITE FOR SALE
VIJAYANAGAR 4TH STAGE
FIRST PHASE NEAR RING ROAD (SOUTH FACING)
BROKERS EXCUSE
CONTACT NUMBER
6364322628

JOB'S IN MYSORE
Meet Today Join Tomorrow! Age (18-22), 10th, PUC, BBM ಯಾದವರು Earn (8500/- ರಿಂದ 16500/-) PM ವಿವಿಧ ಹುದ್ದೆಗಳಿಗಾಗಿ No Fee, Only Freshers, ಪರಸ್ಥಳದವರಿಗೆ ಮಾತ್ರ ವಸತಿ. ತಮ್ಮ ವಿವರಗಳೊಂದಿಗೆ ನೇರ ಸಂಪರ್ಕಿಸಿ : "(11 AM to 3 PM) call
ಕಾಲ್: 9342827788

SITE FOR SALE
1) Brahmins layout 40x60 East Facing
2) Suvarna Layout Bogadi 30x50
9686951722

ಮನೆ ಬಾಡಿಗೆಗಿದೆ
ಗ್ರೌಂಡ್ ಫ್ಲೋರ್ G/F 30x40 ಅಳತೆ ಪೂರ್ವಕ್ಕೆ ಬಾಗಿಲು ಸೋಲಾರ್, ವಾರ್ಡ್ರೋಬ್ ನೀರಿನ ವ್ಯವಸ್ಥೆ ಇದೆ. ಸರ್ಕಾರಿ/ಬ್ಯಾಂಕ್ ಅಥವಾ ಖಾಸಗಿ ಉದ್ಯೋಗಸ್ಥರಿಗೆ ಆದ್ಯತೆ ಸಸ್ಯಾಹಾರಿಗಳಿಗೆ ಮತ್ತು ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ. ನಂ. 40 ಚಾ ರಾಧಾ ಕೃಷ್ಣನಗರ, ಮೈಸೂರು
9035085532, 9480711080

SITE FOR SALE
50x80 W/F, 150ft Road, Gungral Chowltry Main Road, Near (Yelwala) Karakanalli Village, Mysore
9986668150

ಶಿಕ್ಷಕಿಯರು ಬೇಕಾಗಿದ್ದಾರೆ
HINDI - 2
Maths / Science -02
8147472526
6360942194

WANTED
Marketing Executive, Sales Executives, Sales Manager, Web Designer Digital Marketing Manager for a reputed Real Estate company in Mysore. (Experienced or Fresher)
6364212612
info@vinyasgroup.com

FOR SALE
Buy & Sell Site, House, Land
1) 20x30 ,30x40 House RK Nagar Dattagalli Kuvempu Nagar
2) 30x40 sites Srinagar attch (JP Nagar)
3)30x40 Duplex and Ground first house Srirampura
4) Commercial 25 Guntas Land Narasipura toll near
5)20x30,30x40,40x60 sites in H D Kote Road and Bogadi Road
9538690359/9035990359

30x40, 30x50 40x60 SITES
ತಕ್ಷಣ ಮನೆ ನಿರ್ಮಿಸಬಹುದು ಕೆ.ಎಸ್.ಲೇಔಟ್ - ಇಲವಾಲ ಬಸ್ ಸ್ಟಾಂಡ್, ಹಿಂಭಾಗ ರೂ. 25 ಲಕ್ಷ
KBL SILICON CITY-INFOSYS ಹಿಂಭಾಗ @ 40 ಲಕ್ಷ
Broker Excuse
7892445689

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸರ್ಹವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸತಕ್ಕದ್ದು. ಅದಕ್ಕೆ ಪತ್ರಿಕೆ ಜವಾಬ್ದಾರರಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ನಗರಸಭೆ ಸಾಮಾನ್ಯ ಸಭೆಯಲ್ಲಿ ಸಮಸ್ಯೆಗಳ ಸುರಿಮಳೆ

ಅಕ್ರಮ ನಲ್ಲಿ, ಕುಡಿಯುವ ನೀರು, ಬೀದಿ ದೀಪ, ಸಿಬ್ಬಂದಿ ನಿರ್ಲಕ್ಷ್ಯತನ, ಸರ್ಕಾರಿ ಆಸ್ತಿ ಕಬಳಿಕೆ ಬಗ್ಗೆ ಸದಸ್ಯರಿಂದ ದೂರು

ಹುಣಸೂರು, ಜೂ.16– ಇಲ್ಲಿನ ನಗರಸಭೆ ಸಭಾಂಗಣ ದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಸಾಮಾನ್ಯ ಸಭೆಯಲ್ಲಿ ಕುಡಿಯುವ ನೀರು, ಬೀದಿ ದೀಪ, ಸಿಬ್ಬಂದಿ ನಿರ್ಲಕ್ಷ್ಯತನ, ಸಿಬ್ಬಂದಿ ಗಳ ಕೊರತೆ, ಅಕ್ರಮ ಖಾತೆ ಮತ್ತಿತರ ಸಮಸ್ಯೆಗಳ ಬಗ್ಗೆ ಸದಸ್ಯರು ದೂರಿನ ಸುರಿಮಳೆಗೈದರು.

ನಗರಸಭೆಯಲ್ಲಿ ಸಿಬ್ಬಂದಿಗಳ ಕೊರತೆಯಿಂದ ಸಾರ್ವಜನಿಕರ ಕೆಲಸಗಳು ಆಗುತ್ತಿಲ್ಲ. ಇದರಿಂದ ಜನರು ತಿಂಗಳುಗಟ್ಟಲೇ ನಗರಸಭೆಗೆ ಅಲೆದಾಡುವಂತಾಗಿದೆ. ಜೊತೆಗೆ ನೌಕರರು ಸರಿಯಾಗಿ ಕರ್ತವ್ಯ ನಿರ್ವಹಿಸದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ಸದಸ್ಯ ಸ್ವಾಮಿಗೌಡ ಆರೋಪಿಸಿದರು.

8 ಸಾವಿರ ಅಕ್ರಮ ನಲ್ಲಿ: ನಗರ ವ್ಯಾಪ್ತಿಯಲ್ಲಿ 8 ಸಾವಿರ ಅಕ್ರಮ ನಲ್ಲಿಗಳಿದ್ದು, 4 ರಿಂದ 5 ಸಾವಿರ ನಲ್ಲಿಗಳು ಮಾತ್ರ ನಗರಸಭೆ ಲೆಕ್ಕದಲ್ಲಿದೆ. ಇದರಿಂದ ನೀರು ಸರಬರಾಜಿಗೆ ತೊಂದರೆಯಾಗುತ್ತಿದೆ ಎಂದು ಸದಸ್ಯ ಹರೀಶ್ ತಿಳಿಸಿದರು.

ನಗರಸಭೆ ಬ್ರೋಕರ್ ಕಚೇರಿ: ಇಲ್ಲಿನ ನಗರಸಭೆಯಲ್ಲಿ ಜನಪ್ರತಿನಿಧಿಗಳಿಗೆ ಬೆಲೆ ಇಲ್ಲದಂತಾಗಿದೆ. ಸಾರ್ವಜನಿಕರ ಯಾವುದೇ ಕಾರ್ಯಗಳು ನಡೆಯುತ್ತಿಲ್ಲ. ಆದರೆ ಬ್ರೋಕರ್‌ಗಳಿಗೆ ಸಿಬ್ಬಂದಿ ತಕ್ಷಣ ಕೆಲಸ ಮಾಡಿ ಕೊಡುತ್ತಾರೆ. ಈ ಸಂಬಂಧ ನಮ್ಮ ಬಳಿ ಸಿಡಿ ಇದ್ದು, ಲೋಕಾಯುಕ್ತಕ್ಕೆ ದೂರು ಸಲ್ಲಿಸಿ ಪ್ರಕರಣ ದಾಖಲಿಸಲಾಗಿದೆ. ಆದರೂ ಎಚ್ಚೆತ್ತುಕೊಳ್ಳದ ಅಧಿಕಾರಿಗಳು ರಾಜರೋಷವಾಗಿ ಬ್ರೋಕರ್‌ಗಳಿಗೆ ಕೆಲಸ ಮಾಡಿ ಕೊಡುತ್ತಾರೆ. ಹೀಗಾಗಿ ನಗರಸಭೆ ಬ್ರೋಕರ್ ಕಚೇರಿಯಾಗಿದೆ ಎಂದು ಸದಸ್ಯ ವಿವೇಕ್ ದೂರಿದರು.

ನಗರಸಭೆಗೆ ಲಕ್ಷಾಂತರ ರೂ. ನಷ್ಟ: ನಗರಸಭೆ ಐಡಿಎಸ್‌ಎಂಟಿ ಮಳಿಗೆಗಳ ಹರಾಜು ನಡೆದು ವರ್ಷ ಕಳೆದರೂ ಅಧಿಕಾರಿಗಳು ಯಾವುದೇ ಕಾರಾರು ಮಾಡಿಕೊಳ್ಳದೇ, ಬಾಡಿಗೆ ವಸೂಲಿ ಮಾಡದ ಕಾರಣ ನಗರ ಸಭೆಗೆ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಇದಕ್ಕೆ ಯಾರು ಹೊಣೆ? ಎಂದು ಪ್ರಶ್ನಿಸಿದ ಸದಸ್ಯ ಸರವಣ, ನಗರಸಭೆಯ ಎಸ್‌ಸಿವಿಡಿಎಸ್ ಚಿತ್ರಮಂದಿರದ ಬಾಡಿಗೆ 55 ಲಕ್ಷಕ್ಕೂ ಹೆಚ್ಚಾಗಿದ್ದು, ಅದನ್ನು ವಸೂಲಿ ಮಾಡಲು ಅಧಿಕಾರಿಗಳು ನೋಟಿಸ್ ನೀಡಿದ್ದೇವೆ ಎಂದು ನಿರ್ಲಕ್ಷಿಸಿದ್ದಾರೆ ಎಂದರು.



ಕೆಟ್ಟು ನಿಂತ ಬೀದಿ ದೀಪಗಳು: ನಗರ ವ್ಯಾಪ್ತಿಯ ಬಹುತೇಕ ವಾರ್ಡ್‌ಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಿದೆ. ಅಲ್ಲದೇ ನಗರ ವ್ಯಾಪ್ತಿಯ ಬಹುತೇಕ ಬೀದಿ ದೀಪಗಳು ಕೆಟ್ಟು ಹೋಗಿದ್ದು, ಅವುಗಳನ್ನು ಬದಲಾವಣೆ ಮಾಡಿಲ್ಲ. ಬೀದಿ ದೀಪ ನಿರ್ವಹಣೆ ಗುತ್ತಿಗೆ ಪಡೆದ ಗುತ್ತಿಗೆದಾರ ಸರಿಯಾಗಿ ನಿರ್ವಹಣೆ ಮಾಡದೇ ಬೇಜವಾಬ್ದಾರಿ ತೋರುತ್ತಿದ್ದಾನೆ. ಹೀಗಾಗಿ ಆತನನ್ನು ಬದಲಾವಣೆ ಮಾಡಿ ಎಂದು ಸದಸ್ಯರೆಲ್ಲರೂ ಒತ್ತಾಯಿಸಿದರೂ ಅಧಿಕಾರಿಗಳು ಮಾತ್ರ ಮೌನಕ್ಕೆ ಜಾರಿ, ಪ್ರತಿ ತಿಂಗಳು ಲಕ್ಷ ಲಕ್ಷ ಬಿಲ್ ನೀಡುತ್ತಿದ್ದಾರೆ. ಚುನಾಯಿತ ಜನಪ್ರತಿನಿಧಿಗಳು ಸಾರ್ವಜನಿಕರಿಗೆ ಮೂಲ ಸೌಕರ್ಯ ಒದಗಿಸಲು ಸಾಧ್ಯವಾಗುತ್ತಿಲ್ಲ ಎಂದು ಸದಸ್ಯ ಗಣೇಶ್ ಕುಮಾರಸ್ವಾಮಿ ತಿಳಿಸಿದರು.

ನಗರ ಸ್ವಚ್ಛಗೊಳಿಸುವ ಪೌರಕಾರ್ಮಿಕರು ಕುಡಿಯುವ ನೀರು, ಶೌಚಾಲಯ ಸೇರಿದಂತೆ ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಇವರನ್ನು ಗಮನಿಸಿಕೊಳ್ಳದೇ ಅಧಿಕಾರಿಗಳು ತೊಂದರೆ ನೀಡುತ್ತಿದ್ದಾರೆ ಎಂದು ಸದಸ್ಯೆ ರಾಣಿ ಪೆರುಮಾಳ್ ಆರೋಪಿಸಿದರು.

ಪೌರ ಕಾರ್ಮಿಕರಿಗೆ ವಿಶ್ರಾಂತಿ ಗೃಹ ಪೌರ ಕಾರ್ಮಿಕರಿಗೆ ಮೂಲ ಸೌಕರ್ಯ ಕಲ್ಪಿಸುವ ಜೊತೆಗೆ ನಾಲ್ಕೈದು ವಾರ್ಡ್‌ಗಳಿಗೊಂದು ವಿಶ್ರಾಂತಿ ಗೃಹಗಳನ್ನು ನಿರ್ಮಿಸಲಾಗುವುದು. ಆ ಮೂಲಕ ಪೌರ ಕಾರ್ಮಿಕರ ವಿಶ್ರಾಂತಿಗೆ ಅವಕಾಶ ಕಲ್ಪಿಸಲಾಗುವುದು. ಈ ಸಂಬಂಧ ಪೌರಾಯುಕ್ತರು ಕ್ರಿಯಾಯೋಜನೆ ತಯಾರಿಸಿ ನಗರ ವ್ಯಾಪ್ತಿಯಲ್ಲಿ 6 ಕಡೆ ವಿಶ್ರಾಂತಿ ಗೃಹಗಳನ್ನು ನಿರ್ಮಿಸುವಂತೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಜು.20ರೊಳಗೆ ಸಕ್ರಮಗೊಳಿಸಿ: ನಗರದಲ್ಲಿ 62 ಸಾವಿರ ಜನಸಂಖ್ಯೆ ಇದ್ದು, 10 ಓವರ್ ಹೆಡ್ ಟ್ಯಾಂಕ್‌ಗಳಿವೆ. ಒಟ್ಟು 12,700 ನಲ್ಲಿಗಳಿದ್ದು, ಈ ಪೈಕಿ 8 ಸಾವಿರ ಅಕ್ರಮ ನಲ್ಲಿಗಳಿವೆ ಎಂದು ಸಭೆ ಗಮನಕ್ಕೆ ತಂದಾಗ ಪೌರಾಯುಕ್ತರು, ಸಿಬ್ಬಂದಿ ಚುನಾಯಿತ ಸದಸ್ಯರ ಸಹಕಾರದೊಂದಿಗೆ ಜು.20ರೊಳಗೆ ಮನೆ ಮನೆಗೆ ಹೋಗಿ ಜನರನ್ನು ಒಲೈಸಿ ಅಕ್ರಮ ನಲ್ಲಿಗಳನ್ನು ಸಕ್ರಮಗೊಳಿಸಿ. ಒಪ್ಪದಿದ್ದರೇ ತೆರವುಗೊಳಿಸಿ. ಉಪವಿಭಾಗಾಧಿಕಾರಿಗಳು ಪ್ರತಿದಿನ ನಮಗೆ ವರದಿ ನೀಡುತ್ತಾರೆ ಎಂದು ಜಿಲ್ಲಾಧಿಕಾರಿ ರಾಜೇಂದ್ರ ತಿಳಿಸಿದರು.

ಸರ್ಕಾರಿ ಆಸ್ತಿ ಖಾಸಗಿಯವರ ಪಾಲು

ನಗರ ವ್ಯಾಪ್ತಿ ಸರ್ಕಾರಿ ಜಾಗಗಳನ್ನು ಖಾಸಗಿಯವರು ಕಬಳಿಸುತ್ತಿದ್ದಾರೆ. ಇವುಗಳನ್ನು ವಶಪಡಿಸಿಕೊಳ್ಳುವಂತೆ ದಾಖಲೆ ಸಮೇತ ಅಧಿಕಾರಿಗಳ ಗಮನಕ್ಕೆ ತಂದರೂ, ಅಧಿಕಾರಿಗಳು ಖಾಸಗಿಯವರೊಂದಿಗೆ ಶಾಮೀಲಾಗಿ ಸದಸ್ಯರನ್ನು ಗುರಿಯಾಗಿಸಿಕೊಂಡು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಅಲ್ಲದೇ ಮೇಲಧಿಕಾರಿಗಳಿಗೆ ಸುಳ್ಳು ವರದಿ ನೀಡಿ ಸದಸ್ಯತ್ವ ರದ್ದಿಗೆ ಒತ್ತಾಯಿಸುತ್ತಾರೆ ಎಂದು ಸದಸ್ಯ ಹೆಚ್.ಪಿ. ಸತೀಶ್ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ನಗರ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಸರ್ಕಾರಿ ಜಾಗ ಕಬಳಿಕೆ ಮತ್ತು ಒತ್ತುವರಿಯಾಗಿದೆ. ಅವುಗಳನ್ನು ಪಟ್ಟಿ ಮಾಡಿಕೊಡಿ. ಇದಕ್ಕಾಗಿ ಪ್ರತ್ಯೇಕ ಸಭೆ ಕರೆದು ಅಧಿಕಾರಿಗಳೊಂದಿಗೆ ಚರ್ಚಿಸಿ ಒತ್ತುವರಿ ತೆರವುಗೊಳಿಸುವ ಮೂಲಕ ಸರ್ಕಾರಿ ಜಾಗಗಳನ್ನು ಉಳಿಸೋಣ ಎಂದು ಭರವಸೆ ನೀಡಿದರು.

ನಗರಕ್ಕೆ ಹೊಂದಿಕೊಂಡಿರುವ ಸುತ್ತಮುತ್ತಲ ಗ್ರಾಪಂಗಳಲ್ಲಿ ಖಾತೆ ಮಾಡುವಾಗ ನಗರಸಭೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ತಂದು ಎಚ್ಚರಿಕೆಯಿಂದ ಕೆಲಸ ಮಾಡಿ ಎಂದು ಪಿಡಿಒ ಮತ್ತು ತಾಪಂ ಇಓಗೆ ಸೂಚಿಸಿದರು.

ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ, ಉಪವಿಭಾಗಾಧಿಕಾರಿ ರುಚಿ ಬಿಂದಾಲ್, ತಹಸೀಲ್ದಾರ್ ಡಾ. ಅಶೋಕ್, ತಾಪಂ ಇಓ ಮನು, ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಶ್ವೇತ, ಪೌರಾಯುಕ್ತ ಸುಜಯ್ ಕುಮಾರ್, ಜಿಲ್ಲಾ ನಗರಸಭಾ ಯೋಜನಾ ನಿರ್ದೇಶಕಿ ಶುಭ, ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಗದೀಶ್, ಜಲಮಂಡಳಿ ಎಇಇ ಶೋಯೆಬ್, ಎಇ ಅಪ್ಸರ್, ಚೆಸ್ಕಾಂ ಎಇಇ ಸಿದ್ದಪ್ಪ ಇನ್ನಿತರರಿದ್ದರು.

ಆಯತಪ್ಪಿ ಬಿದ್ದು ವಿದ್ಯಾರ್ಥಿ ಸಾವು

ನಂಜನಗೂಡು, ಜೂ.16– ಶಾಲೆ ಮುಗಿದ ನಂತರ ಖೋಖೋ ಆಟ ಅಭ್ಯಾಸ ಮಾಡುತ್ತಿದ್ದ ವೇಳೆ ವಿದ್ಯಾರ್ಥಿಯೊಬ್ಬ ಆಯತಪ್ಪಿ ಕೆಳಗೆ ಬಿದ್ದ ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ ಅಸುನೀಗಿರುವ ಘಟನೆ ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿ ಜರುಗಿದೆ.

ಹರದನಹಳ್ಳಿ ಗ್ರಾಮದ ಹೆಚ್.ಎಸ್. ಪಾಪಣ್ಣ ಮತ್ತು ಕುಮಾರಿ ದಂಪತಿ ಪುತ್ರ ಶಶಾಂಕ್(13) ಮೃತ ದುರ್ದೈವಿ. ಈತ ಹರದನಹಳ್ಳಿ ಸರ್ಕಾರಿ ಪ್ರೌಢ ಶಾಲೆಯಲ್ಲಿ 9ನೇ ತರಗತಿ ವ್ಯಾಸಾಂಗ ಮಾಡುತ್ತಿದ್ದು, ಶುಕ್ರವಾರ ಸಂಜೆ ಶಾಲೆ ಮುಗಿದ ನಂತರ ಶಾಲಾ ಆವರಣದಲ್ಲೇ ಖೋಖೋ ಆಟ ಅಭ್ಯಾಸ ಮಾಡುತ್ತಿದ್ದ ಎನ್ನಲಾಗಿದೆ. ಆಟದ ವೇಳೆ ಶಶಾಂಕ್ ಆಯತಪ್ಪಿ ಕೆಳಗೆ ಬಿದ್ದ ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ ರಕ್ತಸ್ರಾವವಾಗಿದೆ. ಕೂಡಲೇ ಆತನನ್ನು ಹೆಚ್.ಡಿ. ಕೋಟೆ ತಾಲೂಕಿನ ಹರದನಹಳ್ಳಿ ಪ್ರಾಥಮಿಕ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾನೆ. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ.

ಸಾಕಮ್ಮ ನಿಧನ

ಹುಣಸೂರು, ಜೂ.16– ನಗರಸಭೆ



ನೌಕರ ಕೃಷ್ಣೇಗೌಡರ ತಾಯಿ ಹಾಗೂ ಚಿಕ್ಕ ಹುಣಸೂರು ನಿವಾಸಿ ಲೇ.ಸುಬ್ಬೇಗೌಡರ ಪತ್ನಿ ಸಾಕಮ್ಮ(82) ನಿಧನರಾದರು.

ಮೃತರು ಐವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗ ಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಚಿಕ್ಕಹುಣ ಸೂರಿನ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹದೇವ್

ತಿ.ನರಸೀಪುರ, ಜೂ.16– ಪುರಸಭೆ



ಮಾಜಿ ಅಧ್ಯಕ್ಷ ಎನ್.ಪಿ. ಕನಕರಾಜು ಸಹೋದರ ಮಹದೇವ್(71) ಶುಕ್ರವಾರ ಸಂಜೆ ನಿಧನರಾದರು. ಮೃತರು ಪತ್ನಿ ಚಿಕ್ಕ ತಾಯಮ್ಮ ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ 11 ಗಂಟೆಗೆ ಪಟ್ಟಣದ ಕುರುಬ ಸಮುದಾಯದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಪುರಸಭಾ ಮಾಜಿ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ, ಸದಸ್ಯ ಬಾದಾಮಿ ಮಂಜು, ನಾಗರತ್ನ ಮಾದೇಶ್ ಮೃತರ ಅಂತಿಮ ದರ್ಶನ ಪಡೆದರು.

ನಾಗರಾಜಪ್ಪ

ಸುತ್ತೂರು, ಜೂ.16– ನಂಜನಗೂಡು



ತಾಲೂಕು ಜೀಮಾರ ಹಳ್ಳಿ ಗ್ರಾಮದ ವೀರಶೈವ ಮುಖಂಡ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ನಾಗರಾಜಪ್ಪ (73) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಐವರು ಸಹೋದರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೋಟೆಯಲ್ಲಿ ಆದಿವಾಸಿ ಗ್ರಾಮಸಭಾ ವೇದಿಕೆ ಕಾರ್ಯಾಗಾರ

ಹೆಚ್.ಡಿ.ಕೋಟೆ, ಜೂ.16– ತಾಲೂಕಿನ ಗಿರಿಜನ ಸಮುದಾಯದ ಜೇನು ಕುರುಬ ಜನಾಂಗಕ್ಕೆ 775 ಮನೆಗಳು ಮಂಜೂರಾಗಿದ್ದು, ಪಿಡಿಓ ಮನೆ ನಿರ್ಮಾಣದ ಜಾಗವನ್ನು ಜಿಪಿಎಸ್ ಮಾಡಿದಾಗ ಆ ಸ್ಥಳ ಹುಲಿಸಂರಕ್ಷಿತ ಅರಣ್ಯವಲಯ ಎಂದು ಕಂಡು ಬರುತ್ತಿರುವುದರಿಂದ ಮನೆ ನಿರ್ಮಾಣ ಮಾಡಲು ಸಮಸ್ಯೆಯಾಗುತ್ತಿದೆ ಎಂದು ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ನಾರಾಯಣಸ್ವಾಮಿಗೌಡ ತಿಳಿಸಿದರು.

ಪಟ್ಟಣದ ನಿಸರ್ಗ ಸಂಸ್ಥೆಯಲ್ಲಿ ಆದಿವಾಸಿ ಸುಸ್ಥಿರ ಅಭಿವೃದ್ಧಿ ಯೋಜನೆಯಡಿ ನಡೆದ ತಾಲೂಕು ಆದಿವಾಸಿ ಗ್ರಾಮಸಭಾ ವೇದಿಕೆ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಜೇನು ಕುರುಬ ಜನಾಂಗಕ್ಕೆ ಮನೆಗಳು ಮಂಜೂರಾಗಿದ್ದು, ಬೊಮ್ಮಲಾಪುರ ಹಾಡಿಯಲ್ಲಿ ಪಿಡಿಓ ಮನೆ ನಿರ್ಮಾಣದ ಜಾಗವನ್ನು ಜಿಪಿಎಸ್ ಮಾಡಿದಾಗ ಆ ಸ್ಥಳ ಹುಲಿಸಂರಕ್ಷಿತ ಅರಣ್ಯ ವಲಯದಲ್ಲಿರುವುದರಿಂದ ಮನೆ ನಿರ್ಮಾಣಕ್ಕೆ ಸಮಸ್ಯೆಯಾಗುತ್ತಿದೆ ಎಂದರು.

2006ರ ಅರಣ್ಯ ಹಕ್ಕಿಗಾಗಿ ನಮೂನೆ–ಎ ವೈಯಕ್ತಿಕ ಹಕ್ಕು ಪತ್ರಕ್ಕೆ ಅರ್ಜಿ ಸಲ್ಲಿಸಲು ಮೂಲ ದಾಖಲಾತಿಗಳಾದ 2005ಕ್ಕೆ ಹಿಂದಿನ 2 ದಾಖಲಾತಿಗಳನ್ನು ಸಲ್ಲಿಸಬೇಕು. ನಿಸರ್ಗ ಸಂಸ್ಥೆ ಆದಿವಾಸಿ ಸುಸ್ಥಿರ ಅನುಭವದಲ್ಲಿರಬೇಕು. ಸಾಮುದಾಯಿಕ ಹಕ್ಕಿಗೆ ಈಗಾಗಲೇ ಕೆಲವು ಹಾಡಿಗಳ ಸರ್ವೆಯಾಗಿದ್ದು, ಕೃಷಿ ಇಲಾಖೆಯ ಎಡಿಸಿಆರ್‌ಎ ಕಡೆಯಿಂದ ಭೂ ನಕ್ಷೆ ನೀಡದಿರುವುದರಿಂದ ಸರ್ವೆ ವಿಳಂಬವಾಗುತ್ತಿದೆ ಎಂದ ಅವರು 1972 ವನ್ಯಜೀವಿ ಕಾಯ್ದೆಯಡಿ, ಪುನರ್ವಸತಿಗೊಂಡಿರುವ 1800 ಕುಟುಂಬಗಳಿಗೆ ಮುಜಾಫರ್ ಅಸಾದಿ ವರದಿಯಂತೆ ಪ್ಯಾಕೇಜ್ ಅನ್ನು ಅನುಷ್ಠಾನ ಮಾಡಬೇಕಾಗಿದೆ ಎಂದರು.



ಹಾಡಿಗಳಲ್ಲಿ ದುಶ್ಚಟಗಳು ಹೆಚ್ಚಾಗುತ್ತಿವೆ. ಅಕ್ರಮ ಮದ್ಯ ಮಾರಾಟವನ್ನು ಹಾಡಿ ಜನರೇ ತಡೆಗಟ್ಟಬೇಕಾಗಿದೆ ಎಂದರು.

ಅಭಿವೃದ್ಧಿ ಯೋಜನೆ ಸಂಯೋಜಕ ಅವಿನಾಶ್ ಮಾತನಾಡಿದರು. ಈ ವೇಳೆ ಸೋನಹಳ್ಳಿ ಹಾಡಿ ಮಾದೇವಮ್ಮ, ಮೇಟಿಕುಪ್ಪೆ ಹಾಡಿಯ ಗ್ರಾಪಂ ಸದಸ್ಯರಾದ ಕೆಂಚ, ನಿಸರ್ಗ ಸಂಸ್ಥೆಯ ಆದಿವಾಸಿ ಸುಸ್ಥಿರ ಅಭಿವೃದ್ಧಿ ಯೋಜನೆಯ ಗುರುದೇವಾರಾಧ್ಯ, ಮಾರ್ಸಲಿನ್, ಚಿಕ್ಕತಿಮ್ಮನಾಯ್ಕ, ರಾಜು ಚೈಲ್ ಲೈನ್ –1098 ಯೋಜನೆಯ ಕಾರ್ಯಕರ್ತರಾದ ಕನ್ಯಾಕುಮಾರಿ, ಜ್ಯೋತಿ, ನಿರ್ಮಲ, 20 ಹಾಡಿಯ ಮುಖಂಡರು, ಅರಣ್ಯ ಹಕ್ಕು ಸಮಿತಿಯ ಅಧ್ಯಕ್ಷರು, ಕಾರ್ಯದರ್ಶಿಗಳು ಭಾಗವಹಿಸಿದ್ದರು.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಧರ್ಮಸ್ಥಳ ಸಂಸ್ಥೆಯ ನಿರ್ದೇಶಕಿ ಲೀಲಾವತಿ

ಕಂಪಲಾಪುರ, ಜೂ.16– ಇತ್ತೀಚಿನ ದಿನಗಳಲ್ಲಿ ಮರಗಳ ಹನನ ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೊಡಗು ಜಿಲ್ಲೆ ಬಿಸಿ ಟ್ರಸ್ಟ್ ನಿರ್ದೇಶಕಿ ಲೀಲಾವತಿ ತಿಳಿಸಿದರು.

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿದ್ದ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಮನೆ ಹಾಗೂ ಜಮೀನಿನಲ್ಲಿ ಖಾಲಿ ಇರುವ ಜಾಗಗಳಲ್ಲಿ ಸಸಿಗಳನ್ನು ನೆಟ್ಟು ಪೋಷಿಸಬೇಕು. ಆ ಮೂಲಕ ನಾವು ಇತರರಿಗೆ ಮಾದರಿಯಾಗಬೇಕು. ಮರ ಗಿಡಗಳಿಂದ ನಮಗೆ ಶುದ್ಧ ಗಾಳಿ ಸಿಗುತ್ತದೆ. ಹೀಗಾಗಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಯೋಜನಾಧಿಕಾರಿ ಸುರೇಶ್ ಶೆಟ್ಟಿ, ಗ್ರಾಪಂ ಅಧ್ಯಕ್ಷೆ ಶೀಲಾ, ಮಾಜಿ ಅಧ್ಯಕ್ಷೆ ಮಮತಾ, ಶ್ರೀ ಕ್ಲಿನಿಕ್ ವೈದ್ಯೆ ಡಾ.ರಂಜಿತಾ, ಮುಖ್ಯ ಶಿಕ್ಷಕ ಕೃಷ್ಣಕುಮಾರ್, ವಲಯ ಮೇಲ್ವಿಚಾರಕಿ ರವಿಕಲಾಶೆಟ್ಟಿ ಸೇರಿದಂತೆ ಶಿಕ್ಷಕ ವೃಂದ, ಸೇವಾ ಪ್ರತಿನಿಧಿಗಳು ಹಾಜರಿದ್ದರು.



ರೈತರು ಅರಣ್ಯ ಕೃಷಿಗೆ ಹೆಚ್ಚಿನ ಒತ್ತುಕೊಟ್ಟು ಪರಿಸರ ಕಾಪಾಡಿ




ಸರಗೂರು, ಜೂ.16– ರೈತರು ಅರಣ್ಯ ಕೃಷಿಗೆ ಹೆಚ್ಚಿನ ಒತ್ತುಕೊಟ್ಟು ಪ್ರಕೃತಿ ಮತ್ತು ಪರಿಸರ ಕಾಪಾಡಿಕೊಳ್ಳಬೇಕು ಎಂದು ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿ ಪುತ್ರ ಚಂದನ್‌ಗೌಡ ಸಲಹೆ ನೀಡಿದರು.

ತಾಲೂಕಿನ ನುಗು ಪ್ರವಾಸಿ ಮಂದಿರದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರೈತರು ಅರಣ್ಯ ಕೃಷಿಗೆ ಹೆಚ್ಚು ಒತ್ತು ನೀಡುವ ಮೂಲಕ ತಮ್ಮ ಜಮೀನಿನಲ್ಲಿ ಪ್ರತಿ ಎಕರೆಗೆ 20 ರಿಂದ 25 ಮರಗಳನ್ನು ಬೆಳೆಸಿ ಹೆಚ್ಚಿನ ಲಾಭ ಪಡೆಯುವ ಜೊತೆಗೆ ಪ್ರಕೃತಿ ಮತ್ತು ಪರಿಸರ ಕಾಪಾಡಬೇಕು ಎಂದರು.

ರೈತರು ಹೆಚ್ಚು ಲಾಭ ದೊರೆಯುವ ಅರಣ್ಯ ಬೆಳೆಗಳಾದ ಮಹಾಗನಿ, ರಬ್ಬರ್, ತೇಗ, ಸಿಲ್ವರ್ ಮರಗಳನ್ನು ಜಮೀನಿನ ಬದುಗಳಲ್ಲಿ ವೈಜ್ಞಾನಿಕವಾಗಿ ಬೆಳೆಯಬೇಕು ಎಂದು ಸಲಹೆ ನೀಡಿದ ಅವರು ಅನ್ನದಾತರೂ ಶ್ರೀಮಂತರಾಗಬೇಕು, ಉದ್ಯಮಿಗಳಾಗಬೇಕು. ಆ ನಿಟ್ಟಿನಲ್ಲಿ ರೈತರಿಗೆ ರೈತ ಕಲ್ಯಾಣ ಸಂಘ ನೆರವಾಗಲಿದೆ ಎಂದು ಹೇಳಿದರು.

ಈ ವೇಳೆ ರೈತ ಕಲ್ಯಾಣ ಸಂಘದ ಪದಾಧಿಕಾರಿಗಳಾದ ಹೇಮಂತ್ ಗೌಡ, ಹರೀಶ್, ಮೂರ್ತಿ, ಕಂದಸ್ವಾಮಿ, ಉಮೇಶ್, ಪ್ರತಾಪ್, ಸುರೇಶ್, ಶಿವಣ್ಣಗೌಡ, ಪಳನಿಸ್ವಾಮಿ, ರವಿ, ಬಸವರಾಜ್, ಶಂಕರ್, ಗಜೇಂದ್ರ, ಪ್ರಭುಸ್ವಾಮಿ, ನಂದೀಶ್, ನಾಗೇಶ್, ಚೇತನ್, ಗಾಯಿತ್ರಿ ಮತ್ತು ಪುಟ್ಟಮ್ಮ ಇತರರಿದ್ದರು.



ಶಾಸಕ ಜಿ.ಟಿ.ಹರೀಶ್‌ಗೌಡರ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಸಂಘದ ಸಗಟು ಮಾರಾಟಗಾರರ ಸಂಘದ ಸಭೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ತಿ.ನರಸೀಪುರ ಟಿಎಪಿಸಿಎಂಎಸ್ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ಅವಿರೋಧವಾಗಿ ಆಯ್ಕೆಯಾದರು. ಈ ವೇಳೆ ಟಿಎಪಿಸಿಎಂಎಸ್ ಉಪಾಧ್ಯಕ್ಷ ಡಣನಾಯಕನಪುರ ಮಲ್ಲಣ್ಣ, ನಿರ್ದೇಶಕರಾದ ಬಸವರಾಜು, ಮೂಗೂರು ಜಯಣ್ಣ, ಫ್ಯಾನ್ಸಿ ಮೋಹನ್, ಕಾರ್ಯದರ್ಶಿ ಜಿ.ರಘುನಂದನ್, ಕಸಬಾ ಪಿಎಸಿಎಸ್ ನಿರ್ದೇಶಕ ಶೇಖರ್, ಮಹೇಶ್, ತಿರುಮಕೂಡಲು ಲಕ್ಷ್ಮಣ್, ದೊಡ್ಡಲಿಂಗೇಗೌಡ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿ ಕೇರಳ ಸ್ಟೋರಿ (ಹಿಂ): ಬೆ.10.25ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಡೇರ್‌ಡೆವಿಲ್ ಮುಸ್ತಫಾ (ಕ): ಬೆ.10.05ಕ್ಕೆ, ಸಂ.6.50ಕ್ಕೆ, ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ): ಮ.1.10ಕ್ಕೆ, ಜೆರ್ಸಿ ನಂಬರ್ 10 (ಕ): ಸಂ.4.05ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.10ಕ್ಕೆ.
ಸ್ಕ್ರೀನ್ 3	ಇವಿಲ್ ಡೆಡ್ ರೈಸ್ (ಇಂ): ಬೆ.11ಕ್ಕೆ, ಪಿಚ್ಚೈಕಾರನ್2 (ತ): ಮ.1.20ಕ್ಕೆ, ಸಂ.4.25ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.7.30ಕ್ಕೆ, ಚಾರ್ಲ್ಸ್ ಎಂಟರ್‌ಪ್ರೈಸಸ್ (ಮ): ಸಂ.9.55ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಫಾಸ್ಟ್ X (3ಡಿ)(ಇಂ): ಬೆ.10.30, ಮ.1.30ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಕೇರಳ ಸ್ಟೋರಿ (ಹಿಂ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ದಿ ಕೇರಳ ಸ್ಟೋರಿ (ಹಿಂ): ಬೆ.11ಕ್ಕೆ, ಮ.1.55ಕ್ಕೆ, ಸಂ.4.50ಕ್ಕೆ, ರಾ.10.30ಕ್ಕೆ, ಅನುರಾಗಂ (ಮ): ರಾ.7.45ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.9.30ಕ್ಕೆ, ಪಿಚ್ಚೈಕಾರನ್ 2(ತ): ಮ.12.20ಕ್ಕೆ, ರಾ.10.05ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ (ಕ):** ಸಂ.4.50ಕ್ಕೆ, **ಚೌಕಾಬಾರ (ಕ):** ರಾ.7.50ಕ್ಕೆ, **ಕ್ರಿಡ್ 3 (ಇಂ):** ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ):** ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ):** ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ (ಮ):** ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್ (ತ):** ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6 (ಇಂ):** ಮ.2.45ಕ್ಕೆ, ರಾ.7.45ಕ್ಕೆ, **65 (ಇಂ):** ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಅಹಿಂಸಾ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಟಕ್ಕರ್ (ತೆ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಡಾರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಐರಾವನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೇರ್ ಡೆವಿಲ್ ಮುಸ್ತಾಫಾ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಪೋರ್ ತೋಳಿಲ್ (ತ)	4 ಪ್ರದರ್ಶನಗಳು
ಸಂಗಂ	
ಆದಿಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಬೇರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
2018 (ಕ)	4 ಪ್ರದರ್ಶನಗಳು
ಪ್ರಭಾ	
ಐರಾವನ್ (ಕ)	4 ಪ್ರದರ್ಶನಗಳು

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 10ರಲ್ಲಿ

ಕೆಲಸಕ್ಕೆ ಬೇಕಾಗಿದ್ದಾರೆ

ಚಿಕ್‌ಪೇಟೆ ದೊನ್ನೆ ಬಿರಿಯಾನಿ ಹೌಸ್,
ಟೆಂಪಲ್ ರೋಡ್, ಒಂಟಿಕೊಪ್ಪಲ್, ಮೈಸೂರು

1. ತಂದೂರಿ ಚೆಫ್:
ಒಂದು ವರ್ಷ ಅನುಭವ, ಸಂಬಳ 15000 ದಿಂದ 18000 ರವರೆಗೆ

2. ಸ್ಟಾರ್ಟರ್ಸ್ ಚೆಫ್:
ಒಂದು ವರ್ಷ ಅನುಭವ, ಸಂಬಳ 13000 ದಿಂದ 16000

3. ಸಪ್ಲೇಯರ್: ಒಂದು ವರ್ಷ ಅನುಭವ ಸಂಬಳ 12000 ದಿಂದ 14000

ಊಟ ಮತ್ತು ವಸತಿ ಉಚಿತವಾಗಿರುತ್ತದೆ.

ದೂರವಾಣಿ ಸಂಖ್ಯೆ:
8105060877
8762140088

---

2 ಮತ್ತು 4ನೇ ಸೆಮಿಸ್ಟರ್ ಕನ್ನಡ ಗೈಡುಗಳು ಬಂದಿವೆ
ವಿಚಾರಿಸಿರಿ

ಚೇತನ ಬುಕ್ ಹೌಸ್, ಮೈಸೂರು

ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ

2 ಹಳೇ ಮರಗಳು ಮಾರಾಟಕ್ಕಿದೆ ವಿಚಾರಿಸಿರಿ
ಚೇತನ ಬುಕ್‌ಹೌಸ್, ಮೈಸೂರು

ಬೇಕಾಗಿದ್ದಾರೆ

ಬಿ.ಕಾಂ/ ಬಿ.ಬಿ.ಎ ಪದವಿ ಜೊತೆಗೆ ಕನಿಷ್ಠ 2 ವರ್ಷ ಪತ್ತಿನ ಸಹಕಾರ ಸಂಘದಲ್ಲಿ ಲೆಕ್ಕ ಪತ್ರ ನಿರ್ವಹಣೆ, ಕನ್ನಡ ಟೈಪಿಂಗ್ ಮತ್ತು ಕಂಪ್ಯೂಟರ್ ಜ್ಞಾನ ಹೊಂದಿರುವವರು ಪುರುಷರಿಗೆ ಆದ್ಯತೆ ಕೂಡಲೇ ಸಂಪರ್ಕಿಸಿ

9448464850

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ

17.06.2023 ರ ಶನಿವಾರ



ಶ್ರೀ ಬಿ.ಜೆ. ಚಂದ್ರಶೇಖರ್

ಶ್ರೀರಂಗಪಟ್ಟಣ ತಾಲ್ಲೂಕು ಬೆಳಗೊಳ ಗ್ರಾಮದಲ್ಲಿ ವಾಸವಾಗಿರುವ ದಿವಂಗತ. ದೊಡ್ಡಬೋರಮ್ಮ ಮತ್ತು ದಿವಂಗತ. ಬಿ.ಟಿ. ಜವರೇಗೌಡರ ಮಕ್ಕಳಾದ ಬಿ.ಜೆ. ರಾಮಚಂದ್ರರವರು ಮಾಡುವ ವಿಜ್ಞಾಪನೆಗಳು ನನ್ನ ತಮ್ಮ ಶ್ರೀ ಬಿ.ಜೆ. ಚಂದ್ರಶೇಖರ್ ರವರು ದಿನಾಂಕ 07.06.2023 ರ ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.

ಇವರ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 17.06.2023 ರ ಶನಿವಾರದಂದು ಬೆಳಗ್ಗೆ 11.00 ಘಂಟೆಗೆ ಬಲಮುರಿ ಕ್ಷೇತ್ರದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಕೋರಬೇಕೆಂದು ವಿನಂತಿಸುತ್ತೇವೆ.

ಇಂತಿ ದುಃಖ–ತಪ್ತರು: ಧರ್ಮಪತ್ನಿ ಶ್ರೀಮತಿ ಮಂಜುಳ, ಮಕ್ಕಳಾದ ಶ್ರೀ ಸಿ. ಶಿವಕುಮಾರ್ ಮತ್ತು ಶ್ರೀ ಸಿ. ಶಶಿಕುಮಾರ್ ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಿ.ಟಿ. ಜವರೇಗೌಡರ ಕುಟುಂಬ ವರ್ಗದವರು

ಎಸ್.ಟಿ.ಜಿ ಪದವಿ ಪೂರ್ವ ಕಾಲೇಜು, ಚಿನಕುರಳಿ, ಪಾಂಡವಪುರ ತಾಲ್ಲೂಕು, ಮಂಡ್ಯ

ತಕ್ಷಣ ಬೇಕಾಗಿದ್ದಾರೆ

ಅನುಭವವುಳ್ಳ ಸೆಕ್ಯೂರಿಟಿ ಸೂಪರ್‌ವೈಸರ್ಸ್
ಸೆಕ್ಯೂರಿಟಿ ಗಾರ್ಡ್ಸ್, ಅಡುಗೆ ಭಟ್ಟರು
ಡ್ರೈವರ್ಸ್

ಸಂಪರ್ಕಿಸಿ: **9108481695**

ಮುಡಾ ಅನುಮೋದಿತ ಸೈಟುಗಳು ಮಾರಾಟಕ್ಕಿದೆ

ಬಾಲಾಜಿ ನಗರ
ಲಲಿತಾದ್ರಿಪುರ

ಸಂಪೂರ್ಣ ಅಭಿವೃದ್ಧಿ ಹೊಂದಿದೆ & ರೇರಾ ರಿಜಿಸ್ಟರ್ಡ್ ನೋಂದಣಿಗೆ ಸಿದ್ಧವಿದೆ

ಸಂಪರ್ಕಿಸಿ: **97397 39791 / 63627 69242**



